ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 50

ಡಿಸೆಂಬರ್ 15, 2013 ಪುಟ 16 ರೂ. 10/-






ಕಪ್ಪು ಮುತ್ತು ನೆಲ್ಸನ್ ಮಂಡೇಲ

ಚಳಿಗಾಳಿ ಎದುರಿಸಿ ಗೆದ್ದ ಅಕ್ಷರ ದಾಸೋಹ ನೌಕರರ ಹೋರಾಟ



ಎರಡು ದಶಕಗಳ ನಂತರವೂ ಜೀವಂತವಾಗಿದೆ ಕೋಮುವಾದದ ಸವಾಲು





ತೇಜ್‌ಪಾಲ್ ಲೈಂಗಿಕ ಹಗರಣ

ಸಾಮಾಜಿಕ ಹಾಗೂ ಶಿಕ್ಷಣ ವ್ಯವಸ್ಥೆಯ ಅಕ್ರಮ ಕೂಟ– ಹೊಸ ಚಿಂತನೆ, ಚಳುವಳಿಯ ಸವಾಲು

ಆಟೋ ಭರದಿಂದ ಸಾಗುತ್ತಿತ್ತು. ಮುಂದೆ ಕೂಡು ರಸ್ತೆಗಳ ಬಳಿ ವಾಹನಗಳ ಸಾಗರ. ನಮ್ಮ ವಾಹನವೂ ತೆವಳತೊಡಗಿತು. ನನ್ನ ಎಂದಿನ ರೂಢಿಯಂತೆ ಆಟೋ ಚಾಲಕನ ಜೊತೆ ಮಾತಿಗಾರಂಭಿಸಿದೆ.

ಆತನ ಹೆಸರನ್ನು, ವಿಳಾಸವನ್ನು ಪ್ರಯಾಣಿಕರ ಮುಂದೆ ತಗುಲಿಸಿರುವ 'ಡಿಸ್‌ಪ್ಲೇ ಕಾರ್ಡ್'ನಲ್ಲಿ ನೋಡಿದ್ದೆ .ಆದ್ದರಿಂದ

"ನಿಮ್ಮ ಸ್ವಂತ ಊರು ಯಾವುದ್ರೀ" ಎಂದು ಕೇಳಿದೆ.

ಚಾಲಕ ತನ್ನ ಎದುರಿದ್ದ ಕನ್ನಡಿಯಲ್ಲಿ ನನ್ನ ಮುಖವನ್ನು ನಿಟ್ಟಿಸಿ ನೋಡಿ

"ನಾಗಮಂಗಲ ಸಾರ್" ಎಂದ.

"ನಾಗಮಂಗಲದಲ್ಲಿ ಯಾವೂರು"

"ಬೆಳ್ಳೂರು ಕ್ರಾಸ್ ಹತ್ತಿರ ಸಾರ್"

ನಿಮ್ಮ ತಂದೆ ತಾಯಿ ಏನು ಮಾಡುತ್ತಾರೆ, ಎಷ್ಟು ಜನ ಅಣ್ಣ ತಮ್ಮಂದಿರು, ಅಕ್ಕ, ತಂಗಿಯರು, ಎಷ್ಟು ಭೂಮಿ ಇದೆ, ಏನು ಬೆಳೆಯುತ್ತಾರೆ, ಹೀಗೆ ನನ್ನ ಪ್ರಶ್ನಾವಳಿ ಮುಂದುವರೆಯಿತು.

"ಎಲ್ಲಿಯವರೆಗೆ ಓದಿದ್ದೀಯ"

"ಹೈಸ್ಕೂಲು ಸಾರ್"

"ಅಂದರೆ" "ಎಸೆಸ್ಸೆಲ್ಸಿ ಫೇಲು ಸಾರ್" " ಯಾವ ಸಬ್ಜೆಕ್ಟ್ ನಲ್ಲಿ", " ಇಂಗ್ಲಿಷು , ಗಣಿತ ಸಾರ್" ಬೆಂಗಳೂರಿಗೆ ಬಂದು ಎಷ್ಟು ವರ್ಷವಾಯಿತು" "15 ವರ್ಷ ಸಾರ್" "ಆಗಲಿಂದಲೂ ಆಟೋ ಓಡಿಸುತ್ತಿದ್ದೀಯ" "ಇಲ್ಲ ಸಾರ್ ಏಳೆಂಟು ವರ್ಷ ಏನೇನೋ ಕೆಲಸಗಳನ್ನು ಮಾಡಿದೆ"

" ಏನೇನು ಕೆಲಸ ಮಾಡುತ್ತಿದ್ದೆಯಪ್ಪ"

ಬಾರ್‌ಗಳಲ್ಲಿ ಸರ್ವರ್ ಆಗಿ ಮಾಡಿದೆ, ವರ್ಕ್‌ಶಾಪ್‌ಗಳಲ್ಲಿ ಮಾಡಿದೆ, ಒಂದು ಸಣ್ಣ ಫ್ಯಾಕ್ಟರಿಯಲ್ಲಿ ಮಾಡಿದೆ. "ಅದನ್ನು ಯಾ–ಕೆ ಬಿಟ್ಟೆ" "ಸಂಬಳ ಬಹಳ ಕಡಿಮೆ ಸಾರ್, ಜೊತೆಗೆ ಎಂತಹ ತಾಪತ್ರಯ ಅಂದರೂ ರಜ ಕೊಡುತ್ತಿರಲಿಲ್ಲ.. ಬೈಗುಳಗಳು ಬೇರೆ. ಅದ–ಕ್ಕೆ ಬಿಟ್ಟು ಬಾಡಿಗೆಗೆ ಆಟೋ ಓಡಿಸಲು ಶುರು ಮಾಡಿದೆ. ಈಗ ಸಾಲ ಮಾಡಿ ಸ್ವಂತ ಆಟೋ ಕೊಂಡಿದ್ದೇನೆ"

ಹೀಗೆ ಅವರ ಬೆಂಗಳೂರಿನ ಜೀವನದ ಬಗ್ಗೆ, ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಪ್ರಶ್ನೆಗಳು ಮುಂದುವರೆಯುತ್ತದೆ. ಮಕ್ಕಳನ್ನು ಒಂದು ಖಾಸಗಿ ಇಂಗ್ಲಿಷ್ ಕಾನ್ವೆಂಟ್‌ಗೆ ಸೇರಿಸಿದ್ದಾರೆ. ದುಬಾರಿ ಫೀಸು ತೆರುತ್ತಿದ್ದಾರೆ.

ಹೀಗೆ ಕನಿಷ್ಠ 4,500 ಚಾಲಕರ ವರ್ಕ್ ಶಾಪ್, ಕಟ್ಟಡ ಕಾರ್ಮಿಕರ ಜೀವನದ ವಿವರಗಳನ್ನು ಕೇಳಿದ್ದೇನೆ.

ಅಗ್ಗದ ಕೂಲಿಕಾರರನ್ನು ಸರಬರಾಜು ಮಾಡುವ ಪ್ರದೇಶಗಳು.

ಬಹಳಷ್ಟು ಜನ ಬೆಂಗಳೂರು ಸುತ್ತ ಮುತ್ತಲ ಜಿಲ್ಲೆಗಳ ಅದರಲ್ಲಿಯೂ ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಅಮೃತೂರು–ಹುಲಿಯೂರು ದುರ್ಗ ಪ್ರದೇಶದ 20–30 ಹಳ್ಳಿಗಳು, ಮತ್ತೆ ಅಲ್ಲಿಗೆ ಕೆಲ ಕಿ.ಮೀ. ದೂರದ ಅಂದರೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಕ್ರಾಸ್, ಯಡಿಯೂರು ಬಳಿಯ 20–30 ಹಳ್ಳಿಗಳಿಂದ ಬಂದವರು. ಆ ಊರುಗಳಿಂದ ಬಂದವರು ಮೇಲಿನ ಚಾಲಕ ಹೇಳಿದಂತೆ ಬಾರ್‌ಗಳು, ಅಂಗಡಿಗಳು, ಸಣ್ಣ ಹೋಟೆಲ್‌ಗಳು, ವರ್ಕ್‌ಶಾಪ್‌ಗಳು, ಸಣ್ಣ ಫ್ಯಾಕ್ಟರಿಗಳು ಮಾತ್ರವಲ್ಲ ಕಟ್ಟಡ ಕಾರ್ಮಿಕರಾಗಿ, ತರಕಾರಿ ವ್ಯಾಪಾರ, ಬೀದಿಬದಿ ವ್ಯಾಪಾರಿಗಳಾಗಿ, ಹಮಾಲಿ ಕಾರ್ಮಿಕರಾಗಿ, ಇಂತಹ ವಿವಿಧ ಸಣ್ಣ ಪುಟ್ಟ ಕೆಲಸ ಮಾಡುತ್ತಿದ್ದಾರೆ. ನಾಗಮಂಗಲಕ್ಕಂತೂ ದಿನವೂ ಹತ್ತಾರು ಖಾಸಗಿ ಬಸ್‌ಗಳು ಓಡಾಡುತ್ತಿವೆಯಂತೆ.

ಹಾಗೇ ಎಲ್ಲರಿಗೂ ಗೊತ್ತಿರುವಂತೆ ಉಡುಪಿ–ಮಂಗಳೂರು ಸುತ್ತಲಿನ ಹಳ್ಳಿಗಳು ಬೆಂಗಳೂರಿನ




ಉಡುಪಿ "ಬ್ರಾಹ್ಮಣ"ರ ಹೋಟೆಲುಗಳಿಗೆ ಎಲ್ಲಾ ಜಾತಿಯಿಂದಲೂ ಸಪ್ಲೈಯರು, ಅಡಿಗೆ ಭಟ್ಟರುಗಳನ್ನು ಸಪ್ಲೈ ಮಾಡುವ ಕೇಂದ್ರಗಳಾಗಿವೆ. ಅದೇ ರೀತಿ ಕರ್ನಾಟಕದ ವಿವಿಧ " ಹಿಂದುಳಿದ" ಜಿಲ್ಲೆಗಳು–ಗುಲ್ಬರ್ಗ, ರಾಯಚೂರು ಮೊದಲಾದ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳು, ಚಾಮರಾಜ ನಗರ, ಚಿಕ್ಕಬಳ್ಳಾಪುರ ಮೊದಲಾದ ಜಿಲ್ಲೆಗಳು ಬೆಂಗಳೂರಿಗೆ ಅಗ್ಗದ ಕೂಲಿಯ ಕೂಲಿಕಾರರನ್ನು–ಕಟ್ಟಡ ಕೆಲಸ, ಮನೆಗೆಲಸ, ಮತ್ತಿತರ ಕೆಲಸಕ್ಕೆ ಒದಗಿಸುತ್ತಿವೆ. ಈ ಹಿಂದುಳಿದ ಜಿಲ್ಲೆಗಳು ಶಿಕ್ಷಣದಲ್ಲಿಯೂ ಹಿಂದುಳಿದ ಜಿಲ್ಲೆಗಳೂ ಹೌದು. ಇವುಗಳ ಜೊತೆಗೆ ಬೆಂಗಳೂರಿನ ಎಸ್ಸೆಸ್ಸೆಲ್ಸಿ ದಾಟಲಾಗದ ಯುವಕರು ಅಗ್ಗದ ಕೂಲಿಕಾರರ ಮತ್ತೊಂದು ಸರಬರಾಜು ಮೂಲ.

ಈ ರೀತಿ ಸರಬರಾಜಾಗುವ ಅಗ್ಗದ ಕೂಲಿಕಾರರ ಜಾತಿ ರಚನೆಯನ್ನು, ಆಸ್ತಿ/ ಸಂಪತ್ತುಗಳ ಸ್ಥಿತಿಯನ್ನು ಅಂದರೆ ಅವರ ಬಡತನದ ಕಾರಣವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದೊಂದು ವಿಲಕ್ಷಣ ಮೀಸಲಾತಿ ಎಂದೆನಿಸದೆ ಇರದು. ನಮ್ಮ ಸಾಮಾಜಿಕ ವ್ಯವಸ್ಥೆ + ಶಿಕ್ಷಣ ವ್ಯವಸ್ಥೆ ಒಂದರೊಡನೊಂದು ಸೇರಿ ಒಂದು ಒಳಸಂಚು ಮಾಡಿಕೊಂಡು ಈ ಜನ ಸಮುದಾಯಗಳಿಗೆ ಈ ಅವಸ್ಥೆಯನ್ನು ತಂದೊಡ್ಡಿದ್ದಾರೆ ಎಂದೆನಿಸುವಂತಿದೆ. ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುವಾಗ ಇದು ಯಾರ ಕರ್ನಾಟಕ ಯಾರ ಉತ್ಸವ ಎಂಬ ಪ್ರಶ್ನೆ ಮೂಡದಿರದು. ಬೆಂಗಳೂರಿನ ಬೀದಿ ಬೀದಿಗಳಲ್ಲಿ ಈ ರಾಜ್ಯೋತ್ಸವವನ್ನು ಆಚರಿಸುವುದರಲ್ಲಿ ತೊಡಗಿದ ಯುವ ಪಡೆಯನ್ನು ಗಮನಿಸಿದಾಗ ನಮ್ಮ ಶಿಕ್ಷಣ ವ್ಯವಸ್ಥೆ ಆಚೆಗೆಸೆದ ಈ ಯುವ ಸಮುದಾಯದ ಪರಿಸ್ಥಿತಿ ಕರುಳು ಹಿಂಡುವಂತಹುದು.

ಗುಮಾಸ್ತರುಗಳನ್ನು ತಯಾರಿಸುವ ಬ್ರಿಟಿಷ್ ಉದ್ದೇಶ

ಅಂದು ಬ್ರಿಟಿಷರು ಈ ಆಧುನಿಕ ಶಿಕ್ಷಣ ಪದ್ಧತಿಯನ್ನು ರೂಪಿಸಿದಾಗ ಅವರಿಗೆ ಸ್ಪಷ್ಟ ರಾಜಕಿಯ ಹಾಗೂ ಆರ್ಥಿಕ ಉದ್ದೇಶಗಳಿದ್ದುವು. ಇಂಗ್ಲಿಷ್ ಕಲಿತು ಇಂಗ್ಲಿಷರಿಗೆ ಜಯ ಜಯವೆನ್ನುವ ಒಂದು ವರ್ಗವನ್ನು ಆ ಮೂಲಕ ಅವರ ಆಡಳಿತಕ್ಕೆ ಒಂದು ತಳಪಾಯವನ್ನು ಹಾಕುವ ಕೆಲಸ ಅದಾಗಿ–ತ್ತು. ಮತ್ತೊಂದು ಅವರ ಆಡಳಿತ ಯಂತ್ರ–ಕ್ಕೆ ಇಲ್ಲದ ಕಾಲುಗಳನ್ನು ಸೃಷ್ಟಿಸಿಕೊಳ್ಳುವ ಗುರಿ. ಕೆಳ ಮಟ್ಟದ ಕಾರಕೂನ, ಗುಮಾಸ್ತರುಗಳನ್ನು ಬ್ರಿಟನ್ನಿನಿಂದಲೇ ಆಮದು ಮಾಡಿಕೊಳ್ಳುವ, ಅವರಿಗೆ ದುಬಾರಿ ಸಂಬಳ ಕೊಡುವ ತಾಪತ್ರಯದಿಂದ ಪಾರಾಗುವ ಉದ್ದೇಶ. ಹೇಳಿ ಕೇಳಿ ಭಾರತವನ್ನು ಆಕ್ರಮಿಸಿಕೊಂಡು ಆಡಳಿತ ನಡೆಸಿದ್ದು ಒಂದು ಕಂಪನಿ– ಈಸ್ಟ್ ಇಂಡಿ–ಯಾ ಕಂಪನಿಯೆಂಬ ಲಾಭ ಕೋರರ ಕೂಟ. ಇಂತಹ ಕಂಪನಿ ಶಿಕ್ಷಣಕ್ಕೆ ಗಮನ ಕೊಟ್ಟು ಕಾಲೇಜುಗಳನ್ನು, ವಿಶ್ವ ವಿದ್ಯಾಲಯಗಳನ್ನು ಆರಂಭಿಸುತ್ತದೆ ಎಂದರೆ ಅದಕ್ಕೆ ಯಾವುದೋ ಲಾಭದ ಲೆಕ್ಕಾಚಾರ ಇರದೆ ಹೇಗೆ ಸಾಧ್ಯ. ಆಗ





ಬ್ರಿಟನ್ನಿನಲ್ಲಿ ಹಾಗೂ ಇಂಡಿಯಾದ ಬ್ರಿಟಿಷ್ ಆಡಳಿತಗಾರರ ನಡುವೆ ನಡೆದ ಚರ್ಚೆಯನ್ನು ಅಧ್ಯಯನ ಮಾಡಿದರೆ ಅವರ ಶೈಕ್ಷಣಿಕ ಒಳಸಂಚುಗಳ ಸ್ವರೂಪ ದರ್ಶನವಾಗುತ್ತದೆ. ಲಾರ್ಡ್ ಮೆಕಾಲೆ ಕುಂಪಣಿ (ಈಸ್ಟ್ ಇಂಡಿಯಾ ಕಂಪನಿ) ಸರ್ಕಾರದ ಮುಂದಿಟ್ಟ ಪ್ರಸ್ತಾವಗಳು, ವುಡ್ಸ್ ಡಿಸ್ಪಾಚ್ ಎಂಬ ಅಂದಿನ ಶಿಕ್ಷಣ ನೀತಿ ಘೋಷಣೆ ಇತ್ಯಾದಿಗಳನ್ನು ನೋಡಿದರೆ ಇವು ಸ್ಪಷ್ಟವಾಗುತ್ತವೆ.

ಹೀಗಾಗಿಯೇ ಈ ಶಿಕ್ಷಣ ಪ... ಕಾರಕೂನರನ್ನು, ಗುಮಾಸ್ತರನ್ನು ತಯಾರಿಸ... ಕಾರಖಾನೆಗಳು ಎಂದು ಭಾರತದ ಸ್ವಾತಂ... ಹೋರಾಟದ ಸೇನಾನಿಗಳು ಜರೆದರು. ಇ... ಪರ್ಯಾಯವಾಗಿ 'ರಾಷ್ಟ್ರೀಯ ಶಿಕ್ಷಣ' ಎ... ಘೋಷಣೆ ಹಾಕಿದರು. ಗಾಂಧೀಜಿಯ... ವಾರ್ಧಾ ಶಿಕ್ಷಣ ಪದ್ಧತಿ, ರವೀಂದ್ರನಾ... ಟಾಗೋರರ ವಿಶ್ವ ಭಾರತಿ, ಶಾಂತಿನಿಕೇತನಗ... ರೂಪುಗೊಂಡಿದ್ದೂ ರಾಷ್ಟ್ರೀಯ ಪರ್ಯಾಯ... ರೂಪವಾಗಿಯೇ. ಆದರೆ ಸ್ವತಂತ್ರ ಭಾರತ ... ಎಲ್ಲಾ ಪರ್ಯಾಯ ಮಾದರಿಗಳನ್ನು–ಅದ... ಆಟದ ಮೂಲಕ, ಪ್ರಕೃತಿಯ ಒಡನಾ... ಮೂಲಕ, ಕೆಲಸದ ಮೂಲಕ ಕಲಿಕೆ ಎ... ಅತ್ಯುತ್ತಮ ಶಿಕ್ಷಣ ವಿಧಾನಗಳನ್ನು ಅಲ... ಬ್ರಿಟಿಷ್ ಶಿಕ್ಷಣವನ್ನೇ ಮುಂದುವರೆಸಿ... ಯಾಕಾಗಿ? ಬ್ರಿಟಿಷರಿಗೆ ಕಾರಕೂನ/ಗುಮಾಸ್ತರ... ತಯಾರಿಸುವ, ತಮ್ಮ ಪರಕೀ... ಆಡಳಿತಕ್ಕೆ ಜಯ ಜಯವೆನ್ನು... ಶಿಕ್ಷಣ ಪದ್ಧತಿ ಬೇಕಿತ್ತು. ಅದರಿಂ... ದೇಶ ಭಾಷೆಗಳನ್ನು ಅಲಕ್ಷಿಸಿ ಇಂಗ್ಲಿ... ಶಿಕ್ಷಣವನ್ನು ಹೇರಿದರು. ಆದರೆ ಸ್ವತಂ... ಭಾರತದ ಆಡಳಿತಗಾರರಿಗೆ ಕೂಡ ... ಕುಂಪಣಿ ಸರ್ಕಾರಕೆ ಇದ್ದ ಗುರಿಗ... ಇದ್ದುವೇ?

ಶೇ. 75 ಭಾಗದ ಜನರನ್ನು ಹೊ... ಹಾಕುವ ಶಿಕ್ಷಣ

ಇಂಗ್ಲಿಷ್ ಭಾಷೆಯನ್ನು ಹಿರಿ... ಪ್ರಾಥಮಿಕ ಹಾಗೂ ಪ್ರೌಢ ಶಾ... ಹಂತದಲ್ಲಿ ಕಡ್ಡಾಯ ಭಾಷೆಯಾ... ಸೇರಿಸುವ ಮೂಲಕ ಲಕ್ಷಾಂತ... ಯುವಕರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿಯೆ... ಶಾಲೆಯಿಂದ ಹೊರಹಾಕಲ್ಪಟ್ಟಿದ್ದಾ... ಐದನೆಯ ತರಗತಿಯಿಂದಲೇ... ಅನೇಕರು ಶಾಲೆಗಳಿಂ... ಹೊರಗುಳಿಯುವುದರ... ಇಂಗ್ಲಿಷ್ ಅನೇ... ಕಾರಣಗಳಲ್ಲೊಂದು. ದುಡಿಮೆಗೆ ಅದ... ರಿಂದ ಬಂದ ಉತ್ತಮ ಮತ್ತು ಅತ್ಯುಪಯು... ಜ್ಞಾನಕ್ಕೆ ಪ್ರಾಮುಖ್ಯತೆ ನೀಡದ ಶಿಕ್ಷಣ ವ್ಯವಸ... ಪ್ರಕೃತಿಗೆ ದೂರವಾದ ಹಾಗೂ ಬಾಯಿಪಾ... ಮಾಡುವುದನ್ನು ಉತ್ತೇಜಿಸುವ ಶಿಕ್ಷ... ಚಿಂತನೆ, ಸಂಶ್ಲೇಷಣೆ–ವಿಶ್ಲೇಷಣೆ... ವಿಧಾನಗಳನ್ನು ಮನಗೂಡಿಸದ ... ಬ್ರಿಟಿಷ್ ಶಿಕ್ಷಣ ಪದ್ಧತಿಯ ಮುಂದುವ... ಸ್ವತಂತ್ರ ಭಾರತದ ಆಡಳಿತಗಾರರಿ... ಕೂಡ ಕಾರಕೂನರನ್ನು ಉತ್ಪಾದಿಸು... ಶಿಕ್ಷಣವೇ ಬೇಕಾಗಿತ್ತೆ ಎಂಬ ಪ್ರಶ್ನೆಯನ... ಎತ್ತುತ್ತದೆ. ಬ್ರಿಟಿಷರಿಗೆ ಭಾರತದ... ಕೈಗಾರಿಕೆಗಳ ಬೆಳವಣಿಗೆ ಬೇಕಾಗಿರಲಿ... ಆದ್ದರಿಂದ ಹೆಚ್ಚು ಜನರನ್ನು ಶಿಕ್ಷಣದ... ಒಳಗೊಳಿಸುವುದು ಬೇಕಿರಲಿಲ್ಲ. ಆದ್ದ... ರಿಂದ ಅವರು ಪ್ರಾಥಮಿಕ ಶಿಕ್ಷಣ... ಹಣವನ್ನೇ ಹೂಡಲಿಲ್ಲ ಎಂದರು... ತಪ್ಪಾಗಲಾರದು. ಹಾಗೆಯೆ... ಅವರಿಗೆ ಭಾರತೀಯರು ವಿಜ್ಞಾನದ... ಇಂಜನಿಯರಿಂಗ್ ಶಿಕ್ಷಣ ಪಡೆಯುವುದ... ಬೇಕಾಗಿರಲಿಲ್ಲ. ಆದ್ದರಿಂದ ಅವರು ಆರ್ಟ್ಸ... ಎಂಬ ಸಾಹಿತ್ಯ ಮತ್ತು ಮಾನವಿಕ ವಿಷಯಗಳಿ... ಒತ್ತು ಕೊಟ್ಟರು. ಸ್ವತಂತ್ರ ಭಾರತದಲ್ಲಿ ಆರಂಭ... ದಿನಗಳಲ್ಲಿ ಕೆಲ ವಿಜ್ಞಾನದ, ಇಂಜನಿಯರಿಂಗ... ಹಾಗೂ ವೈದ್ಯಕೀಯದ ಕಾಲೇಜುಗ... ಆರಂಭವಾದರೂ ಪ್ರಾಧಾನ್ಯತೆ ಈ ಆರ್ಟ್ಸ್ ಎಂ... ವಿಭಾಗಕ್ಕೆ ಸೀಮಿತವಾಗಿತ್ತು.

ಪುಟ 4 ...

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಮೋದಿ ಭೂತವನ್ನು ಮುಂದಿಟ್ಟು ಕಾಂಗ್ರೆಸ್ ವೈಫಲ್ಯವನ್ನು ಬೆಂಬಲಿಸುವ ಬುದ್ಧಿಜೀವಿಗಳಿಗೆ ಏನೆನ್ನಬೇಕು?

ಮೋದಿಯಿಂದ ದೇಶಕ್ಕೆ ಅಪಾಯವಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಮೋದಿ ದೇಶದ ಪ್ರಧಾನಿ ಆಗುವುದೆಂದರೆ ಗುಜರಾತ್ ಪ್ರಯೋಗವನ್ನು ದೇಶಕ್ಕೇ ವಿಸ್ತರಿಸುವುದೆಂದರ್ಥ. ಗುಜರಾತ್ ನರಮೇಧದ ಬೆದರಿಕೆಯನ್ನೊಡ್ಡಿ ದೇಶದೆಲ್ಲೆಡೆ ಧಾರ್ಮಿಕ ಅಲ್ಪ ಸಂಖ್ಯಾತರ ಧ್ವನಿಯನ್ನು ಅಡಗಿಸುದೆಂದರ್ಥ. ನಕಲಿ ಎನ್‌ಕೌಂಟರ್‌ಗಳ ಮೂಲಕ ಅಮಾಯಕರ ಕಗ್ಗೊಲೆ ಮಾಡುವುದೆಂದರ್ಥ. ಕಾರ್ಪೋರೇಟ್ ಲೂಟಿಗೆ ದೇಶವನ್ನೇ ತೆರೆದಿಡುವುದೆಂದರ್ಥ. ಗುಜರಾತ್ ಹತ್ಯಾಕಾಂಡ ಮತ್ತು ನಕಲಿ ಎನ್‌ಕೌಂಟರ್‌ಗಳಿಗೆ ಸಂಬಂಧಪಟ್ಟಂತೆ ಇಷ್ಟೊತ್ತಿಗೆ ಮೋದಿ ಜೈಲಿನಲ್ಲಿ ಇರಬೇಕಾಗಿತ್ತು. ಆದರೆ ಮೋದಿ ಇದುವರೆಗೆ ಕಾನೂನಿನಿಂದ ಪಾರಾಗಿ ಈ ದೇಶದ ಪ್ರಧಾನಿ ಆಗುವ ಕನಸು ಕಾಣುತ್ತಿರುವುದು ದೇಶಕ್ಕೆ ಎದುರಾಗಿರುವ ದುರಂತ. ಈ ದುರಂತವನ್ನು ತಡೆಯಲು ದೇಶಪ್ರೇಮಿಗಳೆಲ್ಲರೂ ಒಂದೂಗೂಡಿ ಕಾರ್ಯೋನ್ಮುಖರಾಗುವುದು ಅಗತ್ಯವಾಗಿದೆ.

ಆದರೆ, ಮೋದಿಯನ್ನು ಬೆಳೆಸುತ್ತಿರುವವರು ಯಾರು? ಮೋದಿಯನ್ನು ಬೆಳೆಸುತ್ತಿರುವುದು, ಬಿಂಬಿಸುತ್ತಿರುವುದು ಬಿಜೆಪಿ. ಬಿಜೆಪಿಯ ಈ ಬೆಳವಣಿಗೆಗೆ ಕಾಂಗ್ರೆಸ್ ಪಕ್ಷವೇ ಕಾರಣ ಎಂಬುದನ್ನು ಅನೇಕ ನಮ್ಮ ಬುದ್ಧಿಜೀವಿಗಳು ಗ್ರಹಿಸದಿರುವುದು ಇನ್ನೊಂದು ದೊಡ್ಡ ದುರಂತವಾಗಿದೆ. ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಾಗಲಿ, ರಾಜ್ಯದಲ್ಲಾಗಲಿ, ಜನರ ಪ್ರಶ್ನೆಗಳನ್ನು ಇತ್ಯರ್ಥಪಡಿಸುವಲ್ಲಿ ಪದೇ ಪದೇ ವಿಫಲವಾಗುತ್ತಿರುವುದರಿಂದ, ಜನತೆಯ ಅತೃಪ್ತಿಯ ಲಾಭ ಪಡೆದು ಫ್ಯಾಸಿಸ್ಟ್ ಬಿಜೆಪಿ ಬೆಳೆಯುತ್ತಿದೆ. ಉತ್ತರದ 5 ರಾಜ್ಯಗಳಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಜನರ ಒಲವು ವ್ಯಕ್ತವಾಗುತ್ತಿದ್ದರೆ ಅದಕ್ಕೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ವೈಫಲ್ಯಗಳೇ ಕಾರಣ.

ಕರ್ನಾಟಕದಲ್ಲಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ, ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ ಕೆಲವು ಬುದ್ಧಿಜೀವಿಗಳು ಇನ್ನೂ ತಮ್ಮ ದಂತಗೋಪುರಗಳಿಂದ ಹೊರಗೆ ಬಾರದಿರುವುದು ಒಂದು ವಿಪರ್ಯಾಸ. ಸಿದ್ದರಾಮಯ್ಯ ಸರ್ಕಾರದ ತಪ್ಪು ನಡೆಗಳನ್ನು ಅವರು ಪ್ರಶ್ನಿಸುತ್ತಿಲ್ಲ. ಸರ್ಕಾರವನ್ನು ಎಚ್ಚರಿಸಲೂ ಅವರು ಮುಂದಾಗುತ್ತಿಲ್ಲ. ಸರ್ಕಾರವನ್ನು ಟೀಕಿಸುವುದಾಗಲಿ, ಜನಪರ ಆಡಳಿತಕ್ಕಾಗಿ ಒತ್ತಾಯಿಸುವುದಾಗಲಿ ಮಾಡಿದರೆ ಬಿಜೆಪಿಗೆ ಅದರಿಂದ ಲಾಭವಾಗುತ್ತದೆ ಎಂಬುದು ಅವರ ವಾದಸರಣಿ. ಮುಂಬರುವ ಲೋಕಸಭಾ ಚುನಾವಣೆ ಮುಗಿಯುವವರೆಗೂ ಅವರು ಸಿದ್ದರಾಮಯ್ಯ ಸರ್ಕಾರವನ್ನು ಟೀಕೆಗೆ ಒಳಪಡಿಸದಿರಲು ನಿರ್ಧರಿಸಿದ್ದಾರೆ!


ಕಾರ್ಮಿಕರ ಮುಷ್ಕರದ ಹಕ್ಕನ್ನು ಮುರಿಯಲು 'ಎಸ್ಮಾ' ಅಂತಹ ಕರಾಳ ಕಾನೂನನ್ನು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದರೆ ಯಾರಿಗೆ ಲಾಭವಾಗುತ್ತದೆ? ಕಬ್ಬಿಗೆ ಯೋಗ್ಯ ಬೆಲೆ ದೊರಕಿಸಲು ಸರ್ಕಾರ ವಿಫಲವಾದರೆ ಬಿಜೆಪಿಗೆ ಅಲ್ವಾ ಲಾಭವಾಗುವುದು? ಅಕ್ರಮ ಮನೆ ನಿವೇಶನ ಸಕ್ರಮ ಹಾಗೂ ಬಗರ್ ಹುಕುಂ ಸಾಗುವಳಿ ಸಕ್ರಮ ಪ್ರಶ್ನೆಯನ್ನು ಬಡವರ ಪರವಾಗಿ ಇತ್ಯರ್ಥ ಮಾಡಲು ಸಿದ್ದರಾಮಯ್ಯ ಸರ್ಕಾರ ವಿಫಲವಾದರೆ ಅದರ ಲಾಭ ಬಿಜೆಪಿಗೆ ಆಗದಿರುತ್ತಾ? ಡಿಸೆಂಬರ್ 2 ರಿಂದ ಫ್ರೀಡಂ ಪಾರ್ಕ್‌ನಲ್ಲಿ ಹಗಲು ರಾತ್ರಿ ಧರಣಿ ನಡೆಸುತ್ತಿರುವ ಅಕ್ಷರ ದಾಸೋಹ ಮಹಿಳೆಯರಿಗೆ ಗೌರವಯುತವಾದ ಗೌರವಧನ ನೀಡಲು ಸರ್ಕಾರ ನಿರಾಕರಿಸಿದರೆ ಅದು ಕಾಂಗ್ರೆಸಿಗೆ ಹೇಗೆ ಪ್ರಯೋಜನಕಾರಿಯಾಗಲು ಸಾಧ್ಯ?

ನರಹಂತಕ ಮೋದಿಯ ಮುನ್ನಡೆಯನ್ನು ತಡೆಯಬೇಕು ಎಂಧು ಬಯಸುವ ನಮ್ಮ ಬುದ್ಧಿಜೀವಿಗಳು ತಮ್ಮ ನಿಲುಮೆಯನ್ನು ಸ್ವವಿಮರ್ಶೆಗೆ ಒಳಪಡಿಸುವುದು ಅವರಿಗೇ ಶ್ರೇಯಸ್ಕರವಾಗಿದೆ. ಕಾಂಗ್ರೆಸ್ ಹೆಚ್ಚೆಚ್ಚು ತಪ್ಪುಗಳನ್ನು ಮಾಡಿದಷ್ಟು ಅದು ಬಿಜೆಪಿಗೆ ಸಹಾಯವಾಗಲಿದೆ. ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಜನರ ನಿರೀಕ್ಷೆಗಳನ್ನು ಪೂರ್ಣಗೊಳಿಸುವಂತೆ, ಜನರ ತುರ್ತು ಸಮಸ್ಯೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಬುದ್ದಿ ಹೇಳಲು ತಾಕತ್ತಿದ್ದರೆ ನಮ್ಮ ಬುದ್ದಿ ಜೀವಿಗಳು ಅದನ್ನು ಮಾಡಬೇಕು.


ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಆರ್ಥಿಕ ಧೋರಣೆಗಳ ವಿಷಯದಲ್ಲಿ ಒಂದೇ ನಾಣ್ಯದ ಎರಡು ಮುಖಗಳೆಂದೂ ಅವುಗಳ ನಡುವೆ ಆಯ್ಕೆಯೇ ಸಾಧ್ಯವಿಲ್ಲವೆಂದು ಗೊತ್ತಿದ್ದರೂ ಕೆಲವು ಬುದ್ಧಿಜೀವಿಗಳು ತಮ್ಮ ತಿಳುವಳಿಕೆಗೆ ವಿರುದ್ಧವಾಗಿ ವರ್ತಿಸುತ್ತಿರುವುದು ಅನೇಕ ರೀತಿಯ ಸಂದೇಹಗಳಿಗೆ ಕಾರಣವಾಗುತ್ತಿದೆ. ಹಿಂದುತ್ವದ ವಿಚಾರದಲ್ಲಿಯೂ ಬಿಜೆಪಿ ಕಡು ಕೋಮುವಾದಿಯಾಗಿದ್ದರೆ ಕಾಂಗ್ರೆಸ್ ಮೃದು ಕೋಮುವಾದಿಯಾಗಿದೆ. ಸಾಮಾಜಿಕ ಹೊಣೆಯನ್ನು ಹೊತ್ತಿರುವ ನಮ್ಮ ಪ್ರಗತಿಪರ ಸಾಹಿತಿ ಬುದ್ಧಿಜೀವಿಗಳು ಕಾಂಗ್ರೆಸಿಗೂ ಬಿಜೆಪಿಗೂ ಭಿನ್ನವಾದ ಪರ್ಯಾಯ ಧೋರಣೆಗಳನ್ನು ಪ್ರತಿಪಾದಿಸುವ ರಾಜಕೀಯ ಶಕ್ತಿಗಳನ್ನು ಬೆಂಬಲಿಸಿ ಬೆಳೆಸಲು ಮುಂದಾಗಬೇಕು. ಪರ್ಯಾಯ ರಾಜಕೀಯ ಶಕ್ತಿಯ ಬೆಳವಣಿಗೆ ನಿಧಾನವಾಗಿ ನಡೆದರೂ ಅದರಲ್ಲೇ ದೇಶದ ಹಿತ ಅಡಕವಾಗಿದೆ ಎಂಬುದನ್ನು ಎಲ್ಲರೂ ಅರಿಯಬೇಕಾಗಿದೆ. ■

ಸಿದ್ಧು ಸರಕಾರದ ಕರಾಳ ಕಾಯಿದೆಗಳು

ಕರ್ನಾಟಕ ವಿಧಾನಸಭೆಯ ಚಳಿಗಾಲದ ಅಧಿವೇಶನ ಇನ್ನೇನು ಈಗ ಬೆಳಗಾವಿಯಲ್ಲಿ ಅಂತ್ಯಗೊಂಡಿದೆ. (ಡಿ.6ರಂದು). ಹತ್ತುದಿನಗಳ ಈ ಅಧಿವೇಶನದಲ್ಲಿ ನಿಜಕ್ಕೂ ಜನತೆಯ ಹಿತಗಳನ್ನು ಕಾಪಾಡುವ, ಜ್ವಲಂತ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಎಷ್ಟು ದಿನಗಳನ್ನು ವ್ಯಯಿಸಲಾಯಿತು ಎಂಬ ಪ್ರಶ್ನೆಯನ್ನು ಎಂದಿನಂತೆ ಇಂದೂ ಹಾಕಿಕೊಳ್ಳಬೇಕಿದೆ. ಸದ್ದು ಗದ್ದಲದೊಂದಿಗೆ ಆರಂಭಗೊಂಡ ಅಧಿವೇಶನ ರೈತ, ಕಾರ್ಮಿಕರ ಪ್ರತಿಭಟನೆ, ಕಬ್ಬು ಬೆಳೆಗಾರ ರೈತನ ಆತ್ಮಹತ್ಯೆ ಮುಂತಾದ ಹಲವು ತಲ್ಲಣಗಳಿಗೆ ಸಾಕ್ಷಿಯಾಯಿತು. ಕಬ್ಬು ಬೆಳೆಗಾರರ ಪ್ರಶ್ನೆಗಳೇನೂ ಇತ್ಯರ್ಥವಾಗಲಿಲ್ಲ. ಟನ್‌ಗೆ 2500+ಸರಕಾರದ ಬೆಂಬಲ ಬೆಲೆ 150=2650 ಕೊಡಬೇಕೆಂದು ಸರಕಾರ ಆದೇಶಿಸಿದರೂ ಅದನ್ನು ಜಾರಿಗೆ ತರಲು ಕಾರ್ಖಾನೆ ಮಾಲೀಕರು ಒಪ್ಪದಿರುವುದು ವಿಚಿತ್ರ ಪ್ರಸಂಗ ! ಸವಾಲು ಹಾಕುವ ಇಂತಹ ಸಕ್ಕರೆ ಮಾಲೀಕರನ್ನು ಮಣಿಸಲಾಗದೇ ಮನವೊಲಿಸಲು ಬೆನ್ನು ಬಾಗಿಸಿರುವುದು ಕಾಂಗ್ರೆಸ್‌ನ ಹಿತಾಸಕ್ತಿ, ಆ ಪಕ್ಷದೊಳಗೆ ಪ್ರಬಲವಾಗಿ ಬೇರು ಬಿಟ್ಟಿರುವ ಸಕ್ಕರೆ ಲಾಬಿ, ಅದರ ನಿಜ ಚಹರೆ ಏನು ಎಂಬುದನ್ನು ತೆರೆದಿಟ್ಟಿತು.



ಇವುಗಳ ಜೊತೆಗೆ ಕಾಂಗ್ರೆಸ್‌ನ ನಿಜವಾದ ಮುಖ ಬಯಲಾದದ್ದು ಹಲವಾರು ವಿಧೇಯಕಗಳನ್ನು ಅಂಗೀಕರಿಸಿದ ಸಂದರ್ಭದಲ್ಲಿ. ನಿಜವಾಗಿಯೂ ಕಾರ್ಮಿಕ ವರ್ಗ, ಸರಕಾರಿ ನೌಕರರ ಮುಷ್ಕರದ ಮೂಲಭೂತ ಹಕ್ಕನ್ನು ದಮನಿಸುವ ಪ್ರಜಾಪ್ರಭುತ್ವ ವಿರೋಧಿ ಎಸ್ಮಾ ಕಾಯಿದೆಯನ್ನು ಅಂಗೀಕರಿಸಿದ್ದು ಈ ಅಧಿವೇಶನದ ಇತಿಹಾಸದಲ್ಲಿ ಕಪ್ಪು ಚುಕ್ಕೆಯಾಯಿತು.



ಈ ಅಧಿವೇಶನದಲ್ಲಿ ಹಲವಾರು ವಿಧೇಯಗಳನ್ನು ಮಂಡಿಸುವುದಾಗಿ ಸರಕಾರ ಹೇಳಿತ್ತು. ವೈದ್ಯಕೀಯ ವಿ.ವಿ. ವಿಧೇಯಕ , ಪಂಚಾಯತ್ ಸದಸ್ಯರ ವಿಧೇಯಕಗಳನ್ನು ಮೊದಲು ತರಲಾಯಿತು. ಬಳಿಕ ಗುರುವಾರ ಒಟ್ಟು ಆರು ವಿಧೇಯಕಗಳನ್ನು ಅಂಗೀಕರಿಸಲಾಯಿತು. ಅದರಲ್ಲಿ ಮುಖ್ಯವಾಗಿ ಕಾರ್ಮಿಕರ ಮುಷ್ಕರದ ಹಕ್ಕನ್ನು ನಿಷೇಧಿಸುವ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಿ ಜೈಲಿಗಟ್ಟುವ 'ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣಾ ವಿಧೇಯಕ-2013' ಎಂಬ ಕಾಯ್ದೆ ಅತ್ಯಂತ ಕರಾಳವಾದುದು.

ಈ ಕಾಯ್ದೆಯು ನೀರು ಸರಬರಾಜು, ವಿದ್ಯುತ್ ಸರಬರಾಜು ಹಾಗೂ ಸಾರಿಗೆ ವಲಯ ಸೇರಿದಂತೆ ಕೆಲವು ಅವಶ್ಯಕ ಸೇವೆಗಳಲ್ಲಿ ಮುಷ್ಕರವನ್ನು ನಿಷೇಧಿಸಲು ಅತ್ಯಂತ ಕಠಿಣ ಕ್ರಮಗಳಿಗೆ ಅವಕಾಶ ಕಲ್ಪಿಸುತ್ತದೆ. 'ಅಗತ್ಯ ಸೇವೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವೊಬ್ಬ ವ್ಯಕ್ತಿಯೂ ಈ ಕಾನೂನು ಬಾಹೀರ ಮುಷ್ಕರದಲ್ಲಿ ಭಾಗವಹಿಸಿದರೆ, ಇಂಥ ಮುಷ್ಕರದಲ್ಲಿ ಭಾಗವಹಿಸಲು ಪ್ರಚೋದಿಸಿದರೆ, ಇಂಥ ಮುಷ್ಕರಗಳಿಗೆ ಹಣಕಾಸು ನೆರವು ನೆರವು ನೀಡಿದರೆ ದಂಡ, ಶಿಕ್ಷೆ ವಿಧಿಸಬಹುದು. ಈ ಪ್ರಕಾರ ಆರೋಪಗಳ ಮೇಲೆ ಯಾವುದೇ ಜಾಮೀನುರಹಿತ,ವಾರಂಟ್ ಇಲ್ಲದೇ ಬಂಧಿಸಬಹುದು. ಅಂಥವರನ್ನು ಜೈಲಿಗೂ ಕಳಿಸಬಹುದು. ಈ ಕಾಯ್ದೆ ಮುಷ್ಕರವನ್ನು ನಿಷೇಧಿಸಲು ಸರಕಾರಕ್ಕೆ ಅಧಿಕಾರವನ್ನು ನೀಡುತ್ತದೆ. ಸೇವೆ ನಿರಾಕರಿಸಿದರೆ ಅದನ್ನು ಮುಷ್ಕರವೆಂದು ಪರಿಗಣಿಸುತ್ತದೆ. ಮುಷ್ಕರವೇ ಕಾಯ್ದೆ ಬಾಹೀರವೆಂದು ಸಾರಿ ಜೈಲು ಅಥವಾ 5000ರೂಪಾಯಿಗಳ ದಂಡ ವಿಧಿಸುತ್ತದೆ.

ಪ್ರಜಾಪ್ರಭುತ್ವೀಯ ಹಕ್ಕುಗಳ ಮೇಲೆ ಇಷ್ಟೊಂದು ನಗ್ನವಾಗಿ ಧಾಳಿ ನಡೆಸುವ ಈ ಕಾಯ್ದೆಯನ್ನು ದುಡಿಯುವ ಜನರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದೇ, ಭಂಡತನದ ಸಮರ್ಥನೆಗಳೊಂದಿಗೆ ಅಂಗೀಕರಿಸುವರೆಂದರೆ ಕಾಂಗ್ರೆಸ್ ಪಕ್ಷಕ್ಕೆ ಇರುವ ಕಾಳಜಿಯಾದರೂ ಎಂತಹುದು?

ಅದೂ ವಿರೋಧ ಪಕ್ಷಗಳ ವಿರೋಧ, ಅದರಲ್ಲೂ ಆಡಳಿತ ಪಕ್ಷದವರೇ ಆದ ರಮೇಶ್‌ಕುಮಾರ್‌ರವರು 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮುಷ್ಕರವೂ ಅದರ ಭಾಗ. ಕಾರ್ಮಿಕ ವರ್ಗದ ವಿರೋಧಿಯಾದ ಇಂತಹ ಕಾನೂನು ಜಾರಿ ಮಾಡುವ ಹೀನಕೃತ್ಯಕ್ಕೆ ಈ ಸದನ ಭಾಗಿಯಾಗಬಾರದು' ಎಂದು ಹೇಳಿ ವಿರೋಧಿಸಿದ್ದರೆ, ಸಭಾಧ್ಯಕ್ಷ ಕಾಗೋಡು ತಿಮ್ಮಪ್ಪನವರು ಕೂಡ 'ಇಂತಹ ಕಾನೂನಿನ ಅವಶ್ಯಕತೆಯಾದರೂ ಏನಿದೆ?' ಎಂದು ಪ್ರಶ್ನಿಸಿದ್ದಾರೆ. ಆಗಲಾದರೂ ಯೋಚಿಸಬಾರದಿತ್ತೇ?

ಸಿದ್ಧರಾಮಯ್ಯನವರ ಸರಕಾರ ಹಿಂದುಳಿದವರ ಮೇಲೆ (ಒಣ) 'ಪ್ರೀತಿ' ತೋರುತ್ತಿದ್ದರೂ, ಮೌಢ್ಯತೆಯನ್ನು ನಿರ್ಭಂಧಿಸುವ

ಪುಟ 4 ಕ್ಕೆ

ದಲಿತ ಕೇರಿಗೆ ಒಳಚರಂಡಿಗೆ ಒತ್ತಾಯಿಸಿ ಹುಣಸೂರಿನಲ್ಲಿ ಸಿಪಿಐ(ಎಂ)ನಿಂದ ಪುರಸಭೆಗೆ ಮುತ್ತಿಗೆ



ವರದಿ: ಜಗಧೀಶ್‌ಸೂರ್ಯ

ದಲಿತರೇ ಹೆಚ್ಚಾಗಿ ವಾಸಿಸುವ ಹುಣಸೂರು ಪಟ್ಟಣದ ಒಂದನೇ ವಾರ್ಡಿಗೆ ಒಳಚರಂಡಿ, ಶೌಚಾಲಯ ಒದಗಿಸುವಂತೆ ಒತ್ತಾಯಿಸಿ ಸಿಪಿಐ(ಎಂ), ಮಹಿಳಾ ಸ್ವಸಹಾಯ ಸಂಘ ಮತ್ತು ಡಿವೈಎಫ್‌ಐನಿಂದ ಹುಣಸೂರು ಪುರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು.

ರಂಗನಾಥ ಬಡಾವಣೆಯಿಂದ ಮೆರವಣಿಗೆ ಮೂಲಕ ತಮಟೆ ವಾದ್ಯಗಳೊಂದಿಗೆ ಪುರಸಭೆ ವಿರುದ್ಧ ಘೋಷಣೆ ಕೂಗುತ್ತಾ ಪ್ರಮುಖ ಬೀದಿಗಳಲ್ಲಿ ಸಾಗಿ ನಂತರ ಪುರಸಭೆಗೆ ಮುತ್ತಿಗೆ ಹಾಕಲಾಯಿತು. ಈ ಸಂದರ್ಭದಲ್ಲಿ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಹುಣಸೂರು ಶಾಖಾ ಕಾರ್ಯದರ್ಶಿ ವಿ. ಬಸವರಾಜು ಕಲ್ಕುಣಿಕೆ, ಬಡವರು ಮತ್ತು ದಲಿತರು ವಾಸ ಮಾಡುವ ಬೀದಿಗಳಿಗೆ ಒಳ ಚರಂಡಿ ಸೌಲಭ್ಯ ಕಲ್ಪಿಸದ ಪುರಸಭೆಯ ಕ್ರಮ ನಾಚಿಕೆಗೇಡಿನ ಸಂಗತಿ. ಶೌಚಾಲಯ ಇಲ್ಲದ ಕಾರಣ ಮಹಿಳೆಯರು, ಮಕ್ಕಳು, ವೃದ್ದರು ನರಕ ಯಾತನೆ ಅನುಭವಿಸುವಂತಾಗಿದೆ. ಹೀಗಿದ್ದರೂ, ಜನಪ್ರತಿನಿಧಿಗಳು ಹಾಗೂ ಪುರಸಭಾ ಮುಖ್ಯಾಧಿಕಾರಿಗಳು ಗಮನ ಹರಿಸದೆ ನಿರ್ಲಕ್ಷ್ಯ ವಹಿಸಿದ್ದಾರೆ. ಈ ರೀತಿಯ ವರ್ತನೆ ಬಡವರು ಮತ್ತು ದಲಿತರ ವಿರೋಧಿ ನೀತಿಯಾಗಿದ್ದು, ಈ ಕೂಡಲೇ ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ನಂತರ ಮಾತನಾಡಿದ ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಜಗಧೀಶ್‌ಸೂರ್ಯ ಸಂವಿಧಾನವನ್ನು ಆಳುವವರೇ ಉಲ್ಲಂಘಿಸುತ್ತಾ ಅದರ ಆಶಯವನ್ನು ತಿರುಚುತ್ತಾರೆ. ಅಧಿಕಾರಿಗಳೇ ದಲಿತರಿಗೆ ನೀಡಬೇಕಾದ ಸೌಲಭ್ಯಗಳನ್ನು ನೀ
ತಾರತಮ್ಯ ಎಸಗುತ್ತಿದ್ದಾರೆ. ಎಷ್ಟೇ ಮ
ಸಲ್ಲಿಸಿದರೂ ಕಿವುಡ, ಕುರುಡರ ರೀತಿ
ವರ್ತಿಸುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದ

ನಂತರ ಪುರಸಭಾ ಮುಖ್ಯಾಧಿ
ರಮೇಶರಿಗೆ ಮನವಿ ಸಲ್ಲಿಸಲಾಯಿತು. ಮ
ಸ್ವೀಕರಿಸಿ ಮಾತನಾಡಿದ ಮುಖ್ಯಾಧಿಕಾರಿ
ಪಟ್ಟಣದ ಒಳಚರಂಡಿ ವ್ಯವಸ್ಥೆಗೆ
ಕೋಟಿ ರೂ. ಪ್ರಸ್ತಾವನೆಯನ್ನು ಈಗಾ
ಸಲ್ಲಿಸಲಾಗಿದ್ದು, ಶೀಘ್ರವಾಗಿ ಒಳಚರ
ಕಾಮಗಾರಿ ಪ್ರಾರಂಭವಾಗಲಿದೆ ಎಂದು ಭರ
ನೀಡಿ ತಕ್ಷಣವೇ ವಾರ್ಡಿಗೆ ಭೇಟಿ ಕೊಟ್ಟು
ಪರಿಶೀಲಿಸಿದರು. ನಂತರ ಪ್ರತಿಭಟನೆಯ
ತಾತ್ಕಾಲಿಕವಾಗಿ ಕೈಬಿಡಲಾಯಿತು.

ಈ ಪ್ರತಿಭಟನೆಯಲ್ಲಿ ಸಿಪಿಐ(
ಮುಖಂಡರಾದ ವಿ. ದುರ್ಗೇಶ್, ಎಸ್‌ಎ
ಜಿಲ್ಲಾ ಕಾರ್ಯದರ್ಶಿ ಮಹೇಶ್‌ಕುಮಾ
ತಾಲ್ಲೂಕು ಅಧ್ಯಕ್ಷೆ ಎನ್. ರಂಜಿತ, ಅಂಜು
ರಘು, ಸ್ವಾಮಿ, ಮಹಿಳಾ ಸ್ವಸಹಾಯ ಸಂಘ
ರಾಣಿ, ಗೌರಮ್ಮ, ಅರುಣ, ಜಯ
ದಸಂಸ ಸಂಚಾಲಕ ಬೆಳ್ತೂರು ಮಹದೇ
ಪಾಲ್ಗೊಂಡಿದ್ದರು.

ಸಾಮಾಜಿಕ ಹಾಗೂ ಶಿಕ್ಷಣ ವ್ಯವಸ್ಥೆಯ...

ಪುಟ 2 ರಿಂದ

ಹಿಂದಿನ ವಾರದಲ್ಲಿ ನಾನು ಕರ್ನಾಟಕದ ಶಿಕ್ಷಣದಲ್ಲಿ ಎಸ್ಸೆಸ್ಸೆಲ್ಸಿ ಎಂಬ ಕಿರು ನಳಿಗೆಯಿಂದ (ಬಾಟ್ಲ್ ನೆಕ್) ಹೊರಬಂದವರು ಕೇವಲ ಶೇ. 25 ಭಾಗ ಮಾತ್ರ ಎಂದು ವಿವರಗಳನ್ನು ನೀಡಿದ್ದೇನೆ. ಈ 25 ರ ಜಾತಿ ರಚನೆಯನ್ನು ಅಧ್ಯಯನ ಮಾಡಿದರೆ ಮೇಲ್ಜಾತಿಗಳ, ಗ್ರಾಮೀಣ ಪ್ರದೇಶದಲ್ಲಿ ಆಸ್ತಿವಂತರಾದ ಮಧ್ಯಮ ಜಾತಿಗಳ ಹೆಚ್ಚಳ ಕಣ್ಣಿಗೆ ಹೊಡೆಯುತ್ತದೆ. ಅದರಲ್ಲಿ ಕೆಲ ಹಿಂದುಳಿದ ಜಾತಿಗಳ, ದಲಿತರ ಬಾಲಕರೂ ಇದ್ದಾರೆ ಎಂಬುದೂ, ಅವರಿಂದ ದೇವನೂರು ಮಹದೇವ, ಸಿದ್ಧಲಿಂಗಯ್ಯನಂತಹ ಕೆಲ ದಲಿತ ಪ್ರತಿಭೆಗಳು ಕನ್ನಡ ಮನಸ್ಸನ್ನು ಅರಳಿಸಿದ್ದಾರೆ ಎಂಬುದು ನಿಜ, ವಿವಿಧ ರಂಗಗಳಲ್ಲಿ ಕೆಲ ಹಿಂದುಳಿದ ಹಾಗೂ ದಲಿತ ಆಡಳಿತಗಾರರು, ರಾಜಕಾರಣಿಗಳು ಕಾಣುತ್ತಾರೆ ಎಂಬುದೂ ನಿಜ. ಆದರೆ ದೊಡ್ಡ ಸಂಖ್ಯೆಯಲ್ಲಿ ಈ ಜನ ಸಮುದಾಯವೇ ಇನ್ನೂ ಎಸೆಸೆಲ್ಸಿ ಎಂಬ ಗೋಡೆಯನ್ನು ದಾಟಿ ಬರಲಾಗದ ಶೇ.75 ಭಾಗ. ಇವರೇ ಬೆಂಗಳೂರಿನ ಹಾಗೂ ಇತರ ನಗರಗಳ ಅಗ್ಗದ ಕೂಲಿಕಾರರ ಸರಬರಾಜು ಮೂಲ ಎಂಬುದೂ ನಗ್ನ ಸತ್ಯ.. ವಿಜ್ಞಾನ-ತಂತ್ರಜ್ಞಾನ, ವೈದ್ಯಕೀಯ ರಂಗದಲ್ಲಿ, ಇತರ ಹೊಸ ಉದ್ಯೋಗಗಳಿಗೆ ಬೇಕಾದ ಶಿಕ್ಷಣದಲ್ಲಿ ಈ ಜನ ಸಮುದಾಯಗಳ ಗೈರು ಹಾಜರಿ ಹಾಗೂ ಅದಕ್ಕೆ ಕಾರಣಗಳು ನಮ್ಮ ಗಮನವನ್ನು ಸೆಳೆಯಬೇಕಾಗಿದೆ.

ಚಿಂತನೆ, ಚಳುವಳಿಗಳ ಹೊಸ ಹಂತದ ಸವಾಲು

ಇದು ನಾನು ವಿವರಿಸುತ್ತಾ ಬಂದಿರುವ ಸಾಮಾಜಿಕ ವ್ಯವಸ್ಥೆ ಹಾಗು ಶಿಕ್ಷಣ ವ್ಯವಸ್ಥೆಗಳ ಕೂಟದಲ್ಲಿ ಜನಿಸಿದ ಅಕ್ರಮ ಸಂತಾನದ ಫಲ. ಸಾಮಾನ್ಯವಾಗಿ ನಮ್ಮ ಇಂದಿನ ಶಿಕ್ಷಣ ಸಾವಿರಾರು ವರ್ಷಗಳ ಅಮಾನವಿಯ ಜಾತಿ ವ್ಯವಸ್ಥೆ ಆಧಾರಿತ ಸಾಮಾಜಿಕ ವ್ಯವಸ್ಥೆಗೆ ಪರಿಹಾರ ಕೊಡುವ ಸಮಾನತೆಯ ಹರಿಕಾರ ಎಂಬ ಕಲ್ಪನೆ ವ್ಯಾಪಕವಾಗಿದೆ. ನಾನು ಈ ನಂಬಿಕೆಗೆ ವಿರುದ್ಧವಾಗಿ ಈ ಎರಡೂ ಅಸಮಾನತೆಯನ್ನು ತಮ್ಮಲ್ಲೆ ಹುದುಗಿಸಿಕೊಂಡಿರುವ ವ್ಯವಸ್ಥೆಗಳು ಎಂದು ಪ್ರತಿಪಾದಿಸುತ್ತಿದ್ದೇನೆ. ಆ ರೀತಿ ವ್ಯವಸ್ಥೆ ಇದನ್ನು ಬಹಿರಂಗವಾಗಿ ಯಾವ ಮುಚ್ಚು ಮರೆಯೂ ಇಲ್ಲದೇ ಘೋಷಿಸಿದರೆ ಶಿಕ್ಷಣ ವ್ಯವಸ್ಥೆ ಆಧುನಿಕ ಸಮಾಜದ ಪ್ರಜಾಪ್ರಭುತ್ವದ ಪದ್ಧತಿಗೆ ಅನುಗುಣವಾಗಿ ಒಳಗೊಳಗೇ ಇದನ್ನು ಸಾಧಿಸುತ್ತದೆ. ಎಸ್ಸೆಸ್ಸೆಸಿಯಲ್ಲಿ 75 ಕ್ಕಿಂತ ಹೆಚ್ಚು ಭಾಗವನ್ನು ಹೊರ ಹಾಕಬೇಕು ಎನ್ನುವ ಉದ್ದೇಶದಿಂದಲೇ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲಾಗಿತ್ತು ಎನ್ನುವಂತಿದೆ. (ಊಹಿಸಿಕೊಳ್ಳಿ ತೀರಾ ಇತ್ತೀಚೆಗೆ 2000- 2001 ರಲ್ಲಿಯೂ, ಸ್ವಾತಂತ್ರ್ಯ ಬಂದ ಅರ್ಧ ಶತಮಾನದ ನಂತರವೂ ಶೇ. 75 ಭಾಗ ಎಸ್ಸೆಸ್ಸೆಲ್ಸಿ ದಾಟುತ್ತಿರಲಿಲ್ಲ ಎಂದರೆ ಇನ್ನು ಸ್ವಾತಂತ್ರ್ಯದ ಮೊದಲ ದಶಕಗಳಲ್ಲಿ ಹೇಗಿತ್ತು ಎಂದು) ಇದರಿಂದ ಶೈಕ್ಷಣಿಕವಾಗಿ ಹಿಂದುಳಿದ ಜಾತಿಗಳು ಹಾಗೂ ಪ್ರದೇಶಗಳು ಎಂಬ ವಿಶಿಷ್ಟ ಮೇಲ್ಜಾತಿ-ಮೇಲ್ವರ್ಗ ಪರ ಮೀಸಲಾತಿಯ ಸೃಷ್ಠಿ. ಇನ್ನೇನು ಈ ಶಿಕ್ಷಣ ಪದ್ಧತಿ ನಿರೀಕ್ಷಿಸುವ ಪರಿಣತಿಯನ್ನು ಹಿಂದುಳಿದ ಜಾತಿಗಳ, ದಲಿತರ ಯುವಕರು ಪಡೆದರು ಎನ್ನುವಾಗಲೇ ಉದ್ಯಮಗಳ, ಇತರ ವ್ಯವಹಾರಗಳ ಖಾಸಗೀಕರಣ ಹಾಗೂ ಖಾಸಗಿ ಶಿಕ್ಷಣದ ಮೂಲಕ ಹೊಸ ತಂತ್ರ ಜ್ಞಾನಗಳು, ಹೊಸ ಉದ್ಯೋಗಳನ್ನು ತಮಗೇ ಮೀಸಲಿರಿಸುವ ಕುತಂತ್ರ ಎದುರಾಗಿದೆ. ಇದನ್ನು ಎದುರಿಸುವ ಹೊಸ ಚಿಂತನೆ ಹಾಗೂ ಚಳುವಳಿ ಇಂದು ನಮ್ಮ ಮುಂದಿನ ಸವಾಲು. ದಲಿತ ಚಳುವಳಿಗಳು ಹಾಗೂ ಕಮ್ಯುನಿಸ್ಟ್ ಚಳುವಳಿಗಳು, ಇತರ ಪ್ರಗತಿಪರರರು ಈ ಸವಾಲನ್ನು ಕೈಗೆತ್ತಿಕೊಳ್ಳ ಬೇಕು. ಚಿಂತನೆ, ಚಳುವಳಿಗಳ ಹೊಸ ಹಂತಕ್ಕೆ ಸಿದ್ಧವಾಗಬೇಕು.

ಈ ವಾರ ....

ಪುಟ 3 ರಿಂದ

ಪ್ರಗತಿಪರ ಮಂತ್ರ ಜಪಿಸುತ್ತಿದ್ದರೂ ಮೂಲದ
ಅದು ಉದಾರೀಕರಣ, ಜಾಗತೀಕರಣ
ನೀತಿಗಳನ್ನೇ ಜಾರಿಗೆ ತರುವುದರ ಬಗ್ಗೆ ಹಿಂದ
ಯೇ ಹೇಳಿದ್ದೆವು, ಪದೇ ಪದೇ ಹೇಳುತ್ತಿದ್ದೇ
ಈ ಮಾತು ಅಹಿಂದದ ಅಮಲು ಔಷ
ಸೇವನೆಯಲ್ಲೇ ಸಾರ್ಥಕ್ಯ ಕಾಣುವ ಅನೇಕರ
ಅಷ್ಟು ಇಷ್ಟವಾಗಲಿಕ್ಕಿಲ್ಲ. ಆದರೆ ಈ ವಾಸ್ತವ
ಜನರನ್ನು ಸುಲಿದು ಮುಕ್ಕಲು, ನಮ್ಮ ಸಂಪತ್ತ
ದೋಚಲು ದೇಶೀಯ ಮತ್ತು ವಿದೇಶಿ
ಬಂಡವಾಳ ಹೂಡಿಕೆದಾರರಿಗೆ ಮುಕ್ತ ಅವಕಾ
ಕಲ್ಪಿಸುತ್ತದೆ. ದುಡಿಯುವ ಜನ ಸಮುದಾಯ ತ
ಸಂಕಷ್ಟಗಳ ಬಗ್ಗೆ, ನೋವಿನ ಬಗ್ಗೆ ಪ್ರಜಾಪ್ರಭುತ್ವ
ರೀತ್ಯಾ ಹಕ್ಕುಗಳಿಗಾಗಿ ಕಿರು ಬೆರಳನ್ನೂ ಎತ್ತದಂ
ಮಾಡ ಬಯಸುತ್ತದೆ. ಜಾಗತಿಕ ಬಂಡವಾ
ಹೂಡಿಕೆದಾರರ ಸಮಾವೇಶ ನಡೆಸಲು ಸಿ
ನಡೆಸಿರುವ ಸಿದ್ಧರಾಮಯ್ಯ ಪೂರ್ವಭಾವಿಯಾ
ಇಂತಹ ಶ್ರಮಜೀವಿಗಳ ಹಕ್ಕುಗಳನ್ನು ದಮನಿಸು
ಕ್ರೂರ ಕ್ರಮಗಳನ್ನು ಕೈಗೊಳ್ಳುತ್ತಿರುವುದು. ತ
ಜನದ್ರೋಹಿ ನೀತಿಗಳಿಂದ ಜನರಲ್ಲಿ ಅತೃ
ಹೆಚ್ಚುತ್ತಲಿದ್ದು ಅದಕ್ಕೆ ಪರಿಹಾರ ನೀಡದ
ದಮನದ ಮೂಲಕವೇ ಉತ್ತರ ಹೇಳ
ಸಿದ್ಧವಾಗುತ್ತಿರುವುದು. ಅಲ್ಲದೇ ಮುಂದೆ ವಿದ್ಯುತ
ನೀರು, ಆರೋಗ್ಯ, ಸಾರಿಗೆ ರಂಗಗಳನ್ನು ಪೂಣ
ಖಾಸಗೀಕರಣ ಮಾಡುವ ಹುನ್ನಾರ ಇಲ್ಲದಿಲ್ಲ.

ಹಿಂದೆ ಹೈಟೆಕ್ ಕೃಷ್ಣರವರ ನೇತೃತ್ವ
ಕಾಂಗ್ರೆಸ್ ಸರಕಾರ ಕೇಂದ್ರದ ಮಾದರಿಯಲ್ಲ
ಕ್ರೂರ 'ಕೋಕಾ" ಕಾಯ್ದೆ ತರಲು ಮುಂದಾಗಿತ
ದುಡಿಯುವ ಜನತೆಯ ಹಕ್ಕುಗಳನ
ಮೊಟಕುಗೊಳಿಸುವ, ದಮನಿಸುವ ಪ್ರಯತ್ನಗಳನ
ಹಿಂದಿದ್ದ ಬಿಜೆಪಿ ಸರಕಾರ ಮಾಡಿತು. ಈ
ಈ ಸರಕಾರ ಅಂತಹುದೇ ಕೃತ್ಯಕ್ಕೆ ಇಳಿದಿದ
ಈ ಸರ್ವಾಧಿಕಾರಿ ಕೃತ್ಯಗಳ ವಿರುದ್ಧ
ದುಡಿಯುವ ವರ್ಗ, ಪ್ರಜಾಸತ್ತಾತ್ಮಕ ಶಕ್ತಿ
ತೀವ್ರ ಪ್ರತಿಭಟನೆಗೆ ಇಳಿಯಬೇಕು. ರಾಜ್ಯಪಾಲರ
ಇದನ್ನು ತಿರಸ್ಕರಿಸಿ ಹಿಂದೆ ಕಳಿಸಬೇಕು.


ನಿಮಗೆ 'ಜನಶಕ್ತಿ' ಸರಿಯಾಗಿ ತಲುಪುತ್ತಿಲ್ಲವೆ?
ನಿಮಗೇನಾದರೂ ದೂರುಗಳಿವೆಯೇ? ಹೀಗೆ ಮಾಡಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,
c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಪ್ಪು ಮುತ್ತು ನೆಲ್ಸನ್ ಮಂಡೇಲ



ಕಪ್ಪು ಮನುಜರು ನಾವು ಕಪ್ಪು ಮನುಜರು
ಕಪ್ಪು ಮನುಜರು ನಾವು ಕಪ್ಪು ಮನುಜರು
ಈ ಮಣ್ಣ ಕರಿಯೊಳಡಲ
ಕೆಸರಲ್ಲಿ ಮಿಂದು ಬಂದವರು.. ..

ಪ್ರಗತಿಪರ, ದಲಿತ ಚಳುವಳಿಗಳಲ್ಲಿ ಇದು ಎಂದೂ ಮರೆಯದ ಹಾಡು. ಈ ಹಾಡನ್ನು ಈಗ ಮತ್ತೊಮ್ಮೆ ನೆನಪಿಸಿಕೊಳ್ಳಬೇಕಾಗಿದೆ. ಇದು ಯಾವತ್ತು? ಡಿಸೆಂಬರ್ 6.

ಡಿ.6 ಭಾರತೀಯರ ಪಾಲಿಗೆ ಹಲವು ದುಃಖಗಳನ್ನು ಹೊತ್ತು ತಂದ ದಿನ. ಈ ದುಃಖಗಳ ಸಾಲಿಗೆ ಈಗ ಮತ್ತೊಂದು ಸಂಗತಿ ಸೇರಿದೆ. ಮೊದಲಿಗೆ ಇದು ಭಾರತದ ದೇಶದ ಕೋಟಿ ಕೋಟಿ ಹತಭಾಗ್ಯ ಅಸ್ಪೃಶ್ಯ ದಲಿತರ ಆತ್ಮ ಗೌರವದ ರಕ್ಷಣೆಗೆ ಜೀವ ಸವೆಸಿದ ಹೋರಾಟಗಾರ, ದೇಶದ ದೃಷ್ಟಾರ ಡಾ.ಬಾಬಾ ಸಾಹೇಬ್ ಅಂಬೇಡ್ಕರರು ನಮ್ಮನ್ನು ಅಗಲಿದ ನೋವಿನ ದಿನ. ನಂತರ ಭಾರತದ ಕೋಮುವಾದಿ ದುಷ್ಟ ಕೂಟ 1992 ರಲ್ಲಿ ಐತಿಹಾಸಿಕ ಬಾಬರಿ ಮಸೀದಿಯನ್ನು ಕೆಡವಿ ಶ್ರೀಮಂತ ಬಹುಸಂಸ್ಕೃತಿ, ಸಹಬಾಳ್ವೆಯ ಭಾರತೀಯ ಬದುಕಿಗೆ ಕೊಳ್ಳಿಇಕ್ಕಿದ ದುರಂತದ ದಿನ. ಈಗ 'ಭಾರತ ರತ್ನ' ಪದವಿ ಪುರಸ್ಕೃತ 'ನೆಲ್ಸನ್ ಮಂಡೇಲಾ' ದೇಹ ಉಸಿರಾಟ ನಿಲ್ಲಿಸಿದ ವಿಷಾಧದ ಸುದ್ದಿ ಬೀಸಿ ಬಂದ ದಿನ.

ಅಲ್ಲಿ ಬೇರೆ ಮುಖ – ಕೋರೆ ಹಲ್ಲು

ನಾವು ಭಾರತೀಯರು, ಬಹುತೇಕ ಯೂರೋಪಿನಿಂದ ವ್ಯಾಪಾರಕ್ಕೆಂದು ಬಂದು ಇಲ್ಲಿ ಬಿಳಲು ಬಿಟ್ಟ ಬ್ರಿಟೀಷರ ಆಡಳಿತ, ಶೋಷಣೆ ನೋಡಿದ್ದೇವೆ. ಆದರೆ ಕರಿಯರ ನಾಡು ದಕ್ಷಿಣ ಆಫ್ರಿಕಾದ ಮೇಲೆ ಹಿಡಿತ ಸಾಧಿಸಿದವರು ಬರೀ ಬ್ರಿಟೀಷರಲ್ಲ. ಅಲ್ಲಿ ಯುರೋಪಿನ ನಾನಾ ದೇಶಗಳ ಬಿಳಿಯರು ಸೇರಿ ದೇಶ ಆಕ್ರಮಿಸಿಕೊಂಡು ಕರಿಯರ ಹೆಗಲೇರಿ ಕೂತರು. ಇಲ್ಲಿ ವಿಶಾಲ ಭಾರತದ ಭಾಗದಲ್ಲಿ 'ಭಾರತೀಯರಿಗೆ ನಾಗರೀಕತೆಯನ್ನು ಕಲಿಸುವುದು', 'ಭಾರತದ ಸಮಾಜದಲ್ಲಿ ಆಧುನಿಕತೆಯನ್ನು ತರುವುದು' ಇತ್ಯಾದಿಯಾಗಿ ಮಾತುಗಳನ್ನು ಬ್ರಿಟಿಷ್ ಸರ್ಕಾರ ಆಡಬೇಕಾಗಿದ್ದುದರಿಂದ ಇಲ್ಲಿನ ಸರ್ಕಾರ ಎಲ್ಲ ಸಂದರ್ಭಗಳಲ್ಲಿ ಅಷ್ಟು ಕ್ರೂರವಾಗಿ ನಡೆದುಕೊಳ್ಳಲು ಸಾಧ್ಯವಿರಲಿಲ್ಲ.

ತೊಲಗು ತೊಲಗು ತೊಲಗಾಚೆ ತೊಲಗು
ಬಿಳಿತೊಗಲ ಸುಲಿಗೆಗಾರ
ನಾವಲ್ಲ ತೊತ್ತು, ನಿಮಗಲ್ಲ ತುತ್ತು
ನಮ್ಮಾಸೆ ನುಡಿ ವಿಚಾರ

ಎಂಬ ಸ್ಪಷ್ಟ ಜನದನಿ ಮೊಳಗಲು ಇಲ್ಲಿ ಎಷ್ಟೋ ದಶಕಗಳು ಉರುಳಿದವು.

ಆದರೆ ದಕ್ಷಿಣ ಆಫ್ರಿಕದಲ್ಲಿ ಅಲ್ಲಿಗೆ ವಲಸೆ ಬಂದ ಬಿಳಿತೊಗಲ ಯರೋಪಿಯನ್ನರೇ ಸೇರಿ ಗುಂಪುಗೂಡಿದ ಆಳುವ ವರ್ಗಕ್ಕೆ ಬಹುಶಃ ಸ್ಥಳೀಯ ಜನರ ಮುಂದೆ ತೋರಲಾದ ಯಾವ ರೀತಿಯ ಮುಖವಾಡದ ಅಗತ್ಯ ಕಾಣಲಿಲ್ಲ. ಅಧಿಕಾರ ನಡೆಸಲು ಬಂದೂಕು, ಬಾಂಬ್, ಬೀಸಲು ಚಾಟಿ, ತಿವಿಯಲು ಈಟಿ. ಮಿದುಳಲ್ಲಿ 'ಬಿಳಿಯರು ಶ್ರೇಷ್ಠರು-ಕರಿಯರು ನಿಕೃಷ್ಟರು' ಎಂಬ ದುಷ್ಟ ಸಿದ್ಧಾಂತದ ಅಮಲು.

ಅದು ಘೋರ ಬೇಧ

ರೈಲು-ಬಸ್ಸು, ಹಾದಿ-ಬೀದಿ, ಶಾಲೆ-ಕಾಲೇಜು, ಕಟ್ಟಡ-ಕಾರ್ಖಾನೆ ಎಲ್ಲಲ್ಲೂ ಭಾರತದ 'ಊರು-ಕೇರಿ'ಯನ್ನು ನೆನಪಿಸುವ ಬೇಧ. ಹೆಜ್ಜೆ ಹೆಜ್ಜೆಗೆ ಅಪಮಾನ. ಚರ್ಮದ ಬಣ್ಣದ ಆಧಾರದಲ್ಲಿ ತಾರತಮ್ಯ ಮಾಡುವ ಜಗತ್ತು ಕಂಡ ಅತ್ಯಂತ ಕ್ರೂರ-ಘೋರ ದಮನಕಾರಿ, ಸರ್ವಾಧಿಕಾರಿ ಫ್ಯಾಸಿಸ್ಟ್ ಪ್ರಭುತ್ವ ದಕ್ಷಿಣ ಆಫ್ರಿಕದ ಬಿಳಿಯರ ಆಡಳಿತದ್ದು. ನಗ್ನ ಭೀಕರ ಕ್ರೌರ್ಯ. ಕೋರೆಹಲ್ಲಿನ ಮುಖವೇ ಎಲ್ಲೆಲ್ಲೂ. ನಾಜೂಕಿನ ನಯ, ನಾಟಕಗಳೇ ಇಲ್ಲ. ಮಾತೆತ್ತಿದರೆ ಘೋರ ದಮನ.

ವಜ್ರ, ಲೋಹ, ತೋಟ, ಗಣಿ, ಮರ-ಕಾಡು, ಮೋಜು-ಹಾಡು ಎಲ್ಲ ಅವರದ್ದು, ಬಿಳಿಯರದ್ದು. ಮನುಕುಲ ನಾಚಿ ತಲೆತಗ್ಗಿಸಬೇಕಾದ ನೀಚ ಲೂಟಿ ಅಲ್ಲಿ. ಸಾಟಿ ಇಲ್ಲದ ಈ ಲೂಟಿಗೆ, ಹೃದಯಹೀನ ತಾರತಮ್ಯಕ್ಕೆ ಸಾಮ್ರಾಜ್ಯಶಾಹಿ ಅಮೇರಿಕ-ಇಂಗ್ಲೆಂಡ್ ಮುಂತಾದ ಶಕ್ತಿಗಳ ಪರೋಕ್ಷ-ಪ್ರತ್ಯಕ್ಷ ಬೆಂಬಲ.


ಉಪವಾಸ, ಮನವಿ, ದೈತ್ಯ-ರಕ್ಕಸ ಶಕ್ತಿಯ ಮುಂದೆ ನಡೆಯುವುದೇ. ಬಡ ಪೆಟ್ಟಿಗೆ ಬಗ್ಗದ ದಕ್ಕದ ಕೊಳ್ಳಿ ದೆವ್ವಕ್ಕೆ ಅದರ ಯೋಗ್ಯತೆಗೆ ತಕ್ಕ 'ಒಳ್ಳೆ' ಪೂಜೆಯೇ ಆಗಬೇಕು. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸಶಸ್ತ್ರ ಹೋರಾಟಕ್ಕೆ ಧುಮುಕಿತು. ಈ ವಿಶಾಲ 'ಎಎನ್‌ಸಿ' ಪಕ್ಷದೊಳಗೆ ಕೆಲಸ ಮಾಡುವ ದಕ್ಷಿಣ ಆಫ್ರಿಕ ಕಮ್ಯೂನಿಸ್ಟ್ ಪಕ್ಷ(ಸಿಪಿಎಸ್‌ಎ) ಕರಿಯರ ಆತ್ಮಗೌರವದ ಹೋರಾಟದ ಬೆನ್ನೆಲುಬು. ಈ ಜೋಡಿಗೆ 'ಕೊಸಾಟೋ-COSATU' ಹೆಸರಿನ ಕಾರ್ಮಿಕರ ಸಂಘಟನೆಯ ಸಾಂಗತ್ಯ. ಈ 'ಎಎನ್‌ಸಿ-ಸಿಪಿಎಸ್‌ಎ-ಕೊಸಾಟೊ' ಈ ತ್ರಿಪಕ್ಷೀಯ ಮೈತ್ರಿ ದಕ್ಷಿಣ ಆಫ್ರಿಕಾದಲ್ಲಿ ಇಂದಿಗೂ ಮುಂದುವರಿದಿದೆ.

ಚಳುವಳಿಯ ಈ ಮೈತ್ರಿ, ಈ 'ಸಮರ ಮೈತ್ರಿ' ಮನುಷ್ಯತ್ವದ ಘನತೆ, ಪ್ರಜಾಪ್ರಭುತ್ವ, ಸ್ವಾತಂತ್ರ್ಯಗಳ ರಕ್ಷಣೆಗಾಗಿ ಜಗತ್ತು ಕಂಡ ಒಂದು ಮಹಾನ್ ಹೋರಾಟಗಾಥೆಯನ್ನು ಸೃಷ್ಟಿಸಿದೆ. ಈ ಸುದೀರ್ಘ ಸಂಘರ್ಷಮಯ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದ ಹುತಾತ್ಮರೆಷ್ಟೋ. ಪ್ರಭುತ್ವದ ಬೂಟಿನಡಿ ನಲುಗಿ ಹೋದ ಜೀವಗಳೆಷ್ಟೋ. ಬಂದೂಕಿನಿಂದ ಸಿಡಿದ ಸಿಡಿಗುಂಡುಗಳಿಗೆ ಹುಡಿಯಾದ ದೇಹಗಳೆಷ್ಟೋ?

ಮಂಡೇಲ ಇಂತಹ ಹೋರಾಟಗಳ ಸಂಕೇತವಾಗಿದ್ದಾರೆ. ಬರೀ ದಕ್ಷಿಣ ಆಫ್ರಿಕಾ, ಭಾರತಗಳಿಗೆ ಮಾತ್ರವಲ್ಲ. ಈ ಕಾರಣಕ್ಕಾಗಿ ಅವರು ಇಡೀ ಜಗತ್ತಿನುದ್ದಗಲ ಗೌರವಿಸಲ್ಪಡುವ ಚೇತನವಾಗಿದ್ದಾರೆ.

ಬದುಕು

ಮಂಡೇಲ ಅವರು ದಕ್ಷಿಣ ಆಫ್ರಿಕಾದ ಪೂರ್ವ ಕೇಪ್‌ಟೌನಿನಲ್ಲಿ 1918ರಲ್ಲಿ ಹುಟ್ಟಿದರು. 1942ರಲ್ಲಿ ತಮ್ಮ 25ನೇ ವಯಸ್ಸಿನಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್(ಎಎನ್‌ಸಿ) ಪಕ್ಷವನ್ನು ಸೇರಿದರು. ನಂತರ 'ಎಎನ್‌ಸಿ'ಯ 'ಯೂತ್ ಲೀಗ್'-ಯುವಸಂಘಟನೆ ಯನ್ನು ರಚಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಅವರು ದಕ್ಷಿಣ ಆಫ್ರಿಕಾದ ವರ್ಣಬೇಧ ಚಳುವಳಿಯ ಒಂದು ಆಧಾರ ದೀವಿಗೆಯಾದ, ವರ್ಣಭೇಧವನ್ನು ತೊಡೆದುಹಾಕುವುದು, ಪ್ರಮುಖ ಕೈಗಾರಿಕೆ, ಉದ್ದಿಮೆಗಳ ರಾಷ್ಟ್ರೀಕರಣ ಮುಂತಾದವುಗಳನ್ನು ಪ್ರತಿಪಾದಿಸಿದ 'ಸ್ವಾತಂತ್ರ್ಯದ ಪಟ್ಟಿ'-



'ಫ್ರೀಡಂ ಚಾರ್ಟರ್' ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿದರು. ಎಎನ್‌ಸಿ ಪಕ್ಷದ ನಾನಾ ಸ್ತರಗಳಲ್ಲಿ ನಾನಾ ಜವಾಬ್ದಾರಿಗಳನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು. ಸ್ವಾತಂತ್ರ್ಯಕ್ಕಾಗಿ, ಸರ್ಕಾರವನ್ನು ಎದುರು ಹಾಕಿಕೊಳ್ಳುವ ಸಭೆಗಳು, ಸಮಾವೇಶಗಳು, ಚಳುವಳಿಗಳು, ಮುಷ್ಕರಗಳು ಬೆಳೆದವು. ನಿಷೇಧ, ಬಂಧನ, ದಿಗ್ಬಂಧನಗಳೇ ಸರ್ಕಾರದ ಉತ್ತರವಾಯಿತು. 1956 ರಲ್ಲಿ ಪ್ರಭುತ್ವದ ವಿರುದ್ಧ ಪಿತೂರಿ ಮತ್ತು ದೇಶದ್ರೋಹದ ಆರೋಪದ ಆಧಾರದಲ್ಲಿ ಬಂಧನಕ್ಕೆ ಗುರಿಯಾದರು. ಮಂಡೇಲಾ ಪ್ರಾಯೋಗಿಕ ಅನುಭವಗಳಲ್ಲಿ ಬೆಳೆದರು. ನಂತರ ಅವರು ಎಎನ್‌ಸಿ ಪಕ್ಷದ ಭೂಗತ ಸಶಸ್ತ್ರ ಸೈನ್ಯ- Umkhonto We Sizwe -('ಉಮ್‌ಖೊಂಟೋ ವಿ ಸಿಸ್ವೆ')ದ ಮುಖ್ಯಸ್ಥರಾಗಿಯೂ ಕೆಲಸ ಮಾಡಿದರು. ನೆಲ್ಸನ್ ಮಂಡೇಲಾ ಅವರು ದಕ್ಷಿಣ ಆಫ್ರಿಕ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿದ್ದರು. ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯಲ್ಲೂ ಅವರು ಇದ್ದರು.

1964 ರಲ್ಲಿ ಮಂಡೇಲ ಅವರು ಜೀವಾವಧಿ ಶಿಕ್ಷೆಗೆ- ಭೀಕರವಾದ ಕಾರಾಗೃಹ ಶಿಕ್ಷೆಗೆ ಗುರಿಯಾದರು. ಅವರನ್ನು ದಕ್ಷಿಣ ಆಫ್ರಿಕದ ಸಮುದ್ರ ತೀರದ ಪ್ರತ್ಯೇಕ ರೊಬೆನ್ ದ್ವೀಪದಲ್ಲಿ ಭಾರಿ ಕಾವಲಿನ ಬಂಧಿಖಾನೆಯಲ್ಲಿ ಇಡಲಾಯಿತು. ಕನಿಷ್ಠ ವೈದ್ಯಕೀಯ ಸೌಲಭ್ಯಗಳೂ ನೀಡದೇ ಜೈಲಿನಲ್ಲಿ ಅವರನ್ನು ಹೀನಾಯವಾದ ದುಡಿಮೆಗೆ ಹಚ್ಚಲಾಯಿತು. ನಿರಂತರ 27 ವರ್ಷಗಳ ಕಾಲ ಮಂಡೇಲ ಜೈಲುವಾಸ ಅನುಭವಿಸಿದರು. ಈ ಯಾವುವೂ ಮಂಡೇಲ ಅವರು ವರ್ಣದ್ವೇಷಿ ದುಷ್ಟ ಸರ್ಕಾರದ ಎದುರು ತಲೆಬಾಗುವಂತೆ ಮಾಡುವಲ್ಲಿ ಯಶಸ್ವಿಯಾಗಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ಜನತೆ ತೋರಿದ ಕೆಚ್ಚೆದೆಯ ಪ್ರತಿರೋಧ, ಆಫ್ರಿಕಾ ಖಂಡ ಮತ್ತು ಇತರೆಡೆಯಿಂದ ಹರಿದು ಬಂದ ಬೆಂಬಲ, ಜಗತ್ತಿನಾದ್ಯಂತ ನಡೆದ ಪ್ರಬಲ ಜನಚಳುವಳಿಗಳು 1990 ರಲ್ಲಿ ಕೊನೆಗೂ ಮಂಡೇಲರನ್ನು ಜೈಲಿನಿಂದ ಬಿಡುಗಡೆಗೊಳಿಸುವಲ್ಲಿ ಯಶಸ್ವಿಯಾದವು. ಮಂಡೇಲ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾದರು. ಚುನಾವಣೆಯಲ್ಲಿ ಎಎನ್‌ಸಿ ಜಯಗಳಿಸಿ ಮತ್ತೆ ಸ್ವತಂತ್ರ ದಕ್ಷಿಣ ಆಫ್ರಿಕಾದ ಮೊದಲ ಚುನಾಯಿತ ಸರ್ಕಾರದ ಅಧ್ಯಕ್ಷರಾದರು. ಐದು ವರ್ಷಗಳ ಒಂದು ಅವಧಿಯ ನಂತರ ತಾವಾಗಿ ಅಧಿಕಾರದ ಹುದ್ದೆ ಬಿಟ್ಟುಕೊಟ್ಟರು. ನಂತರವೂ ಅವರು ತಮ್ಮ ಕೊನೆಯ ಉಸಿರಿನವರೆಗೂ ಜನತೆಗಾಗಿ ಶ್ರಮಿಸಿದರು.


ಭಾರತದೊಂದಿಗೆ ಬಾಂಧವ್ಯ

ಗಾಂಧೀಜಿಯವರಿಗೂ ದಕ್ಷಿಣ ಆಫ್ರಿಕಾಕ್ಕೂ ವಿಶೇಷ ನಂಟು. ಭಾರತದ ಜನತೆಗೂ ಮಂಡೇಲ ಅವರಿಗೂ ವಿಶೇಷ ಬಾಂಧವ್ಯ ಸಿಪಿಐ(ಎಂ) ಪಕ್ಷ-ಮಂಡೇಲ ಅವರ ನಡುವೆ ಸಹ. ಮಂಡೇಲ ಜೈಲಿನಿಂದ ಬಿಡುಗಡೆಗೊಂಡ ಬೆನ್ನ ಹಿಂದೆಯೇ ಭಾರತಕ್ಕೆ – ಕೋಲ್ಕೊತ್ತಾಗೆ ಭೇಟಿ ನೀಡಿದಾಗ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ಸ್ವಾಗತಿಸಿದ್ದು ಇಡೀ ಕೋಲ್ಕೊತ್ತಾವೇ ಎದ್ದು ನಿಂತು ಸ್ವಾಗತಿಸಿದಂತೆ ಆಗಿತ್ತು. ಏಕೆಂದರೆ ಈ ಸಂದರ್ಭಕ್ಕೆ ನೆರೆದದ್ದು ಅಪೂರ್ವ ಜನಸಾಗರ, ಬೃಹತ್ ರ‍್ಯಾಲಿ. ಹೃದಯಸ್ಪರ್ಶಿ ಸ್ಪಂದನ. ಮಂಡೇಲ ಶೋಷಿತರು, ವಂಚಿತರ ನಿಜವಾದ ದನಿಯಾಗಿದ್ದರು. ಮೂರನೇ ಜಗತ್ತಿನ ದೇಶಗಳ ಪರ ಮಾತಾಗಿದ್ದರು. ಸ್ವಾತಂತ್ರ್ಯದ ಪರವಾದ ಮತ್ತು ಅನ್ಯಾಯ, ದಮನಗಳ ವಿರುದ್ಧದ ಹೋರಾಟದ ಒಬ್ಬ ಸಂಗಾತಿಯನ್ನು ಕಳೆದುಕೊಂಡಿರುವುದಕ್ಕಾಗಿ ಸಿಪಿಐ(ಎಂ) ಪಕ್ಷವು ತನ್ನ ಆಳವಾದ ದುಃಖವನ್ನು ಶೋಕವನ್ನು ವ್ಯಕ್ತಪಡಿಸಿದೆ.

ಮನುಷ್ಯತ್ವದ ಘನತೆಯನ್ನು ಎತ್ತಿಹಿಡಿಯುವ, ಅನ್ಯಾಯ ಅಸಮಾನತೆಯ ವಿರುದ್ಧದ ಹೋರಾಟದೊಂದಿಗೆ ಕೈಜೋಡಿಸುವುದೇ ನೆಲ್ಸನ್ ಮಂಡೇಲಾರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಅಲ್ಲವೇ ?

ಕಾಲುಬಾಯಿ ರೋಗ ನಿಯಂತ್ರಣ ಮತ್ತು ಸೂಕ್ತ ಪರಿಹಾರಕ್ಕಾಗಿ ಒತ್ತಾಯಿಸಿ ಪ್ರತಿಭಟನೆ

ಕರ್ನಾಟಕದ ಹತ್ತು ಜಿಲ್ಲೆಗಳಲ್ಲಿ ಮತ್ತು ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ಸಹಸ್ರಾರು ಹಾಲುಕರೆಯುವ ಹಸುಗಳು ಮತ್ತು ದನಕರುಗಳ ಸಾವಿಗೆ ಕಾರಣವಾಗಿರುವ ಕಾಲುಬಾಯಿ



ರೋಗದಿಂದ ಸತ್ತ, ಜಾನುವಾರುಗಳ ಮಾಲಿಕರು ಮತ್ತು ನೊಂದ ರೈತರಿಗೆ ರಾಜ್ಯ ಸರ್ಕಾರ 25 ಸಾವಿರ ಕೇಂದ್ರ ಸರ್ಕಾರ 25 ಸಾವಿರ ಪರಿಹಾರವನ್ನು ನೀಡಬೇಕು. ರೋಗ ನಿಯಂತ್ರಣಕ್ಕೆ ಸಾಮೂಹಿಕ ಆಂದೋಲನದ ಮಾದರಿಯಲ್ಲಿ ಲಸಿಕೆ ನೀಡಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಮುಂತಾದ ಬೇಡಿಕೆಗಳನ್ನಿಟ್ಟು ಕರ್ನಾಟಕ ಪ್ರಾಂತ ರೈತ ಸಂಘದ ಕರ್ನಾಟಕ ರಾಜ್ಯ ಸಮಿತಿ ಮತ್ತು ಹಾಲು ಉತ್ಪಾದಕರ ಹೋರಾಟ ಸಮಿತಿಗಳು ಮತ್ತು ಸಹಕಾರ ಸಂಘಗಳು ಜಂಟಿಯಾಗಿ ಬೆಂಗಳೂರಿನಲ್ಲಿ ಪ್ರತಿಭಟನೆಯನ್ನು ನಡೆಸಿದರು.

ಡಿಸೆಂಬರ್ 3, 2013 ರಂದು ಬೆಂಗಳೂರು ನಗರದ ಟೌನ್ ಹಾಲ್ ಮುಂದೆ ನೆರೆದ ರೈತರು, ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಮೈಸೂರು ಬ್ಯಾಂಕ್‌ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಪಶುಸಂಗೋಪನಾ ಇಲಾಖೆಯ ಹೆಚ್ಚುವರಿ ನಿರ್ದೇಶಕರಾದ ಶಿವಕುಮಾರ್ ಅವರು ಮನವಿ ಪತ್ರವನ್ನು ಸ್ವೀಕರಿಸಿ ಮಾತನಾಡಿ ಬೆಳಗಾಂ ಅಧಿವೇಶನದಿಂದ ಸಚಿವರು ಮತ್ತು ಅಧಿಕಾರಿ ವರ್ಗದವರು ಮರಳಿ ಬೆಂಗಳೂರಿಗೆ ಬಂದ ಮೇಲೆ ಸಂಘಟನೆಗಳ ಪ್ರತಿನಿಧಿಗಳು ಮತ್ತು ಸಂಬಂಧಿಸಿದ ಸಚಿವರು ಮತ್ತು ಅಧಿಕಾರಿಗಳ ಸಭೆ ಕರೆದು ಮಾತನಾಡುವುದಾಗಿ ಭರವಸೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರುಗಳಾದ ಜಿ.ವಿ.ಶ್ರೀರಾಮರೆಡ್ಡಿ, ಜಿ.ಸಿ.ಬಯ್ಯಾ-ರೆಡ್ಡಿ, ಎನ್.ವೆಂಕಟಾಚಲಯ್ಯ, ಮುಂತಾದವರು ಮೆರವಣಿಗೆ ಮತ್ತು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ, ಮಂಡ್ಯ, ತುಮಕೂರು ಮುಂತಾದ ಜಿಲ್ಲೆಗಳಿಂದ ಪ್ರತಿಭಟನಾಕಾರರು ಪಾಲ್ಗೊಂಡಿದ್ದರು.

ಅಖಿಲ ಭಾರತ ಮಟ್ಟದ ಸಮಸ್ಯೆಯಾದ ಈ ಸಮಸ್ಯೆ ಸಂಬಂಧ ಕೇಂದ್ರ ಸರ್ಕಾರವು ಸೂಕ್ತ ನಿಧಿಯನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಲು ಅಖಿಲ ಭಾರತ ಕಿಸಾನ್ ಸಭಾದ ಕೇಂದ್ರದಿಂದ ಸಂಸದರಾದ ಬಾಲಗೋಪಾಲ್ ಮತ್ತು ಪಾರ್ಲಿಮಂಟಿನಲ್ಲಿ ಸಿಪಿಐ(ಎಂ) ಸಂಸದೀಯ ಪಕ್ಷದ ನಾಯಕರಾದ ಬಸುದೇವ ಆಚಾರ್ಯ ಮುಂತಾದವರನ್ನು ಸಂಪರ್ಕಿಸಲಾಗಿದ್ದು ಅವರು ಪಾರ್ಲಿಮೆಂಟಿನಲ್ಲಿ ಸಹ ಈ ಪ್ರಶ್ನೆಯನ್ನು ಎತ್ತುವ ಬಗೆಗೆ ಭರವಸೆ ನೀಡಿದ್ದಾರೆಂದು ಈ ಸಂದರ್ಭದಲ್ಲಿ ತಿಳಿಸಲಾಯಿತು. ■

ಎಲ್‌ಪಿಜಿಗೆ ಆಧಾರ ಕಡ್ಡಾಯ ವಿರೋಧಿಸಿ ಸಿಪಿಐ(ಎಂ) ಪ್ರತಿಭಟನೆ

ಕೇಂದ್ರ ಸರ್ಕಾರವು ಸಬ್ಸಿಡಿ ಅಡುಗೆ ಅನಿಲ ಸಿಲಿಂಡರ್‌ಗಳಿಗೆ ಆಧಾರ್ ಕಾರ್ಡ್ ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ ಸಿಪಿಐ(ಎಂ) ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯಕರ್ತರು ನವೆಂಬರ್ 25 ರಂದು ಪ್ರತಿಭಟನೆ ನಡೆಸಿದರು.

ಬೆಂಗಳೂರು ನಗರದ ಮಿಷನ್ ರಸ್ತೆಯಲ್ಲಿರುವ ಭಾರತೀಯ ತೈಲ ನಿಗಮದ ಕಛೇರಿ ಎದುರು ಪ್ರತಿಭಟನೆ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರು 'ಎಲ್‌ಪಿಜಿಗೆ ಆಧಾರ್ ಕಡ್ಡಾಯಗೊಳಿಸಿರುವ ನಿರ್ಧಾರವನ್ನು ಕೂಡಲೇ ಕೈಬಿಡಬೇಕು' ಎಂದು ಒತ್ತಾಯಿಸಿದರು.

'ಕೇಂದ್ರ ಸರ್ಕಾರದ ಸೇವೆಗಳಿಗೆ ಆ ಧಾರ್ ಕಡ್ಡಾಯವಲ್ಲ ಎಂದು ಸುಪ್ರೀಂಕೋರ್ಟ್ ಆದೇಶಿಸಿದೆ. ಆದರೂ ತೈಲ ಕಂಪನಿಗಳು ಆಧಾರ್ ಸಂಖ್ಯೆ ಸಲ್ಲಿಸುವಂತೆ ಎಲ್‌ಪಿಜಿ ಗ್ರಾಹಕರ ಮೊಬೈಲ್‌ಗೆ ಸಂದೇಶ ಕಳುಹಿಸಿ, ಹಿಂಸಿಸುತ್ತಿರುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಸಿಪಿಐ(ಎಂ) ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ. ಪ್ರಕಾಶ್ 'ಆಧಾರ್‌ಗೆ ಸಂಬಂಧಿಸಿದಂತೆ ಯಾವುದೇ ಕಾನೂನು ಅಥವಾ ಕಾಯಿದೆ ಇಲ್ಲ. ಈ ವ್ಯವಸ್ಥೆಯ ಬಗ್ಗೆ ಸಾಕಷ್ಟು ಅನುಮಾನ, ಗೊಂದಲಗಳಿವೆ. ಜನತೆಯ ಖಾಸಗಿತನ ಮತ್ತು ದೇಶದ ಭದ್ರತೆಗೆ ಆಧಾರ್ ಅಪಾಯಕಾರಿ ಎನಿಸಿದೆ. ಆಧಾರ್ ಬಗ್ಗೆ ಸಂಸತ್ತಿನಲ್ಲಿ ಚರ್ಚಿಸಿ, ಅಂಗೀಕಾರ ಪಡೆದಿಲ್ಲ. ಆದಾಗ್ಯೂ ಆಧಾರ್ ಸಂಖ್ಯೆ ನೀಡದಿದ್ದರೆ, ಸಿಲಿಂಡರ್ ಪೂರೈಕೆ ಸ್ಥಗಿತಗೊಳಿಸಲಾಗುವುದು ಎಂದು ತೈಲ ಕಂಪನಿಗಳು ಗ್ರಾಹಕರಿಗೆ ಬೆದರಿಗೆ ಹಾಕುತ್ತಿವೆ' ಎಂದು ಕಿಡಿಕಾರಿದರು.

'ಸರಕಾರಿ ಸ್ವಾಮ್ಯದ ತೈಲ ನಿಗಮಗಳನ್ನು ರಿಲಯನ್ಸ್‌ನಂತಹ ಕಂಪನಿಗಳಿಗೆ ನೀಡಲು ಹುನ್ನಾರ ನಡೆಸಲಾಗುತ್ತಿದೆ. ಹಾಗಾಗಿಯೇ, ನೇರ ನಗದು ವರ್ಗಾವಣೆ ವ್ಯವಸ್ಥೆ ಜಾರಿಗೆ ತರಲಾಗಿದೆ' ಎಂದು ಆರೋಪಿಸಿದರು. ಸಿಪಿಐ(ಎಂ) ಸದಸ್ಯರಾದ ಮಂಜುನಾಥ್, ಹೆಚ್.ಡಿ. ರೇವಪ್ಪ, ಸದಾನಂದ ಭಟ್, ಶ್ರೀನಿವಾಸಮೂರ್ತಿ, ಸಂತೋಷ್, ಬಸಮ್ಮ, ಡಿ.ಸುರೇಶ್, ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ ಮತ್ತಿತರರು ಪಾಲ್ಗೊಂಡಿದ್ದರು. ■

ಐದು ರಾಜ್ಯಗಳ ವಿಧಾನಸಭಾ ಚುನಾವಣೆ: ಫಲಿತಾಂಶದ ಕುತೂಹಲ

ಐದು ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶವನ್ನು ಎಲ್ಲರೂ ಕುತೂಹಲದಿಂದ ಕಾಯುತ್ತಿದ್ದಾರೆ.

ಜನತೆ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳಿಂದ ಬೇಸತ್ತು ಹೋಗಿದ್ದಾರೆ. ಅದೇ ರೀತಿ ಕೋಮುವಾದಿ ವಿಭಜಕ ಶಕ್ತಿಗಳಿಂದಲೂ ನೊಂದಿದ್ದಾರೆ.


ಚುನಾವಣೆ ನಡೆದ ಮಧ್ಯಪ್ರದೇಶ, ಛತ್ತೀಸಗಡ, ರಾಜ್ಯಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪ್ರಧಾನ ಪಕ್ಷಗಳಾಗಿವೆ. ದೆಹಲಿಯಲ್ಲಿ ಅತಂತ್ರ ವಿಧಾನಸಭೆ ರಚನೆಯಾಗುವ ಸಾಧ್ಯತೆ ಮತ್ತು ಆಮ್ ಆದ್ಮಿ ಪಕ್ಷ ಸಹ ಒಂದು ಪ್ರಮುಖ ಪಕ್ಷವಾಗಿ ಹೊಮ್ಮುವ ಬಗೆಗೆ ಸಮೀಕ್ಷೆಗಳಲ್ಲಿ ಅಂದಾಜಿಸಲಾಗಿದೆ. ರಾಜಸ್ತಾನದಲ್ಲಿ ಇದೇ ಮೊದಲ ಬಾರಿಗೆ ಕಾಂಗ್ರೆಸ್, ಬಿಜೆಪಿ ಅಲ್ಲದ ರಾಜಕೀಯ ಶಕ್ತಿಗಳು ಬಲಗೊಳ್ಳುವ ಮುನ್ಸೂಚನೆಯನ್ನು ಕೆಲವು ಸಮೀಕ್ಷೆ ಕೊಟ್ಟಿವೆ. ಇಲ್ಲಿ ಸಿಪಿಐ(ಎಂ), ಸಿಪಿಐ, ಜೆಡಿ(ಯು), ಜೆಡಿ(ಎಸ್), ಸಮಾಜವಾದಿ ಪಕ್ಷಗಳು ಸೇರಿ ರಾಜಸ್ತಾನ್ ಲೋಕ ತಾಂತ್ರಿಕ ಮೋರ್ಚ(ಆರ್‌ಎಲ್‌ಎಂ) ಎಂಬ ರಂಗ ರಚಿಸಿಕೊಂಡಿವೆ. ಇದಲ್ಲದೇ ಸ್ವತಂತ್ರ ಸಂಸದ ಕಿರೋಲಿ ಲಾಲ್ ಮೀನಾ ಅವರ ನೇ 'ನ್ಯಾಷನಲ್ ಪೀಪಲ್ ಪಾರ್ಟಿ' ಸಹ ವ್ಯಾಪ ಸ್ಪರ್ಧೆಗಿಳಿದಿದೆ. 2008ರಲ್ಲಿ ಸಿಪಿಐ(ಎಂ) ಮ ಸ್ಥಾನಗಳನ್ನು ಗೆದ್ದಿತ್ತು. ಈ ಬಾರಿ 38 ಸ್ಥಾನ ಸ್ಪರ್ಧೆ ನಡೆಸಿರುವ ಸಿಪಿಐ(ಎಂ) ರೈತಪರ ಜನಪರ ಹೋರಾಟಗಳಿಂದ ಮತ್ತಷ್ಟು ಬಲ ಸ್ಪರ್ಧೆ ನೀಡಿದೆ.

ರಾಜಸ್ತಾನದ ಸಿಕಾರ್ ಜಿಲ್ಲೆಯಲ್ಲಿ ರಾಮ್ ದತಾರಾಮ್ ಗಢದಲ್ಲಿ ಸ್ಪ ಮುಂಚೂಣಿಯಲ್ಲಿದ್ದಾರೆ. ದೌಡ್ ಕ್ಷೇತ್ರ ಹಾಲಿ ಶಾಸಕ ಪೆಮಾ ರಾಮ್ ನಡೆಸಿದ್ದಾರೆ. ಈ ಜಿಲ್ಲೆಯ ಎಂಟು ಕ್ಷೇತ್ರ ಸಿಪಿಐ(ಎಂ) ಸ್ಪರ್ಧೆ ನಡೆಸಿದೆ. ಇನ್ನು ಶ್ರೀಗಂಗಾನಗರ ಜಿಲ್ಲೆಯಲ್ಲಿ ಒಬ್ಬ ಹಾಲಿ ಶ ಸೇರಿದಂತೆ ನಾಲ್ಕು ಅಭ್ಯರ್ಥಿಗಳು ಕಣದಲ್ಲಿದ ಹನುಮಾನ್ ಗಢ ಮತ್ತು ನಾಗುರ ಜಿಲ್ಲೆ ತಲಾ ಐದು ಕಡೆ, ಚುರು ಜಿಲ್ಲೆಯಲ್ಲಿ ನ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧೆ ನಡೆಸಿದೆ.

ದೆಹಲಿಯಲ್ಲಿ ಮೂರು, ಮಧ್ಯಪ್ರದೇಶ ಎಂಟು, ಚತ್ತೀಸ್ ಗಢದಲ್ಲಿ ನಾಲ್ಕು ಕ್ಷೇತ್ರ ಸಿಪಿಐ(ಎಂ) ಪಕ್ಷ ಸ್ಪರ್ಧೆಯಲ್ಲಿದೆ.

ಧರ್ಮಸ್ಥಳ ಪ್ರಕರಣ ಸಂಪುಟದಿಂದ ಸೊರಕೆ ವಜಾಕ್ಕೆ ಆಗ್ರಹ

1979ರಿಂದ ಇಲ್ಲಿಯವರೆಗೆ ಧರ್ಮಸ್ಥಳ ಮತ್ತು ಉಜಿರೆ ಗ್ರಾಮಗಳಲ್ಲಿ ನಡೆದ ಎಲ್ಲಾ ಕೊಲೆ, ನಿಗೂಢ ಸಾವು, ಸಂಶಯಾಸ್ಪದ ಆತ್ಮಹತ್ಯೆ, ಅಪಘಾತ ಮತ್ತು ಅತ್ಯಾಚಾರ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಹಾಗೂ ವಿದ್ಯಾರ್ಥಿನಿ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಶಂಕಿತ ಆರೋಪಿಗಳನ್ನು ಬೆಂಬಲಿಸಿ ಬಹಿರಂಗ ಹೇಳಿಕೆ ನೀಡಿ, ಪ್ರಕರಣದ ತನಿಖೆಯ ಮೇಲೆ ಪ್ರಭಾವ ಬೀರುವ ಪ್ರಯತ್ನ ಮಾಡಿದ ರಾಜ್ಯದ ನಗರಾಭಿವೃದ್ಧಿ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಮಾರ್ ಸೊರಕೆಯವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ ಕರ್ನಾಟಕ ಜನಪರ ವೇದಿಕೆಯು ಇತ್ತೀಚೆಗೆ ಉಡುಪಿಯಲ್ಲಿ ಹಕ್ಕೊತ್ತಾಯ ಪ್ರತಿಭಟನಾ ಧರಣಿಯನ್ನು ಏರ್ಪಡಿಸಿತ್ತು.




ಸೌಜನ್ಯಾಳಿಗೆ ನ್ಯಾಯ ಕೋರಿ ರಾಜ್ಯದ ಹಲವೆಡೆ ಚಳುವಳಿ ನಡೆಯುತ್ತಿದ್ದಾಗ, ಧರ್ಮಸ್ಥಳದ ವಿರೇಂದ್ರ ಹೆಗ್ಗಡೆಯವರು ಉಜಿರೆಯಲ್ಲಿ ಕರೆದಿದ್ದ ಸಭೆಯಲ್ಲಿ ಪಾಲ್ಗೊಂಡು 'ಖಾವಂದಿರೇ, ಹೆದರಬೇಡಿ, ನಾವು ಸಚಿವರು ನಿಮ್ಮ ಕೈ ಬಿಡೋದಿಲ್ಲ, ನಾವು ನಿಮ್ಮ ಜತೆ-ಗಿದ್ದು ನಿಮ್ಮ ಹಿತ ರಕ್ಷಣೆ ಮಾಡುತ್ತೇವೆ' ಎಂದು ಭರವಸೆಯನ್ನಿತ್ತ ಸೊರಕೆಯ ನಿಮಿಷ ಮಾತ್ರವೂ ಕರಾವಳಿ ಪ್ರತಿನಿಧಿಯ ಸಂಪುಟದಲ್ಲಿ ಮುಂದುವರಿಯಕೂಡದು ಎ ಧರಣಿ ನಿರತರು ಆಗ್ರಹಿಸಿದರು.

ಉಡುಪಿ ಸರ್ವಿಸ್ ನಿಲ್ದಾಣದ ಬಳಿಯಲ್ಲಿ ದಿನವಿ ನಡೆದ ಧರಣಿಯಲ್ಲಿ ವಿ ಸಂಘಟನೆಗಳ ಪ್ರಮುಖ ಭಾಗವಹಿಸಿದ್ದರು. 1979ರಲ್ಲಿ ನ ಧರ್ಮಸ್ಥಳ ಶಿಕ್ಷಣ ಸಂಸ್ಥೆಯ ಶಿ ಶ್ರೀಮತಿ ವೇದವಲ್ಲಿ ನಿಗೂ ಸಾವು, 1986 ರಲ್ಲಿ ನ ವಿದ್ಯಾರ್ಥಿನಿ ಪದ್ಮಲತಾ ಅತ್ಯಾಚ ಮತ್ತು ಕೊಲೆ, 2013 ರಲ್ಲಿ ನ ರವಿಪೂಜಾರಿ ಹಾಗೂ ಸೌಜ ಪ್ರಕರಣದ ಶಂಕಿತ ಆರೋಪಿ ಧೀರಜ್ ಕೆ ಮನೆ ಕೆಲಸದ ಮಹಿಳೆ ವಾರಿಜಾಳ ಸಂಶಯ ಆತ್ಮಹತ್ಯೆ, ಸಹಿತ ಕಳೆದ 34 ವರ್ಷಗಳ ಧರ್ಮಸ್ಥಳ ಸುತ್ತಮುತ್ತ ನಡೆದ ಎಲ್ಲಾ ಕೊ ಅತ್ಯಾಚಾರ ಮತ್ತು ಅಸಹಜ ಸಾವುಗ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕ ತನಿಖೆಯಲ್ಲಿ ಕರ್ತವ್ಯಲೋಪ ಪಕ್ಷಪಾತವೆಸಗಿದ ಅಧಿಕಾರಿಗಳನ್ನು ಗುರುತ ಅವರ ವಿರುದ್ಧ ಕಾನೂನು ಕ್ರಮ ಜರಗಿಸಬೇಕೆಂದ ಪ್ರತಿಭಟನಾಕಾರರು ಒತ್ತಾಯಿಸಿದರು. ■



ಜನಶಕ್ತಿ
ಕನ್ನಡ ವಾರಪತ್ರಿಕೆ

ಬಾಬ್ರಿ ಮಸೀದಿ ಧ್ವಂಸದ ಹತ್ತುದಿನಗಳ ನಂತರ ನೇಮಕಗೊಂಡ ಲಿಬರ್‌ಹಾನ್ ತನಿಖಾ ಆಯೋಗ .ಹದಿನಾರೂವರೆ ವರ್ಷಗಳ ಶ್ರಮದ ಮತ್ತು 48 ಸಮಯಾವಧಿ ವಿಸ್ತರಣೆಗಳ ನಂತರ ಸಲ್ಲಿಸಿದ ವರದಿಯನ್ನು ಸಂಸತ್ತಿನಲ್ಲಿ 2009ರಲ್ಲಿ ಮಂಡಿಸಲಾಯಿತು. ಆ ವರದಿ "ಈ ಧ್ವಂಸವನ್ನು ಬಹಳಷ್ಟು ಶ್ರಮವಹಿಸಿ ಮಾಡಿದ ಸಿದ್ಧತೆ ಮತ್ತು ಪೂರ್ವಯೋಜನೆಯಿಂದ ನಡೆಸಲಾಗಿದೆ ಎಂದು ಖಂಡತುಂಡವಾಗಿ ತೀರ್ಮಾನಕ್ಕೆ ಬರುವಂತಾಗಿದೆ" ಎಂದು ಹೇಳಿತ್ತು. ಆದರೆ ಎರಡು ದಶಕಗಳು ಕಳೆದು ಹೋದರೂ ಬಾಬ್ರಿ ಮಸೀದಿ ಧ್ವಂಸಕ್ಕಾಗಿ ಯಾರಿಗೂ ಶಿಕ್ಷೆಯಾಗಿಲ್ಲ, ಅದಾದ ಹತ್ತು ವರ್ಷಗಳ ನಂತರ ನಡೆದ ಗುಜರಾತ್ ಹತ್ಯಾಕಾಂಡಕ್ಕೆ ಪ್ರಮುಖ ಹೊಣೆಗಾರರಾಗಿದ್ದವರಲ್ಲಿ ಕೂಡ ಯಾರಿಗೂ ಇದುವರೆಗೆ ಶಿಕ್ಷೆ ಆಗಿಲ್ಲ. ಇದು ಕೋಮುವಾದಿ ಶಕ್ತಿಗಳಿಗೆ ಇನ್ನಷ್ಟು ಧೈರ್ಯ ತುಂಬಿದೆ. ಈ ಸವಾಲನ್ನು ಈಗಲೂ ಜೀವಂತವಾಗಿಟ್ಟಿದೆ. ಇದನ್ನೀಗ ನೇರವಾಗಿ ಎದುರಿಸಬೇಕಾಗಿದೆ, ಸೋಲಿಸಬೇಕಾಗಿದೆ



ಎರಡು ದಶಕಗಳ ನಂತರವೂ ಜೀವಂತವಾಗಿದೆ ಕೋಮುವಾದದ ಸವಾಲು

ಸೀತಾರಾಮ್ ಯೆಚೂರಿ

ಬಾಬ್ರಿ ಮಸೀದಿಯನ್ನು ನಿಷ್ಕಾರಣವಾಗಿ ಉರುಳಿಸಿ ಈ ಡಿಸೆಂಬರ್ 6ಕ್ಕೆ 21 ವರ್ಷಗಳಾಗುತ್ತಿದೆ. ಅದು ಒಂದು ಕಟ್ಟಡದ ಧ್ವಂಸವಷ್ಟೇ ಆಗಿರಲಿಲ್ಲ. ಅಥವ ಕೇವಲ ಒಂದು ಇಸ್ಲಾಮೀ ಧಾರ್ಮಿಕ ರಚನೆಯ ಧ್ವಂಸವಷ್ಟೇ ಆಗಿರಲಿಲ್ಲ. ಒಂದು ಶತಮಾನಕ್ಕೂ ಹೆಚ್ಚು ಕಾಲ ನಡೆದ ಸ್ವಾತಂತ್ರ್ಯದ ಮತ್ತು ಆಧುನಿಕತೆಯ ಹೋರಾಟದ ಮೂಲಕ ಮೂಡಿ ಬಂದ ಭಾರತದ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ತಳಪಾಯವನ್ನೇ ಧ್ವಂಸಮಾಡುವ ಪ್ರಯತ್ನಗಳ ಸಂಕೇತವಾಗಿತ್ತದು. ಅಂದಿನಿಂದ ಇಂದಿನವರೆಗೂ ಆರೆಸ್ಸೆಸ್/ಬಿಜೆಪಿ ಈ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತ, ಅದು ಅಲ್ಲಿ ನೆರೆದಿದ್ದ ಕರಸೇವಕರ ಸ್ವಯಂಸ್ಫೂರ್ತ 'ಕ್ರೋಧ'ದ ಫಲಿತಾಂಶ ಎಂದು ಹೇಳಿಕೊಳ್ಳುತ್ತಾ ಬಂದಿವೆ.


ನಿಜ, ಅವರು ಡಿಸೆಂಬರ್ 6, 1992ರಂದು ಕಂಡದ್ದು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸಲೆಂದು ಎಡೆಬಿಡದೆ ಉಂಟು ಮಾಡಿದ್ದ ವಾತಾವರಣದ ಫಲಿತಾಂಶವನ್ನು ಎಂಬುದನ್ನು ಬೇಕೆಂದೇ ಮರೆಮಾಚುತ್ತಾರೆ. ಅವರ ಗುರಿ ತಕ್ಷಣದ ಚುನಾವಣಾ ಮತ್ತು ರಾಜಕೀಯ ಪ್ರಯೋಜನಕ್ಕಾಗಿ ಬಹುಸಂಖ್ಯಾತ ಕೋಮಿನವರ ವೋಟ್‌ಬ್ಯಾಂಕ್‌ನ್ನು ಕ್ರೋಢೀಕರಿಸುವುದು ಮಾತ್ರವೇ ಅಲ್ಲ, ನಮ್ಮ ಸ್ವಾತಂತ್ರ್ಯದ ವೇಳೆಯಲ್ಲಿ ಭಾರತದ ಜನತೆ ಸೋಲಿಸಿದ್ದ ಅವರ ಯೋಜನೆಯನ್ನು, ಅಂದರೆ ನಮ್ಮ ಆಧುನಿಕ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಅವರ ಯೋಜನೆಯನ್ನು ಮುಂದೊತ್ತುವುದೂ ಆಗಿತ್ತು.

ಪೂರ್ವಯೋಜಿತ ಧ್ವಂಸಕಾರ್ಯ

ಆ ಧ್ವಂಸಕಾರ್ಯದ ಹತ್ತುದಿನಗಳ ನಂತರ ಲಿಬರ್‌ಹಾನ್ ತನಿಖಾ ಆಯೋಗವನ್ನು ರಚಿಸಲಾಗಿತ್ತು. ಹದಿನಾರೂವರೆ ವರ್ಷಗಳ ಶ್ರಮದ ಮತ್ತು 48 ಸಮಯಾವಧಿ ವಿಸ್ತರಣೆಗಳ ನಂತರ ಅಂತಿಮವಾಗಿ ಅದರ ವರದಿಯನ್ನು ಸಂಸತ್ತಿನಲ್ಲಿ 2009ರಲ್ಲಿ ಮಂಡಿಸಲಾಯಿತು. ಆ ವರದಿಯ ಪುಟ 917ರಲ್ಲಿ, ಪರಿಚ್ಛೇದ 158.10ರಲ್ಲಿ ಆಯೋಗ ತಾನು ಕಂಡು-ಕೊಂಡ ಸಂಗತಿಗಳ ಮತ್ತು ತನ್ನ ತೀರ್ಮಾನಗಳ ಸಾರಾಂಶವನ್ನು ಹೀಗೆ ಕೊಟ್ಟಿತ್ತು::

"ಈ ಆಂದೋಲನಗಳ ಮುಖಂಡರ ಮತ್ತು ರಾಜಕೀಯ ಅಥವ ಸಾಮಾಜಿಕ ಸಂಘಟನೆಗಳ ಪ್ರತಿಮೆಗಳ ದಾವೆಗಳು, ಕರಸೇವಕರು ಬರಿಯ ಕ್ರೋಧ ಅಥವ ಭಾವುಕತೆಯಿಂದ ಈ ಧ್ವಂಸವನ್ನು ನಡೆಸಿದರು ಎಂಬ ತೀರ್ಮಾನಕ್ಕೆ ಬರಲು ಅನುವು ಮಾಡಿಕೊಡುವುದಿಲ್ಲ. ದಾಳಿಯ ವಿಧಾನ, ಧ್ವಂಸ ನಡೆಸಿದ ಕರಸೇವಕರ ಸಂಖ್ಯೆ ಮತ್ತು ಅಷ್ಟು ಮಂದಿಗೆ ಸ್ಥಳಾವಕಾಶ ಒದಗಿಸುವಲ್ಲಿನ ಅಡೆ-ತಡೆಗಳು, ಗುಮ್ಮಟಗಳನ್ನು ಪ್ರವೇಶಿಸಿದ ಕರಸೇವಕರ ಗುರುತನ್ನು ಮರೆಮಾಡಿರುವುದು, ಗುಮ್ಮಟದ ಅಡಿಯಿಂದ ಮೂರ್ತಿಯನ್ನು ಮತ್ತು ಹುಂಡಿಯನ್ನು ತೆಗೆದಿರುವುದು ಹಾಗೂ ನಂತರ ತಾತ್ಕಾಲಿಕ ದೇವಸ್ಥಾನದಲ್ಲಿ ಅದರ ಮರು-ಪ್ರತಿಷ್ಠಾಪನೆ, ಧ್ವಂಸ ಮತ್ತು ತಾತ್ಕಾಲಿಕ ದೇವಸ್ಥಾನದ ತ್ವರಿತ ನಿರ್ಮಾಣಕ್ಕೆ ಅಗತ್ಯವಾದ ಸಾಧನಗಳು ಮತ್ತು ಸಾಮಗ್ರಿಗಳು ಲಭ್ಯವಾಗಿರುವುದು ಇವೆಲ್ಲವೂ ಈ ಧ್ವಂಸವನ್ನು ಬಹಳಷ್ಟು ಶ್ರಮವಹಿಸಿ ಮಾಡಿದ ಸಿದ್ಧತೆ ಮತ್ತು ಪೂರ್ವಯೋಜನೆಯಿಂದ ನಡೆಸಲಾಗಿದೆ ಎಂದು ಖಂಡತುಂಡವಾಗಿ ಕಾಣಲು ಮತ್ತು ತೀರ್ಮಾನಕ್ಕೆ ಬರಲು ಹಾದಿ ಮಾಡಿಕೊಡುತ್ತವೆ."

ಇಂತಹ ಒಂದು ಉದ್ದೇಶಪೂರ್ವಕವಾದ ಪೂರ್ವಯೋಜಿತ ಕಾರ್ಯಾಚರಣೆಯನ್ನು ಮಬ್ಬುಗೊಳಿಸುವ ಪ್ರಯತ್ನ ನಡೆದಿದೆಯಷ್ಟೇ ಅಲ್ಲ, ದೇಶವನ್ನು ಮತ್ತು ನಮ್ಮ ಪ್ರಜಾಪ್ರಭುತ್ವದ ವಿವಿಧ ಸಂಸ್ಥೆಗಳನ್ನು ಸಂಪೂರ್ಣವಾಗಿ ದಾರಿತಪ್ಪಿಸುವ ಮೂಲಕ ಇದನ್ನು ಮಾಡಲಾಗಿದೆ. ಎಲ್.ಕೆ.ಅಡ್ವಾಣಿಯವರ ನೇತೃತ್ವದ 'ಮಂದಿರ್ ವಹೀಂ ಬನಾಯೇಂಗೆ' ಆಂದೋಲನ ದೇಶದೆಲ್ಲೆಡೆ ಕೋಮುವಾದಿ ಹಿಂಸಾಚಾರ ಮತ್ತು ರಕ್ತಪಾತ ನಡೆಸುತ್ತಿದ್ದಾಗ ನವಂಬರ್ 1991ರಲ್ಲಿ ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಒಂದು ಸಭೆಯಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸುವ ಸಾಧ್ಯತೆಯ ಭೀತಿಯಿದೆ ಎಂಬುದನ್ನು ಎತ್ತಲಾಯಿತು. ಆಗಿನ ಉತ್ತರಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಆಗ ಇಂತಹ ಯಾವುದಕ್ಕೂ ಅನುಮತಿಯಿರುವುದಿಲ್ಲ ಎಂದು ಭರವಸೆ ಕೊಟ್ಟಿದ್ದರು. "ವಿವಾದಿತ ಕಟ್ಟಡದ ಬಗ್ಗೆ ಹೇಳುವುದಾದರೆ ಅದರ ರಕ್ಷಣೆ-ಯ ಸಮಸ್ತ ಹೊಣೆ ನಮ್ಮದು ಎಂದು ನಿಮಗೆ ಆಶ್ವಾಸನೆ ಕೊಡುತ್ತಿದ್ದೇನೆ. ವಿವಾದಿತ ಕಟ್ಟಡದ ಬಗ್ಗೆ ನಾವು ಜಾಗರೂಕರಾಗಿದ್ದೇವೆ. ಅದರ ರಕ್ಷಣೆಯ ವ್ಯವಸ್ಥೆಗಳನ್ನು ಬಲಪಡಿಸಿದ್ದೇವೆ. ಈಗ ಯಾರೂ ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಮೂವರು ವ್ಯಕ್ತಿಗಳು ಗುಮ್ಮಟದ ತುದಿಗೆ ಹತ್ತಿರುವ ಘಟನೆಯ ಪುನರಾವರ್ತನೆಗೆ ಅವಕಾಶ ಕೊಡುವುದಿಲ್ಲ. ಈ ಮಂಡಳಿಯ ಮೂಲಕ ನಾನು ಈ ಆಶ್ವಾಸನೆಯನ್ನು ನಿಮಗೆ ಕೊಡಬಯಸುತ್ತೇನೆ. ಒಟ್ಟಾಗಿ ಹೇಳುವುದಾದರೆ, ನ್ಯಾಯಾಲಯದ ಮುಂದೆ ನಮ್ಮ ಸ್ಪಷ್ಟ ಸಲ್ಲಿಕೆ, ನ್ಯಾಯಾಲಯ ನೀಡಿದ ಆದೇಶವನ್ನು ಪಾಲಿಸಲಾಗುವುದು. ಅದರ ಆದೇಶವನ್ನು ಉಲ್ಲಂಘಿಸಿ ಏನ್ನೂ ನಾವು ಮಾಡಬಯಸುವುದಿಲ್ಲ." ಎಂದಿದ್ದರು ಆ ಮುಖ್ಯಮಂತ್ರಿಗಳು.



ದಾರಿತಪ್ಪಿಸುವ ಪ್ರಯತ್ನ

ಆದರೆ, ಧ್ವಂಸ ನಡೆಸಿದ ನಂತರ ತಕ್ಷಣವೇ ಕಲ್ಕತ್ತೆಯಲ್ಲಿ ಒಂದು ಸಾರ್ವಜನಿಕ ಭಾಷಣದಲ್ಲಿ ಇದೇ ಮುಖ್ಯಮಂತ್ರಿ, ಈ ಧ್ವಂಸದ ಕೆಲಸವನ್ನು ಯಾರಾದರೂ ಕಂಟ್ರಾಕ್ಟರಿಗೆ ಒಪ್ಪಿಸಿದ್ದರೆ ಅವರಿಗೆ ಹಲವು ದಿನಗಳೇ ಬೇಕಾಗುತ್ತಿತ್ತು, ಆದರೆ ತನ್ನ ಕರಸೇವಕರು ಕೇವಲ ಐದು ಗಂಟೆಗಳಲ್ಲಿ ಆ ಗುರಿ ಸಾಧಿಸಿದರು ಎಂದು ಹೆಮ್ಮೆಯಿಂದ ಹೇಳಿಕೊಂಡರು. ಇದು ಆರೆಸ್ಸೆಸ್/ಬಿಜೆಪಿಯ ಎರಡು ನಾಲಗೆಯ ಸ್ವರೂಪಕ್ಕೆ ಅನುಗುಣವಾಗೇ ಇತ್ತು. ದಿವಂಗತ ಕಾಮ್ರೇಡ್ ಜ್ಯೋತಿ ಬಸು, ಆಗಿನ ಪಶ್ಚಿಮ ಬಂಗಾಳ ರಾಜ್ಯದ ಮುಖ್ಯಮಂತ್ರಿಗಳಾಗಿ ಈ ಭಾಷಣದ ವಿಡಿಯೋ ರೆಕಾರ್ಡನ್ನು ಲಿಬರ್‌ಹಾನ್ ಆಯೋಗಕ್ಕೆ ಸಲ್ಲಿಸಿದ್ದರು.

ಆದ್ದರಿಂದ ಈ ಧ್ವಂಸಕ್ರಿಯೆ ಆಧುನಿಕ ಭಾರತೀಯ ಗಣತಂತ್ರದ ಬುನಾದಿಯನ್ನೇ ಬುಡಮೇಲು ಮಾಡುವ ಒಂದು ಯೋಜಿತ ಕ್ರಿಯೆ ಎಂಬುದು ಸ್ಪಷ್ಟ. ಈ ಕ್ರಿಯೆಯೇ ಸಂವಿಧಾನವನ್ನು ಮತ್ತು ಅದರಲ್ಲಿ ಪ್ರತಿಷ್ಠಾಪಿಸಿರುವ, ನಮ್ಮ ದೇಶದ ವಿಶಾಲ ಸಾಮಾಜಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿಫಲಿಸುವ ಜಾತಿ, ಮತ ಅಥವ ಇನ್ನಾವುದೇ ಭೇದಭಾವವಿಲ್ಲದೆ ಎಲ್ಲ ನಾಗರಿಕರ ಸಮಾನತೆಯನ್ನು ಎತ್ತಿ ಹಿಡಿಯುವ ಭಾರತೀಯ ಜನತೆಯ ಮತ್ತು ಅವರ ರಾಜಕೀಯ ಮುಖಂಡತ್ವದ ಸಾಮರ್ಥ್ಯಕ್ಕೆ ಒಡ್ಡಿದ್ದ ಸವಾಲಾಗಿತ್ತು. ಎರಡು ದಶಕಗಳ ನಂತರ ಈಗಲೂ ಈ ಸವಾಲು ನಮ್ಮ ಮುಂದಿದೆ.

ಬಾಬ್ರಿ ಮಸೀದಿ ಧ್ವಂಸದ ಒಂದು ದಶಕದ ನಂತರ ಬಂತು ಗುಜರಾತಿನ ಭೀಕರ ಕೋಮು ಹತ್ಯಾಕಾಂಡ. ಮತ್ತೊಮ್ಮೆ, ಕೋಮು ದಳ್ಳುರಿ ನಮ್ಮ ದೇಶದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ಆವರಿಸಿತು. ಈ ಸವಾಲು ಈಗಲೂ ಬಲವಾಗಿಯೇ ಇದೆ. ಎರಡು ದಶಕಗಳ ನಂತರವೂ ಬಾಬ್ರಿ ಮಸೀದಿ ಧ್ವಂಸಕ್ಕಾಗಿ ಯಾರಿಗೂ ಶಿಕ್ಷೆಯಾಗಿಲ್ಲ, ಗುಜರಾತ್ ಹತ್ಯಾಕಾಂಡಕ್ಕೆ ಪ್ರಮುಖ ಹೊಣೆಗಾರರಾಗಿದ್ದವರಲ್ಲಿ ಯಾರಿಗೂ ಇದುವರೆಗೆ ಶಿಕ್ಷೆ ಆಗಿಲ್ಲ ಎಂಬ ಸಂಗತಿಯಿಂದ ಇದು ಸ್ಪಷ್ಟ. ನ್ಯಾಯ ಒದಗಿಸುವಲ್ಲಿ ಇಂತಹ ವಿಳಂಬ ನಮ್ಮ ಗಾಯಗಳನ್ನು ಗುಣಪಡಿಸುವುದಿಲ್ಲವಷ್ಟೇ ಅಲ್ಲ, ಅವುಗಳ ಮೇಲೆ ಉಪ್ಪು ಸುರಿಯುತ್ತದಷ್ಟೇ. ಈ ಮೂಲಕ ನಮ್ಮ ನಾಜೂಕಾದ ಜಾತ್ಯಾತೀತ ಪ್ರಜಾಸತ್ತಾತ್ಮಕ ರಚನೆಯನ್ನು ದುರ್ಬಲಗೊಳಿಸುತ್ತದೆ.

ಈಗ, ಗುಜರಾತ್ ಹತ್ಯಾಕಾಂಡದ ಒಂದು ದಶಕದ ನಂತರ ಭೀಕರ ಕೋಮು ಹತ್ಯಾಕಾಂಡ ಯಾರ ಆಶ್ರಯದಲ್ಲಿ ನಡೆಯಿತೋ ಆ ಗುಜರಾತ್ ಮುಖ್ಯಮಂತ್ರಿಯನ್ನು ಆರೆಸ್ಸೆಸ್/ಬಿಜೆಪಿ 2014ರ ಸಾರ್ವತ್ರಿಕ ಚುನಾವಣೆಗಳ ನಂತರ ದೇಶದ ಪ್ರಧಾನ ಮಂತ್ರಿ ಪಟ್ಟಕ್ಕೆ ತಮ್ಮ ಅಭ್ಯರ್ಥಿಯೆಂದು ಬಿಂಬಿಸುತ್ತಿವೆ. ಬಾಬ್ರಿ ಮಸೀದಿ ಧ್ವಂಸಕ್ಕೆ ಹಾದಿ ಮಾಡಿಕೊಟ್ಟ 1990ರ ದಶಕದ 'ರಥಯಾತ್ರೆ'ಗೆ ನೇತೃತ್ವ ನೀಡಿದ, ಆಗ ಬಹುಮಟ್ಟಿಗೆ ಕೋಮುದ್ವೇಷ ಮತ್ತು ಹಿಂಸಾಚಾರದ ಪ್ರತೀಕವಾಗಿ ಬಿಟ್ಟಿದ್ದ ಎಲ್.ಕೆ.ಅಡ್ವಾಣಿ ಆರಂಭಿಕ ಬಿಕ್ಕಳಿಕೆಗಳ ನಂತರ, ಆರೆಸ್ಸೆಸ್/ಬಿಜೆಪಿಯ ಪ್ರಧಾನ ಮಂತ್ರಿ ಪಟ್ಟದ ಆಕಾಂಕ್ಷಿಯ ಈ ನಿರ್ಧಾರವನ್ನು ಒಪ್ಪಿಕೊಳ್ಳುವಂತಾಗಿದೆ. ಇತ್ತೀಚೆಗೆ ತಾನು 'ಮೋದೀಕರಣ'ಗೊಂಡಿರುವುದಾಗಿ ಅವರು ಹೇಳಿದ್ದಾರಂತೆ.

ಆದ್ದರಿಂದ, ಮಾಧ್ಯಮಗಳಲ್ಲಿ ಏನೇ ಅಬ್ಬರ ಇದ್ದರೂ, ಈ ಅಂಕಣದಲ್ಲಿ ಈ ಹಿಂದೆ ಚರ್ಚಿಸಿದಂತೆ, ಭಾರತದ ಕಾರ್ಪೊರೇಟ್ ವಲಯದ ಕೆಲವು ವಿಭಾಗಗಳ ಬೆಂಬಲ ಪಡೆದರೂ, ಆರೆಸ್ಸೆಸ್/ಬಿಜೆಪಿ ಪ್ರಚಾರ ಅದೇ ಮೂಲ ಕೋಮುವಾದಿ ಅಜೆ-ಂಡಾದ ಸುತ್ತವೇ ಗಿರಕಿ ಹೊಡೆಯುತ್ತಿದೆ. ಅದರ ಪ್ರಧಾನ ಮಂತ್ರಿ ಅಭ್ಯರ್ಥಿಯೇ ಕೋಮುವಾದಿ ಧ್ರುವೀಕರಣದ, ದ್ವೇಷದ ಪ್ರತೀಕವಾಗಿದ್ದಾರೆ.

ಎರಡನೆಯದಾಗಿ, ಬೇರೆಲ್ಲ ಪಕ್ಷಗಳು, ನಿರ್ದಿಷ್ಟವಾಗಿ ಕಾಂಗ್ರೆಸ್ ಪಕ್ಷ 'ಒಡೆದು ಆಳಲು' ಪ್ರಯತ್ನಿಸಿದರೆ, ತಾವು ದೇಶವನ್ನು ಮತ್ತು ಜನತೆಯನ್ನು ಒಂದಾಗಿಸಲು ಪ್ರಯತ್ನಿಸುತ್ತಿದ್ದೇವೆ ಎಂಬುದು ಈಗ ಅವರ ಪ್ರಚಾರದ ರಾಗಾಲಾಪನೆಯಾಗಿ ಬಿಟ್ಟಿದೆ. ಆದರೆ. ತಾನು ಹಿಂದೂ ಮತ್ತು ರಾಷ್ಟ್ರೀಯವಾದಿಯಾದ್ದರಿಂದ 'ಹಿಂದೂ ರಾಷ್ಟ್ರೀಯವಾದಿ' ಎಂದು ಹೇಳಿಕೊಳ್ಳುವ ಮೂಲಕ ಬಿಜೆಪಿ/ಆರೆಸ್ಸೆಸ್ ತಿಳುವಳಿಕೆಯೇ ಅವರ ಪ್ರಜ್ಞೆಯನ್ನು ರೂಪಿಸಿದೆ ಎಂಬುದನ್ನು ಬಯಲು ಮಾಡಿಕೊಂಡಿದ್ದಾರೆ.

ಕಪಟ ಸಂದೇಶಗಳು

ಈಗ, ಆಧುನಿಕ ಭಾರತೀಯ ಗಣತಂತ್ರದಲ್ಲಿ ಒಬ್ಬ ವ್ಯಕ್ತಿ ಹಿಂದೂ, ಮುಸ್ಲಿಮ್, ಕ್ರೈಸ್ತ, ಸಿಖ್, ಬೌದ್ಧ, ಜೈನ, ಪಾರ್ಸಿ ಇತ್ಯಾದಿ ಧಾರ್ಮಿಕ ನಂಬಿಕೆಯನ್ನು ಅಂಗೀಕರಿಸಿ, ಅಥವ ಯಾವುದೇ ನಂಬಿಕೆಯಿಲ್ಲದೆ ನಾಸ್ತಿಕನಾಗಿ/ಅಜ್ಞೇಯನಾಗಿದ್ದೂ ಒಬ್ಬ ರಾಷ್ಟ್ರೀಯವಾದಿಯಾಗಿರಲು ಸಾಧ್ಯ. ಅಂ-ದರೆ ನಮ್ಮ ಧಾರ್ಮಿಕ ನಂಬಿಕೆಗಳೇನೇ ಇದ್ದರೂ ನಾವೆಲ್ಲ ಭಾರತೀಯ ರಾಷ್ಟ್ರೀಯವಾದಿಗಳು. ಭಾರತ ಸೇರಿರುವುದು ಹಿಂದೂಗಳಿಗೆ ಮಾತ್ರ ಎಂದು ಕಾಣುತ್ತ ಬೇರೆಲ್ಲ ಧರ್ಮಗಳನ್ನು ಹೊರತುಪಡಿಸುವವರು ಮಾತ್ರವೇ ತಾವು ಒಂದು ನಿರ್ದಿಷ್ಟ ಧಾರ್ಮಿಕ ಪಂಗಡದ ರಾಷ್ಟ್ರೀಯವಾದಿ ಎಂದು ಹೇಳಿಕೊಳ್ಳಲು ಸಾಧ್ಯ

ಈ ರೀತಿ ಸೂಕ್ಷ್ಮವಾಗಿ ಇಂತಹ ಕಪಟ ಸಂದೇಶಗಳನ್ನು ಆಧರಿಸಿಕೊಂಡು ಪ್ರಚಾರ ನಡೆಸುವ ಆರೆಸ್ಸೆಸ್/ಬಿಜೆಪಿಯ ಪ್ರಧಾನ ಮಂತ್ರಿ ಪಟ್ಟಾಕಾಂಕ್ಷಿ ಈಗ ಅವರ ಇನ್ನೊಂದು ಪ್ರಿಯ ಹಿಂದುತ್ವ ಪ್ರಶ್ನೆಯನ್ನು ಬಡಿದೆಬ್ಬಿಸಿದ್ದಾರೆ. ಅದೆಂದರೆ ಜಮ್ಮು-ಕಾಶ್ಮೀರಕ್ಕೆಂದು ಇರುವ ಸಂವಿಧಾನದ 370ನೇ ಕಲಮನ್ನು ರದ್ದು ಮಾಡಬೇಕೆಂಬ ಪ್ರಶ್ನೆ. ಆರೆಸ್ಸೆಸ್/ಬಿಜೆಪಿಗೆ ಸದಾ ಈ ಮೂರು

ಪುಟ 15 ಕ್ಕೆ





ಚಳಿ ಗಾಳಿಗೆ ಎದುರು ನಿಂತ ಚಳುವಳಿ

ವೇತನ ಹೆಚ್ಚಳ ಸಾಧಿಸಿದ ಬಿಸಿಯೂಟ ನೌಕರರ 'ಅನಿರ್ದಿಷ್ಟ ಹೋರಾಟ'

ಆರ್. ರಾಮಕೃಷ್ಣ.

ಮಡಿಲಲ್ಲಿ ಎರಡೂವರೆ-ಮೂರು ವರ್ಷದ ಹೆಣ್ಣುಗೂಸು 'ರಕ್ಷಿತ'ಳನ್ನು ಮಡಿಲಲ್ಲಿ ಹಾಕಿಕೊಂಡು ಬೆಂಗಳೂರು ಮಹಾನಗರದ ಗಾಂಧಿನಗರ ಎನ್ನುವ 'ಹೃದಯ' ಭಾಗದಲ್ಲಿ- 'ಹೃದಯ ಇರುವವರಿಗೆ' 'ಹೃದಯ ವಿದ್ರಾವಕ' ಅನ್ನುವಂತೆ ಕೂತಿರುವ ಈ ಮಹಿಳೆಯನ್ನು ನೋಡಿ. ಹೃದಯ ಮರಗಟ್ಟಿದ ಇದ್ದುಳ್ಳ 'ಹೈಟೆಕ್' ಬೆಂಗಳೂರಿಗರಿಗೆ ಮತ್ತು ಅಧಿಕಾರಸ್ಥರಿಗೆ ಈಕೆ ನಗರದ ಟ್ರಾಫಿಕ್ ಹರಿವಿಗೆ ಅಡಚಣೆ ಮಾಡುತ್ತಾ ನಡುರಸ್ತೆಯಲ್ಲಿ 'ಚಂಡಿ' ಹಿಡಿದು ಕೂತಿರುವ ಮಹಿಳೆಯರಲ್ಲಿ ಒಬ್ಬಳಾಗಿ ಕಾಣುತ್ತಿದ್ದಾಳೆ. ಇಂಥ ಈ ಮಹಿಳೆಯ ಹೆಸರು- ಸುಮಿತ್ರ ಅಂತ. ಊರು ಸಿಂಧಗಿ, ಬಿಜಾಪುರ ಜಿಲ್ಲೆ. 12 ವರ್ಷ ಆಗಿದೆ, ನೌಕರಿಗೆ ಸೇರಿ. ಸಂಬಳ ತಿಂಗಳಿಗೆ ಬರೋಬ್ಬರಿ 1,100. ರೂ. ಅಂದರೆ ದಿನಕ್ಕೆ .. ರೂ.38.

ನೋವಿನ ಚೀಲ

ಮನೆಗೂಡಲ್ಲಿ ಒಟ್ಟು ಆರು ತಿನ್ನುವ ಬಾಯಿಗಳು. ನಾಲ್ಕು ಮಕ್ಕಳು ಮತ್ತು ತಾನು ಮತ್ತು ಗಂಡ. ಸ್ವಂತ ಜಮೀನಿಲ್ಲ. ಮಾಡುವುದು ಒಕ್ಕಲುತನ. ಬೆಳೆಯುವುದು ಜೋಳ. ಆರು ಚೀಲದಲ್ಲಿ ಭೂಮಿಯ ಮಾಲಕರಿಗೆ ಮೂರು ಚೀಲ. ಉಳಿಯುವುದು ಮೂರು. ಬೆಳೆದದ್ದು ಐದೇ ಆದರೆ ಉಳಿಯುವುದು ಎರಡೇ ಚೀಲ.

ಆ ಎಂಪಿಕೆಬಿಎಸ್ ಎಂಬ ಸರ್ಕಾರಿ ಶಾಲೆಯಲ್ಲಿ 400 ಮಕ್ಕಳು. ಅವರಿಗೆ ಬಿಸಿ ಅಡುಗೆಮಾಡಿ ಬಡಿಸಲು ಒಟ್ಟು ನಾಲ್ವರು ಕೆಲಸದವರು. ಬೆಳ್ಳಿಗ್ಗೆ 10.ಕ್ಕೆ ಶಾಲೆಗೆ ಕಾಲಿಟ್ಟರೆ ಸಂಜೆ 3-4 ಗಂಟೆಯವರೆಗೆ ಕೆಲಸ. ನಾಲ್ಕು ಮಕ್ಕಳನ್ನು ಹೆತ್ತ ತಾಯಿಗೆ ಒಂದಕ್ಕಾದರೂ ಹೆರಿಗೆ ರಜೆ ಸಿಕ್ಕಿತ್ತಾ ? ಇಲ್ಲ. ಕಾಯಿಲೆ ಕಸಾಲೆ ಬಿದ್ದಾಗ ಎಂದಾದರೂ 'ವೇತನ ಸಹಿತ ರಜೆ' ಸಿಕ್ಕಿತ್ತಾ ? ಇಲ್ಲ. ವಿಮೆ ಸೌಲಭ್ಯ ಉಂಟಾ ? ಇಲ್ಲ. ಇಎಸ್ಐ ? ಇಲ್ಲ. ಹೋಗಲಿ ಭವಿಷ್ಯ ನಿಧಿ-ಅಂ-ದರೆ ಪಿಎಫ್ ಉಂಟಾ ? ಇಲ್ಲ. ಪಿಂಚಣಿ ಇಲ್ಲ. ಇಲ್ಲ.. ಇಲ್ಲ..ಲ್ಲ ಲ. 'ಲ'ಗಳು ಜಾಸ್ತಿ.



ತರಕಾರಿ ತರಬೇಕು. ರೇಷನ್ ತರಬೇಕು. ಈಗ ಮಕ್ಕಳಿಗೆ ಗೋಧಿ ಕೊಡಬೇಕು. ಮಾಮೂಲಿಗಿಂತ ಕೆಲಸ ಜಾಸ್ತಿ. ಹಾಲು ಕೊಡಬೇಕು. ಬೆಳಿಗ್ಗೆ 8 ಕ್ಕೆ ಹಾಜರಿರಬೇಕು. ಶನಿವಾರವಂತೂ ಬೆಳಿಗ್ಗೆ 7 ಕ್ಕೆ ಶಾಲೆಯಲ್ಲಿರಬೇಕು. ಶುಚಿತ್ವ ಕಾಪಾಡಬೇಕು. ಅಡಿಗೆ ಮನೆ ತೊಳೆಯಬೇಕು. ಬೇಕು.. ೀಕು.. ಕು. 'ಕು'ಗಳೂ ಕೂಡ ಜಾಸ್ತಿನೇ.

ಇಷ್ಟೊಂದು ಈ 'ಲ ಲ ಲ ಲ' ಗಳು ಮತ್ತು 'ಕು ಕು ಕು ಕು' ಗಳನ್ನು ಕಟ್ಟಿಕೊಂಡು ಬದುಕು ನೂಕುವುದು ಹೇಗೆ ? ಇದು ಈಗ ದೊಡ್ಡ ಪ್ರಶ್ನೆ.

ಬೋರ್ ಹೊಡೆದು ನೀರು, ಸೌದೆ ತರಬೇಕು-

ಇಲ್ಲೇ ಜೊತೆಗೇ ಕುಳಿತಿರುವ ಜೇವರ್ಗಿ ತಾಲ್ಲೂಕು ಒರವಿ ಶಾಲೆಯ ನೀಲಮ್ಮರನ್ನು ಕೇಳಿ. ಅವರು ನೋವಿನ ಗಂಟು ಬಿಚ್ಚುತ್ತಾ-ರೆ. ಗ್ಯಾಸ್ ಮುಗಿದು ಹೋದರೆ 2 ಕಿ.ಮೀ ದೂರದಿಂದ ಸೌದೆ ತರಬೇಕು. ಶಾಲೆಯಲ್ಲಿ ನೀರಿನ ಸೌಕರ್ಯವಿಲ್ಲ. ನಿತ್ಯ ಎರಡು ಕಿ.ಮೀ. ದೂರದ ಬೋರ್ ಹೊಡೆದು ನೀರನ್ನು ಹೊತ್ತು ಹೊರಬೇಕು.

ಕೋಣೆಗಳ ಕಸ ತೆಗೀಬೇಕು

ನಡು ಹಗಲು. ಹೊಟ್ಟೆ ಚುರುಗುಟ್ಟಿರಬೇಕು. 'ಚಿಲ್ರೆ ಇಲ್ಲಾ ಅಂತನೆ ನೀನೊಂದು ಪಾರ್ಟು ಟೀ ಕುಡಿದು ಬಿಡು' ಅಂತ ಜೊತೆಗಾತಿಗೆ ಹೇಳಿ ತಾನು ಕೊಂಡ ಟೀ ಲೋಟದಲ್ಲಿ ಬ್ಯಾಗಿನಿಂದ ತೆಗೆದ 'ರಸ್ಕ್' ಅದ್ದುತ್ತಾ ಆ ಶಿಡ್ಲಘಟ್ಟದ ಮುನಿಯಮ್ಮ ಆದರೂ ಹೇಳಿದ್ದೇನು? ಅಡುಗೆ ಕೆಲಸ ಅಲ್ಲದೇ ಸ್ಕೂಲ್ ಗ್ರೌಂಡಲ್ಲಿ ಕಸ ಬಿದ್ದದ್ದರೆ ತೆಗೆಯಬೇಕು... ಕೆಲವು ಸಾರಿ ಶಾಲೆಯ ಕೊಠಡಿಗಳ ಕಸ ತೆಗೀಬೇಕು.

'ನಮ್ಮ ವಿಷಯ ಏನು ಕೇಳಲೇ ಇಲ್ಲ'

'ಬರೀ ಅವರ ಹತ್ತಿರ ಮಾತ್ರ ಮಾತಾಡಿ ಹೋಗ್ತಾ ಇದ್ದೀರಾ. ನಮ್ಮ ವಿಷಯ ಏನು ಕೇಳಲೇ ಇಲ್ಲ' ಅಂತ ತುಂಬಾನೆ ನೊಂದು-ಕೊಂಡ ಈ ಮಹಿಳೆ ಮೈಸೂರು ಸಮೀಪದ ಕೆಆರ್ಎಸ್ ಹತ್ತಿರದ ಹುಲಿಕೆರೆಯವರು. ಹೆಸರು ಮಾದೇವಿ ಅಂತ.

ಈಗ 45 ವರ್ಷದ ಇವರ ಅಮ್ಮ ಇವರ ಸಣ್ಣ ವಯಸ್ಸಲ್ಲೇ ಕಣ್ಣು ಮುಚ್ಚಿದರು. ಲಕ್ವ ಹೊಡೆದು ಅಪ್ಪ 15 ವರ್ಷದ ಹಿಂದೆ ತೀರಿಕೊಂಡರು. 16 ವರ್ಷದ ಹಿಂದೆ 'ಅವರೂ' ಹೋಗಿಬಿಟ್ಟಾಗ ಇವರಿಗೆ ಮೂವತ್ತು ವರ್ಷ ಕೂಡ ತುಂಬಿರಲಿಲ್ಲ. ಇಬ್ಬರು ಮಕ್ಕಳ ಕುಟುಂಬ ಅದು. ಆಮೇಲೆ ಆಕೆ ಆಸರೆಗೆಂದು 'ಅಕ್ಷರ ದಾಸೋಹ'ದ ಹುಲ್ಲುಕಡ್ಡಿ ಹಿಡಿದರು. ಮಕ್ಕಳು ಬೆಳೆಯುತ್ತಿದ್ದಾರೆ. ಬದುಕಿನ ಬೆಲೆ-ಅಂದರೆ ಖರ್ಚುವೆಚ್ಚ ದಿನೇ ದಿನೇ ಹೆಚ್ಚುತ್ತಿದೆ. 'ಹುಲ್ಲು ಕಡ್ಡಿ' ಆಸರೆ ನೀಡುವುದೋ ಮುಳುಗಿಸುವುದೋ ಎಂಬ ಪ್ರಶ್ನೆ ಎದ್ದು ಬಂದಿದೆ. 1,000 ಸಂಬಳ. ತೆಗೆದುಕೊಂಡು ಮಾಡುವುದೇನು? ಮೂರು ಸೊನ್ನೆ!! ನಾಲ್ಕು ಸೊನ್ನೆಯವರೇ ತತ್ತರಿಸುತ್ತಿದ್ದಾರೆ. ಇನ್ನು ಮೂರು ಸೊನ್ನೆ ಮನೆಗೆ ತೆಗೆದುಕೊಂಡು ಹೋಗಿ ಇವರು ಮಾಡುವುದೇನು?



ಮಾಡುವುದೇನು? ಅದೇ ರಾಜಧಾನಿಗೆ ಬಂದು ಚಂಡಿ ಹಿಡಿದು ಕೂತು ಬಿಡುವುದು. ಏನಾದರು ದಕ್ಕಬೇಕು. ಇಲ್ಲವಾದರೆ ಜಾಗ ಬಿಟ್ಟು ಕದಲುವುದಿಲ್ಲ. ಹಗಲಾಗಲಿ? ಇರುಳಾಗಲಿ? ಹೌದು ಅದನ್ನೇ ಈಗ ಇವರೆಲ್ಲಾ ಮಾಡುತ್ತಿರುವುದು. ಬರುವಾಗ ರೊಟ್ಟಿ, ಶೇಂಗಾ ಚಟ್ನಿ, ಚಪಾತಿ ಹೊತ್ತು ತಂದರು. ಹಂಚಿಕೊಂಡು ತಿಂದರು.

ಈ ಹೋರಾಟದ ಅವದಿ? 'ಅನಿರ್ದಿಷ್ಟ' ಆದರೆ ಹೋರಾಟದ ಬೇಡಿಕೆಗಳು ಮಾತ್ರ ನಿರ್ದಿಷ್ಟ. ಕೊಡಬೇಡವೇ ಸರ್ಕಾರ ತಾನೇ ನಿಗದಿ ಮಾಡಿದ ಕೂಲಿಯಾದರೂ 'ಕನಿಷ್ಟ'? ಹೋಗಲಿ ಬೇಡವೇ ಒಂದು ದಿನಕ್ಕೆ ರೂ. ಒಂದು ನೂರು. ಈ ಲೆಕ್ಕದಲ್ಲಿ ತಿಂಗಳಿಗೆ 3,000 ರೂನಾದರೂ?

ನೀ ಕೊಡೆ-ನಾ ಬಿಡೆ

ಸರ್ಕಾರ ನಡೆಸುವವರು ಬೆಳಗಾಂಗೆ ಹೋಗಿದ್ದಾರೆ. ಆದರೇನು? ಆಧುನಿಕ ಕಾಲ. 'ಸ್ವಾತಂತ್ರ್ಯ ಪಾರ್ಕ್' ಎನ್ನುವ ಹಳೇ ಜೈಲಿನ ಬಟಾಬಯಲಲ್ಲಿ ಸಾವಿರಾರು ಮಹಿಳೆಯರು ಚಳಿ, ಗಾಳಿಯೊಂದಿಗೆ ಗುದ್ದಾಡುತ್ತಾ ಮಲಗಿ ಇದ್ದು ಮಲಗಿ ಎದ್ದು ಹೋರಾಡುತ್ತಿದ್ದರೆ, ಅದು ಯಾಕೆ ಏನು ಎಂದು ತಿಳಿದುಕೊಳ್ಳಲಾರದ ಸಮಸ್ಯೆಯೇ? ಅದೂ ಮಂಗಳನ ಅಂಗಳ ಉಪಗ್ರಹ ಕಳುಹಿಸಿರುವ ಈ ಕಾಲದಲ್ಲಿ.

ಎಂಥಾ ಕೆಲಸ !!

ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಿಸಲ ಕಲಿಕೆಯಲ್ಲಿ ಏಕಾಗ್ರತೆ ಮೂಡಿಸಲು ಮತ್ತು ಬಾ ಕಾರ್ಮಿಕರಾಗಿ ಪರಿವರ್ತನೆಯಾಗುವುದನ ತಪ್ಪಿಸಲು ಮಕ್ಕಳ ಅಪೌಷ್ಟಿಕತೆ ನೀಗಲ ಶಾಲೆಗಳಲ್ಲಿ ಪೌಷ್ಟಿಕ ತಾಜಾ ಆಹಾ ನೀಡಬೇಕೆಂಬ ಸರ್ವೋಚ್ಚ ನ್ಯಾಯಾಲಯ ನಿರ್ದೇಶನದ ಮೇರೆಗೆ ದೇಶದ ಶಾಲೆಗಳ ಬಿಸಿಯೂಟ ಯೋಜನೆ ಜಾರಿಗೆ ಬಂದದ್ದಲ್ಲವೇ ಈ ಅಧಿಕಾರಸ್ಥರೇನು ಬಯ ತಂದುದೇ?

ಈ ಯೋಜನೆಯಲ್ಲಿ ರಾಜ್ಯ 65 ಲಕ್ಷ ಮಕ್ಕಳಿಗೆ 1,14,00 ಮಹಿಳೆಯರು ದಿನದ 5- ಗಂಟೆಗಳ ಕಾಲ ಕೆಲಸ ಮಾ ಮಕ್ಕಳಿಗೆ ಬಸಿಯೂಟ ಅ ಬಡಿಸುತ್ತಿದ್ದಾರೆ.

ಬಿಸಿಯೂಟ ಯೋಜನೆಯ ನಿರ್ವಹಣೆಯಲ್ಲಿ ರಾಜ್ಯಸರ್ಕಾರ ಕೇಂದ್ರ ಸರ್ಕಾರದ ಶಹಬ್ಬಾಸ್‌ಗಿ ಸಿಕ್ಕಿದೆಯಂತೆ. ತವ ಮನೆಮಕ್ಕಳು ಗಂಜಿ ಕುಡಿದರೂ ಉಪವಾಸವಿದ್ದರೂ ಶಾಲಾ ಮಕ್ಕಳಿ ಬಿಸಿಯೂಟ ಮಾಡಿ ಬಡಿಸುವ ಈ ಶ್ರಮಿಕ ಶ್ರಮ ಈ ಯಶಸ್ಸಿನಲ್ಲಿ ಇಲ್ಲವೇ? ಆಳುವವರಿ ಇದೆಲ್ಲಾ ಯಾಕೆ ಅರ್ಥವಾಗುವುದಿಲ್ಲ.!!!

ಇವರ ಉದ್ಯೋಗಕ್ಕೆ ಭದ್ರತೆಯೇ ಇಲ್ಲ ಜೊತೆಗೆ ಈಗ ಉದ್ಯೋಗಕ್ಕೆ ಸಂಚಕಾ ಬಂದಿದೆ. ಬಿಹಾರದಲ್ಲಿ ಆದ ಬಿಸಿಯೂ ದುರಂತದ ಸಾವಿನ ಹಿನ್ನೆಲೆಯಲ್ಲಿ ರಾ ವಿಧಾನಪರಿಷತ್‌ನಲ್ಲಿ ನಡೆದ ಚರ್ಚೆಯ ಶಿಕ್ಷಣ ಸಚಿವರು ತಾವೇ ಖುದ್ದಾಗಿ ನಿಂತ ಕಾರ್ಪೋರೇಟ್ ಸಂಸ್ಥೆಗಳಿಗೆ ಬಿಸಿಯೂ ಯೋಜನೆಯನ್ನು ವಹಿಸಿಕೊಡುತ್ತೇನೆ ಎ ಹೇಳಿಕೆ ನೀಡಿಬಿಟ್ಟರು. ಹಾಗೆ ಮಾಡುವುದರಿಂ ಈ ಯೋಜನೆಯ ಸಂಪೂರ್ಣ ಆಶಯವ ಮಣ್ಣುಪಾಲಾಗುತ್ತದೆ ಅಂತ ಸಚಿವರಿಗೆ ಅನಿಸಲಿಲ್ಲ

'ನಮಗೆ ಸರಿಯಾಗಿ ನಿರ್ವಹಿಸುವುದು ಗೊತ್ತಿಲ್ಲ. ಖಾಸಗಿಯವರಿಗೆ ಕೊಡುತ್ತೇವೆ' ಎಂದು ಘೋಷಿಸಲು ಸನ್ಮಾನ್ಯ ಸಚಿವರಿಗೇ ಏನೂ ಮುಜುಗರ ಅನಿಸಲಿಲ್ಲ. ಖಾಸಗಿಯವರಿಗೆ ಲಾಭದ ಉದ್ದೇಶ, ಧಾರ್ಮಿಕ ಉದ್ದೇಶಗಳು ಹೀಗೆ ಶಾಲಾ ಶಿಕ್ಷಣ ವ್ಯವಸ್ಥೆಗೆ ಮಾರಕವಾದ ನಾನಾ ನಾನಾ ಉದ್ದೇಶಗಳಿರುವುದಿಲ್ಲವೇ?

ಖಾಸಗಿ, ಧಾರ್ಮಿಕ ಸಂಸ್ಥೆಗಳಾದ ಇಸ್ಕಾನ್, ಅದಮ್ಯ ಚೇತನ ಹಾಗೂ ಇತರೇ ಸಂಘ ಸಂಸ್ಥೆಗಳಿಗೆ ನೀಡುವ ಮೂಲಕ ಲಕ್ಷಾಂತರ ಮಹಿಳೆಯರನ್ನು ಸರ್ಕಾರವೇ ನಿರುದ್ಯೋಗಿಗಳನ್ನಾಗಿ ಮಾಡಲು ಹೊರಟಂತಾಗಿಲ್ಲವೇ? ಖಾಸಗೀಕರಣದ ಅಮಲು ಸರ್ಕಾರದ ತಲೆಗೇರಿದೆಯಲ್ಲವೇ?

ಬೇಡಿಕೆಗಳು ಹಲವು – ತುರ್ತು ಕೆಲವು

ಬಿಸಿಯೂಟ ಯೋಜನೆಯನ್ನು ಖಾಯಂಗೊಳಿಸಿ, ಕೆಲಸಗಾರರನ್ನು ಸರ್ಕಾರಿ ನೌಕರರರೆಂದು ಪರಿಗಣಿಸಿ ನೇಮಕಾತಿ ಪತ್ರಗಳನ್ನು ನೀಡಬೇಕು. 45ನೇ ಐಎಲ್‌ಸಿ (ಭಾರತೀಯ ಕಾರ್ಮಿಕ ಸಮ್ಮೇಳನ)ದ ಶಿಫಾರಸ್ಸುಗಳನ್ನು ಜಾರಿ ಮಾಡಬೇಕು. ಹಾಜರಾತಿ ಆಧಾರದಲ್ಲಿ ಕಳೆದ 11 ವರ್ಷಗಳಿಂದ ಕೆಲಸ ಮಾಡುತ್ತಿರುವ ಅಡುಗೆ ಸಿಬ್ಬಂದಿಯವರನ್ನು



ಕೆಲಸದಿಂದ ತೆಗೆಯುವ ಕ್ರಮ ನಿಲ್ಲಬೇಕು. ಶಾಲೆಗಳನ್ನು ವಿಲೀನಗೊಳಿಸುವಾಗ ಶಿಕ್ಷಕರನ್ನು ವರ್ಗಾವಣೆ ಮಾಡುವ ಹಾಗೆ ಅಡುಗೆಯವರನ್ನು ಹತ್ತಿರದ ಶಾಲೆಗಳಿಗೆ ವರ್ಗಾವಣೆ ಮಾಡಬೇಕು, ಬರಗಾಲದಲ್ಲಿ ಹಾಗೂ ವಿಶೇಷ ರಜಾ ದಿನಗಳಲ್ಲಿ ಕೆಲಸ ಮಾಡಿದರೆ ದುಪ್ಪಟ್ಟು ವೇತನ ನೀಡಬೇಕು.

ಪ್ರತಿ ತಿಂಗಳು ಮೊದಲ ವಾರದಲ್ಲಿ ವೇತನ ಹಾಗು ಸಾದಿಲ್ವಾರು ಹಣವನ್ನು ಕೊಡಬೇಕು. ಬೇಸಿಗೆ ರಜೆಯ ವೇತನವನ್ನು ಬಿಸಿಯೂಟ ನೌಕರರಿಗೆ ನೀಡಬೇಕು. ಹೀಗೆ ಎಷ್ಟೋ ಬೇಡಿಕೆಗಳಿವೆ.

ಎಲ್ಲಕ್ಕಿಂತ ಮುಖ್ಯವಾಗಿ.. ..

ಎಲ್ಲಕ್ಕಿಂತ ಮುಖ್ಯವಾಗಿ ತಿಂಗಳಿಗೆ ಮೂರು ಸಾವಿರವಾದರೂ ಸಂಬಳ, ಬಿಸಿಯೂಟ ಯೋಜನೆಯ ಖಾಸಗಿಕರಣಕ್ಕೆ ತಡೆ ಈಗ ತುರ್ತು ಆದ್ಯತೆಯ ಬೇಡಿಕೆಗಳು.

ಹರಿಯಿತು ಕೊಂಚ ಬೆಳಕು.. ..

ಬೆಂಗಳೂರಿನ ಹೋರಾಟ ನಾಲ್ಕನೇ ದಿನಕ್ಕೆ ಕಾಲಿಟ್ಟಾಗ ಅದು ಹೊಸ ಹಂತಕ್ಕೆ ಕಾಲಿಟ್ಟಿತು. ಅಂದರೆ ರಾಜ್ಯದ ನಾನಾ ಶಾಲೆಗಳಲ್ಲಿ ಬಿಸಿಯೂಟ ತಯಾರಿ ಬಂದ್ ಮಾಡಲು ಸಂಘ ಕರೆ ನೀಡಿತ್ತು. ಮೂಗು ಹಿಡಿದರೆ ಬಾಯಿ ತೆರೆಯುವುದು. ಡಿಸೆಂಬರ್ 5 ರಂದು, ಸುಡುವ ಐದು ಹಗಲು, ನಡುಗಿಸುವ ನಾಲ್ಕು ರಾತ್ರಿಗಳನ್ನು ಹೋರಾಟದ ಅಂಗಳದಿ ಕಳೆದ ಮೇಲೆ ಈಗ ಕೊಂಚ ಬೆಳಕಿನ ಕಿರಣ ಕಾಣುತ್ತಿದೆ. ಅದು ಕೊನೆಗಾಣದ ಬಾಳಿನ ಗೋಳಾಟಕ್ಕೆ ಹೋರಾಟವೆ ದಾರಿ ಎಂಬ ಸಂದೇಶವನ್ನೇ ಮತ್ತೆ ಮತ್ತೆ ದೃಢ ಪಡಿಸುತ್ತಿದೆ.

ಸಂಬಳ ಹೆಚ್ಚಳ

ರಾಜ್ಯ ಸರ್ಕಾರ ಅಕ್ಷರ ದಾಸೋಹ ನೌಕರರ ತಿಂಗಳ ವೇತನದಲ್ಲಿ 500 ರೂ.. ಹೆಚ್ಚಳ ಮಾಡುವ ತೀರ್ಮಾನ ಮಾಡಿದೆ. ಡಿಸೆಂಬರ್ 6 ರಂದು ಸಚಿವ ಆಂಜನೇಯ ಅವರು ಪ್ರಕಟಿಸಿದರು.

ತೊರೆಯಂತೆ ಮೊರೆದು ಬಂದ ಮೆರವಣಿಗೆ

ಅಂತೂ ರಾಜ್ಯದ ನಾನಾ ಜಿಲ್ಲೆಗಳಿಂದ ಮೂಲೆಗಳಿಂದ ರೈಲು ಬಸ್ಸು ಹತ್ತಿ ಪಾಡು ಪಡಿಪಾಟಲು ಬಿದ್ದು ಬೆಂಗಳೂರು ಸೇರಿದ ಸಹಸ್ರಾರು ಜನ ಅಕ್ಷರ ದಾಸೋಹ ನೌಕರರು ಕೆಂಬಾವುಟ, ಫಲಕ ಹಿಡಿದು ಡಿಸೆಂಬರ್ 2, 2013 ರಂದು ಬೆಳಿಗ್ಗೆ ರೈಲ್ವೆ ನಿಲ್ದಾಣದಿಂದ ಹೊರಟ ಬಿರುಸು ನೋಡಿದವರಿಗೆ ಆಗಲೇ ಈ ಹೋರಾಟ ಏನನ್ನಾದರೂ ಒಂದಷ್ಟು ಸಾಧಿಸುತ್ತದೆ ಎಂದು ಅನಿಸಿತ್ತು. ಅಣೆಕಟ್ಟೆ ಒಡೆದು ನೀರು ನುಗ್ಗುವಂತೆ ಆನಂದರಾವ್ ಸರ್ಕಲ್ ಮೇಲ್ಸೆತುವೆ ದಾಟಿ, 'ಸ್ವಾತಂತ್ರ್ಯ ಪಾರ್ಕ್' ಕಡೆಗೆ ನಡೆದ ಆ ಜನ ಸಾಗರವನ್ನು ಅಶಿಸ್ತು ಅಂತ ಕೂಡ ಕರೆಯುವಂತಿಲ್ಲ. ಏಕೆಂದರೆ ಅವರು ಎಷ್ಟೇ ರಭಸದಿಂದ ಮುನ್ನುಗ್ಗುತ್ತಿದ್ದರೂ ಮೆರವಣಿಗೆಯ ಮುಂಚೂಣಿಯಲ್ಲಿದ್ದ ನಾಯಕರು ಕೊಟ್ಟ ಸೂಚನೆಗಳನ್ನು ಪಾಲಿಸುತ್ತಿದ್ದರು. ಹೇಳಿದಾಗ ಹೇಳಿದಲ್ಲಿ ನಿಲ್ಲುತ್ತಿದ್ದರು. ಕಾರ್ಮಿಕರು, ನೌಕರರು, ದುಡಿಯುವ ಜನರಿಗೆ ತಮ್ಮದೇ ಆದ ಶಿಸ್ತಿದೆ. ಸರ್ಕಾರ ನಡೆಸುವವರು ತಾವು ಶಿಸ್ತು ಪಾಲಿಸಬೇಕು ಅಷ್ಟೆ. ತಾವು ಆಡಿದ ಮಾತಿನಂತೆ, ಚುನಾವಣೆಗೆ ಮುಂಚೆ ಜನರಿಗೆ ತೋರಿಸಿದ ಪ್ರಣಾಳಿಕೆಯಂತೆ, ಮಾಡಿದ ಪ್ರತಿಜ್ಞೆಯಂತೆ ನಡೆದುಕೊಳ್ಳಬೇಕು ಅಷ್ಟೆ.

ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘಟನೆ(ಸಿಐಟಿಯು) ನೇತೃತ್ವದ ಈ ಚಳುವಳಿಯಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್, ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್, ಮುಖಂಡರಾದ ಕೆ. ಮಂಹಾತೇಶ್,



ಕೆ.ಎನ್. ಉಮೇಶ್ ಮುಂತಾದವರು ಭಾಗವಹಿಸಿ ಬೆಂಬಲ ನೀಡಿದರು. ಶಿಕ್ಷಣ ತಜ್ಞ ನಿರಂಜನಾರಾಧ್ಯ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಎಚ್.ಎಸ್. ಮಂಜುನಾಥ, ಸಮಾಜ ಪರಿವರ್ತನಾ ಸಂಘದ ವಿ. ಗೋಪಾಲ್, ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅನಂತ ನಾಯಕ್, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ರಾಜಶೇಖರ ಮೂರ್ತಿ, ಜೆಎಂಎಸ್ ರಾಜ್ಯ ಅಧ್ಯಕ್ಷೆ ವಿ. ಗೀತಾ, ಪ್ರ.ಕಾರ್ಯದರ್ಶಿ ಕೆ.ಎಸ್. ಲಕ್ಷ್ಮಿ, ಬಿಇಎಫ್‌ಐ ಮುಖಂಡರಾದ ರತ್ನಾಕರ ಶೆಣೈ, ಮುಂತಾದವರು ತಮ್ಮ ಸಂಘಟನೆಗಳ ಪರವಾಗಿ ಹೋರಾಟಕ್ಕೆ ನೀಡಿದ ಬೆಂಬಲ ನೌಕರರಲ್ಲಿ ಹುರುಪು ಮೂಡಿಸಿತು.


ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ ಶ್ರೀರಾಮರೆಡ್ಡಿ, ಜಿ.ಎನ್. ನಾಗರಾಜ್, ನಿತ್ಯಾನಂದಸ್ವಾಮಿ ಮುಂತಾದವರು ಹೊರಾಟ ಬೆಂಬಲಿಸಿ ಬೆಂಬಲ ನೀಡಿದರು.

ಮುಖ್ಯಮಂತ್ರಿಗಳೊಂದಿಗೆ ಮಾತುಕತೆ

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೊತೆಯಲ್ಲಿ ನಡೆದ ಮಾತುಕತೆಯಲ್ಲಿ ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ರಾಜ್ಯ ಪದಾಧಿಕಾರಿಗಳಾದ ಮಾಲಿನಿ ಮೇಸ್ತಾ, ಯಮುನಾ ಗಾಂವ್ಕರ್, ಗಂಗಾ, ಸಿದ್ದಮ್ಮ, ನಾಗರತ್ನ, ಮಂಜುಳ, ಮುಂತಾದವರು ಪಾಲ್ಗೊಂಡಿದ್ದರು.


ಮೊದಲ ದಿನ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಶಿಕ್ಷಣ ಆಯುಕ್ತರಿಗೆ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾ ಸಂಘಟನೆಯ ಮನವಿ ಪತ್ರವನ್ನು ಓದಿ ಅರ್ಪಿಸಿದ್ದರು. ಹೋರಾಟದಲ್ಲಿ ಪಾಲ್ಗೊಂಡ ಅವಧಿಯ ಸಂಬಳ ಕಡಿತ ಮಾಡದೇ ಇರಲು ಮತ್ತು ಚಳುವಳಿಯಲ್ಲಿ ಪಾಲ್ಗೊಂಡ ನೌಕರರಿಗೆ ಶಾಲೆಯಲ್ಲಾಗಲೀ, ಎಲ್ಲಿಂದಲೇ ಆಗಲಿ ಕಿರುಕುಳ ಆಗದಂತೆ ಆದೇಶಿಸಲಾಗುವುದು ಎಂದು ಸರ್ಕಾರದ ಅಧಿಕಾರಿ ವರ್ಗ ಕೊನೆಗೆ ಒಪ್ಪಿಕೊಂಡಿರುವುದು ಕೂಡ ಹೋರಾಟದ ಮತ್ತೊಂದು ಯಶಸ್ಸು. ●





ಪಶ್ಚಿಮ ಬಂಗಾಳ : 20 ಸಾವಿರ ಕೋಟಿ ರೂಗಳ ಶಾರದಾ 'ಚೀಟ್' ಹಗರಣ – 'ತೃಣಮೂಲ–ಮಮತಾ' ಕಡೆ ಬೆರಳು

ಕೆ.ಎಂ. ನಾಗರಾಜ್



ಶಾರದಾ ಸಮೂಹ ಕಂಪೆನಿಗಳ ಒಡೆತನದ ಪ್ರಸಾರ ಮಾಧ್ಯಮ ವಿಭಾಗದ ಮುಖ್ಯ ನಿರ್ವಹಣಾಧಿಕಾರಿಯಾಗಿದ್ದ ತೃಣಮೂಲ ಕಾಂಗ್ರೆಸ್ ಸಂಸದ ಕುನಾಲ್ ಘೋಷ್ ಬಂಧನದ ನಂತರ 20,000 ಕೋಟಿ ರೂಪಾಯಿಗಳ ಹಗರಣ ಒಂದು ಹೊಸ ತಿರುವು ಪಡೆದಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಆಪ್ತವಲಯದಲ್ಲಿದ್ದ ಆತ ಈ ಹಗರಣದಲ್ಲಿ ಭಾಗಿಯಾಗಿರುವುದು ಈಗಾಗಲೇ ಸ್ಪಷ್ಟವಾಗಿತ್ತು. ಕಳೆದ ಏಳು ತಿಂಗಳಲ್ಲಿ ಹನ್ನೊಂದು ಬಾರಿ ಪೋಲೀಸರು ಆತನನ್ನು ಪ್ರಶ್ನಿಸಿದ್ದರೆ ವಿನಹ, ಬಂಧಿಸಿರಲಿಲ್ಲ. ಹಗರಣಕ್ಕೆ ಸಂಬಂಧಿಸಿದ ಸತ್ಯವನ್ನು–ಅಂದರೆ, ತೃಣಮೂಲ ಕಾಂಗ್ರೆಸ್ ಅಧಿನಾಯಕಿ ಮತ್ತು ಅದರ ಕೆಲವು ಪ್ರಮುಖ ಮುಖಂಡರು ಶಾರದಾ ಸಮೂಹ ಕಂಪೆನಿಗಳ ಜತೆ ಹೊಂದಿದ್ದ ಕಳ್ಳ ಸಂಬಂಧವನ್ನು–ಬಹಿರಂಗವಾಗಿ ಕುನಾಲ್ ಬಿಚ್ಚಿಟ್ಟಿದ್ದರಿಂದ ಆತನ ಬಾಯಿ ಮುಚ್ಚಿಸಲು ಈಗ ಬಂಧನವಾದಂತಿದೆ.

ಪ್ರಧಾನಿ ಮಾಡಲು.. ..

ಹಗರಣದ ವಿವರಗಳು ಈಗ ಪಶ್ಚಿಮ ಬಂಗಾಳದಲ್ಲಿ ಜನಜನಿತವಾಗಿವೆ. ತೃಣಮೂಲ ಕಾಂಗ್ರೆಸ್ ಅಧಿನಾಯಕಿ ಮತ್ತು ಅವರ ಬಲಗೈಬಂಟರು ಹಗರಣದ ಬೆನ್ನೆಲುಬಾಗಿ ನಿಂತಿರುವುದು ಸ್ಪಷ್ಟವಾಗಿದೆ. ಮಮತಾ ಬ್ಯಾನರ್ಜಿಯವರನ್ನು ಭಾವೀ ಪ್ರಧಾನ ಮಂತ್ರಿಯಾಗಿ ಬಿಂಬಿಸುವ ದೇಶದ ಪ್ರದಾನಿಯಾಗಿಸುವ ಏಕಮಾತ್ರ ಉದ್ದೇಶದಿಂದ, ಜನಸಾಮಾನ್ಯರು ಸಮೂಹ ಕಂಪೆನಿಗಳಲ್ಲಿ ಹೂಡಿಕೆ ಮಾಡಿದ್ದ ಹಣವನ್ನು ಪ್ರಸಾರ ಮಾಧ್ಯಮದಲ್ಲಿ ತೊಡಗಿಸಿ, ಎರಡು ಟಿ.ವಿ. ಛಾನೆಲ್ ಹಾಗು ಐದು ಭಾಷೆಗಳಲ್ಲಿ ಎಂಟು ಪತ್ರಿಕೆಗಳನ್ನು ಹುಟ್ಟು ಹಾಕಿದ್ದಾರೆ. ಅದು ಮಮತಾ ಅವರಿಗೂ ಗೊತ್ತಿತ್ತು. ಸಮೂಹ ಕಂಪೆನಿಗಳ ಎಲ್ಲಾ ವ್ಯವಹಾರ ಮರ್ಮಗಳು ಗೊತ್ತಿದ್ದೂ, ಮಮತಾ ಅಮಾಯಕರಂತೆ ವರ್ತಿಸುತ್ತಿದ್ದಾರೆಂದು ಕುನಾಲ್ ಹೇಳಿಕೆ ಹೊರಬಿದ್ದಿದೆ. ಮುಖ್ಯಮಂತ್ರಿ ತನ್ನನ್ನು ಬಲಿಪಶು ಮಾಡುತ್ತಾರೆಂದು ಅರಿತಿದ್ದ ಕುನಾಲ್, ಪ್ರಧಾನ ಮಂತ್ರಿಗಳಿಗೆ ಹಗರಣದ ಬಗ್ಗೆ ವಿವರವಾದ ಪತ್ರ ಬರೆದು ಸಿಬಿಐ ತನಿಖೆ ಮಾಡಿಸುವಂತೆ ಒತ್ತಾಯ ಮಾಡಿದ್ದ. ಹಗರಣದಲ್ಲಿ ತೊಡಗಿದ್ದಾಗಿ ಒಪ್ಪಿಕೊಳ್ಳುವಂತೆ ಒಬ್ಬ ಪೋಲೀಸ್ ಅಧಿಕಾರಿ ತನ್ನನ್ನು ಪೀಡಿಸುತ್ತಿರುವ ಬಗ್ಗೆ, ಕೋಲ್ಕತದ ಬಿಧಾನ್ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ.

ವ್ಯವಸ್ಥಿತ ಸಂಚು

2006ರಲ್ಲಿ ಪಶ್ಚಿಮ ಬಂಗಾಳದಲ್ಲಿ ಒಂದು ದುಷ್ಟಕೂಟವು ಅನೇಕ ಅಂಗಸಂಸ್ಥೆಗಳನ್ನೊಳಗೊಂಡ ಶಾರದಾ ಸಮೂಹವನ್ನು ಹುಟ್ಟು ಹಾಕಿತು. 'ಅಧ್ಯಾತ್ಮದ ಸಂಕೇತ' ಎಂದು ಪ್ರಸಿದ್ಧರಾಗಿರುವ ಶಾರದಾ ದೇವಿಯವರ ಹೆಸರನ್ನು ಹೊತ್ತ ಈ ಸಮೂಹವು ಅವರ ಹೆಸರಿಗೆ ಹಚ್ಚಿದ ಕಳಂಕವೇ ಜನರ ಭಾವನೆಗಳಿಗೆ ಕೊಟ್ಟ ಮೊದಲ ಹೊಡೆತ. ಇವರ ಚಟುವಟಿಕೆಗಳು ಕೊಟ್ಟ ಹೊಡೆತಗಳು;ಮೊದಲು ಜನರ ಜೇಬಿಗೆ; ನಂತರ ಜನರ ಜೀವನಕ್ಕೆ.

ಘನ ಚರಿತ್ರೆ

53 ವಯಸ್ಸಿನ ಸುದೀಪ್ತೋ ಸೇನ್ ಈ ಸಮೂಹದ ಅಧ್ಯಕ್ಷ. ಈತನ ಹಿನ್ನೆಲೆ ಕುತೂಹಲಕಾರಿಯಾಗಿದೆ. ಅವನ ತಂದೆ ಭೂದೇಬ್ ಸೇನ್ 1980ರ ಆಸುಪಾಸಿನಲ್ಲಿ 'ಸಂಚಯನಿ' ಹೆಸರಿನ ಚಿಟ್ ಫಂಡ್ ಕಂಪೆನಿ ನಡೆಸುತ್ತಿದ್ದ. ಬಹಳ ಕಡಿಮೆ ಅವಧಿಯಲ್ಲಿ ಅಪಾರ ಲಾಭ ಜೇಬಿಗಿಳಿಸಿ ನಂತರ ಹೇಳಹೆಸರಿಲ್ಲದಂತೆ ಸಂಚಯನಿ ನೆಲಕಚ್ಚಿತು. ತಂದೆಗೆ ತಕ್ಕ ಮಗ! ಮಾಜಿ ನಕ್ಸಲೀಯನಂತೆ. ಭೂಮಿ ವ್ಯವಹಾರದ ಹಿನ್ನೆಲೆಯೂ ಇದೆ. ಶಂಕರಾದಿತ್ಯ ಸೇನ್ ಎಂದಿದ್ದ ಹೆಸರನ್ನು ಸುದೀಪ್ತೋ ಸೇನ್ ಎಂದೂ, ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡು ಮುಖಚರ್ಯೆಯನ್ನೂ ಬದಲಾಯಿಸಿಕೊಂಡಿದ್ದ. ಮಮತಾ ದೀದಿ ರಚಿಸಿದ ವರ್ಣ ಚಿತ್ರಗಳನ್ನು 1.86 ಕೋಟಿ ರೂಪಾಯಿಗಳಿಗೆ ಕೊಂಡಿದ್ದು ಈತನ ಹೆಗ್ಗಳಿಕೆ. ಸ್ವಾಗತಕಾರಿಣಿಯಾಗಿ ಈ ಸಮೂಹ ಸೇರಿದ ಮೂವತ್ತರ ಹರೆಯದ ಮಾಜಿ ಗಗನಸಖಿ ದೇವಯಾನಿ, ಎರಡನೇ ಸ್ಥಾನಕ್ಕೆ ಏರಿ, ಈಗ ಗೆಳೆಯ ಸುದೀಪ್ತೋ ಸೇನ್ ಜೊತೆ ಜೈಲಿಗೆ ಹೋಗಿದ್ದಾಳೆ.



ಅಧಿಕಾರಸ್ಥರು–ಹಗರಣಕೋರರು. ಆಹಾ!! ಎಂಥಾ ಮೈತ್ರಿ!!!

ವಂಚಕ ಸ್ಕೀಮುಗಳು

2006ರಲ್ಲಿ ಸಣ್ಣದಾಗಿ ಆರಂಭವಾದ ಈ ಸಮೂಹ ಕ್ರಮೇಣ ತನ್ನ ಜಾಲವನ್ನು ವಿಸ್ತರಿಸಿತು. ಚಿಟ್ ಫಂಡ್ ವ್ಯವಹಾರಗಳ ಮೇಲೆ ಹಲವು ನಿರ್ಬಂಧಗಳಿದ್ದುದರಿಂದ ಮತ್ತು ಅವುಗಳನ್ನು ನಿಯಂತ್ರಿಸುತ್ತಿದ್ದ ರಿಸರ್ವ್ ಬ್ಯಾಂಕ್ ಹಾಗು 'ಸೆಬಿ' ಸಂಸ್ಥೆಗಳಿಂದ ತಪ್ಪಿಸಿಕೊಳ್ಳಲು ಹೊಸ ಹೊಸ ಸ್ಕೀಂಗಳ ಬಲೆ ಬೀಸಿದರು. ಗ್ರಾಮೀಣ ಪ್ರದೇಶಗಳಲ್ಲಿ 1,20,000 ಏಜಂಟರ ಮೂಲಕ 25–40% ಕಮೀಷನ್ ಆಧಾರದ ಮೇಲೆ ಠೇವಣಿಗಳನ್ನು ಪಡೆದರು. ಹೂಡಿಕೆದಾರರನ್ನು ನಂಬಿಸಲು. ಪ್ರವಾಸೋದ್ಯಮ; ಭೂಮಿ; ಮೂಲಸೌಕರ್ಯಗಳು; ಮೋಟಾರ್ ಸೈಕಲ್ ತಯಾರಿಕೆ; ಸಿಮೆಂಟ್ ಮತ್ತು ಸಿನೆಮಾ ಉದ್ಯಮಗಳಲ್ಲಿ ಹಣ ತೊಡಗಿಸಿರುವವರಂತೆ ನಟಿಸುತ್ತಿದ್ದರು. ರಾಜಕೀಯ ಪುಡಾರಿಗಳು ಆಯೋಜಿಸುತ್ತಿದ್ದ ದುರ್ಗಾ ಪೂಜೆ, ಫುಟ್ಬಾಲ್ ಕ್ಲಬ್, ಇಂತಹ ಜನಪ್ರಿಯ ಚಟುವಟಿಗೆಗಳಿಗೆ ಉದಾರವಾದ ದೇಣಿಗೆ ಮುಂತಾದ ನಯವಂಚನೆಗಳ ಮೂಲಕ ತಮ್ಮ ಸಾಮ್ರಾಜ್ಯವನ್ನು ಪಶ್ಚಿಮ ಬಂಗಾಳದಿಂದ ಝಾರ್ಖಂಡ್, ಛತ್ತೀಸಗಡ್, ಒರಿಸ್ಸಾ ಮತ್ತು ಅಸ್ಸಾಂ ವರೆಗೆ ವಿಸ್ತರಿಸಿದರು. ಹದಿನೇಳು ಲಕ್ಷ ಠೇವಣಿದಾರರಿಂದ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಠೇವಣಿ ಪಡೆದರು.

ಲೆಕ್ಕವಿಲ್ಲದ ಎಚ್ಚರಿಕೆಗಳು

ಸಮೂಹ ನಡೆಸುತ್ತಿದ್ದ ಅವ್ಯವಹಾರಗಳನ್ನು ಹಲವು ಸಂಸದರು 2009ರಲ್ಲಿ ಬಯಲಿಗೆಳೆದರು. 'ಸೆಬಿ' ತನಿಖೆ ನಡೆಸಿತು. 2011ರಲ್ಲಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿತು. ಆದರೆ, ಸಮೂಹವು ತನ್ನ ಕಾರ್ಯಾಚರಣೆ ಬದಲಾಯಿಸಿತು. ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸಿತು. ಸೆಬಿ ಪುನಃ 2012ರಲ್ಲಿ ವ್ಯವಹಾರಗಳನ್ನು ತಕ್ಷಣದಿಂದಲೇ ಸ್ಥಗಿತಗೊಳಿಸುವಂತೆ ಸಮೂಹವನ್ನು ಎಚ್ಚರಿಸಿತು. ಅದಕ್ಕೆ ಬಗ್ಗದ ಸಮೂಹ ತನ್ನ ಅಂಗ ಸಂಸ್ಥೆಗಳ ಸಂಖ್ಯೆಯನ್ನು 300ಕ್ಕೆ ಏರಿಸಿತು. ರಿಸರ್ವ್ ಬ್ಯಾಂಕ್ ಗವರ್ನರ್ ಡಿ.ಸುಬ್ಬಾರಾವ್ ಅವರು ರಾಜ್ಯ ಸರ್ಕಾರ ಸಮೂಹದ ಅವ್ಯವಹಾರಗಳ ಮೇಲೆ ಕ್ರಮ ಜರುಗಿಸಬೇಕೆಂದು ಡಿಸೆಂಬರ್ 7, 2012ರಂದು ಹೇಳಿದ್ದರು. ಆಗ ಸಮೂಹ ಕಂಪೆನಿಗಳು ಮುಳುಗುವುದು ಖಚಿತವಾಗಿತ್ತು. 1,500 ಮಂದಿ ನೌಕರರಿಗೆ ಸಂಬಳ ಕೊಡಲು ಹಣ ಇರಲಿಲ್ಲ. ಇನ್ನು ಹದಿನೇಳು ಲಕ್ಷ ಠೇವಣಿದಾರರಿಗೆ ಹಣ ಹಿಂತಿರುಗಿಸುವುದು ಎಲ್ಲಿಯ ಮಾತು. ತನ್ನ ಆಟ ಮುಗಿಯಿತು ಎಂದು ಅರ್ಥ ಮಾಡಿಕೊಂಡ ಸುದೀಪ್ತೋ, ಏಪ್ರಿಲ್ 06, 2013ರಂದು ಸಿಬಿಐಗೆ ತಪ್ಪೊಪ್ಪಿಗೆ ಪತ್ರ ಬರೆದು, ಕೆಲವು ರಾಜಕಾರಣಿಗಳಿಗೆ ಭಾರಿ ಮೊತ್ತದ ಹಣ ಕೊಟ್ಟಿರುವುದನ್ನೂ ವಿವರಿಸಿದ್ದಾನೆ. ನಂತರ ತನ್ನ ಗೆಳತಿ ದೇವಯಾನಿಯ ಜೊತೆ ಪರಾರಿಯಾದ. ಏಪ್ರಿಲ್ 23, 2013 ರಂದು ಇವರಿಬ್ಬರನ್ನು ಕಾಶ್ಮೀರದಲ್ಲಿ ಬಂಧಿಸಲಾಯಿತು. ಈ ಘಟನೆ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಚಾರ ಪಡೆಯಿತು.

ಘಟಾನುಘಟಿಗಳು

ಸುದೀಪ್ತೋ ಸೇನ್ ಈ ಪ್ರಮಾಣದ ಅವ್ಯವಹಾರ ನಡೆಸಲು ಸಾಧ್ಯವಾದದ್ದು, ಕುನಾಲ್ ತಿಳಿಸಿರುವಂತೆ, ತೃಣಮೂಲ ಕಾಂಗ್ರೆಸ್ ಅಧಿನಾಯಕಿ ಮಮತಾ ಮತ್ತು ತೃಣಮೂಲದ ಘಟನಾನುಘಟಿ ನಾಯಕರುಗಳ ಬೆಂಬಲದಿಂದ. ಅವರುಗಳಲ್ಲಿ ಆ ಪಕ್ಷದ ನಂ.2 ಆಗಿರುವ ಮುಕುಲ್ ರಾಯ್; ಸಾರಿಗೆ ಮಂತ್ರಿ ಮದನ್ ಮಿತ್ರಾ; ಸಂಸದರು–ಶ್ರಿಂಜೊಯ್ ಬೋಸ್, ಶುಭೇಂದು ಅಧಿಕಾರಿ, ಕೆ.ಡಿ.ಸಿಂಗ್– ಸ್ವಪನ್ ಸಾದನ್ ಬೋಸ್, ರಜತ್ ಮಜುಂದಾರ್, ಕೃಷ್ಣಾ

ಚಕ್ರವರ್ತಿ, ಸೌಮಿಕ್ ಬೋಸ್ ಮತ್ತು
ಚಕ್ರವರ್ತಿ, ಸಾರಿಗೆ ಮಂತ್ರಿ ಮದನ್
ಕೊಡುಗೆಯಂತೂ ವಿಶಿಷ್ಟ. ತನ್ನ ರಾ
ಪ್ರಭಾವವನ್ನು ದುರ್ಬಳಕೆ ಮಾಡುಕೆ
ಜನಸಾಮಾನ್ಯರನ್ನು ಶಾರದಾ ಕಂಪೆನಿಗಳ
ತೊಡಗಿಸುವಂತೆ ನೇರವಾಗಿ ಪ್ರೋತ್ಸಾಹಿ
ಈತ ಶಾರದಾ ಸಮೂಹದ ನೌಕರರ
ಅಧ್ಯಕ್ಷ ಆಗಿದ್ದೊಂದು ವಿಡಂಬನೆಯೇ ಸ
ಕುನಾಲ್ ಘೋಷ್ ತನ್ನ ಹೇ
ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ,
ಮಂತ್ರಿ ಮದನ್ ಮಿತ್ರಾ, ನಂ.2 ಮ
ಮುಕುಲ್ ರಾಯ್ ಸೇರಿದಂತೆ ಹಲವು ಸಂ
ಮತ್ತು ಅನೇಕ ಸ್ಥಳೀಯ ಮುಖ
ಹಗರಣದಲ್ಲಿ ಭಾಗಿಯಾಗಿರು
ಅನುಮಾನಕ್ಕೆ ಅವಕಾಶವಿಲ್ಲದಂತೆ ಹೆಸರಿ
ಇನ್ನೊಬ್ಬ ಪ್ರಮುಖ ತೃಣಮೂಲ ಕ
ಸಂಸದ ಸೋಮೇನ್ ಮಿತ್ರಾ, ಕ
ಘೋಷ್ ಹೇಳಿಕೆಯನ್ನು ಬೆಂಬಲಿ
ಶಾರದಾ ಸಮೂಹ ಕಂಪೆನಿಗಳ ಹ
ಹೊಣೆ ಹೊರಬೇಕಾದವರೇ ಆಡಳಿತದ
ಹಿಡಿದವರಾಗಿರುವುದರಿಂದ, ಅವರು
ತನಿಖೆ ನಗೆಪಾಟಲಿನ ಸಂಗತಿಯಾ
ನೆಪಮಾತ್ರಕ್ಕೆ ತನಿಖಾ ಆಯೋಗ ನೇಮಕ
ಈವರೆಗೆ, ಕೇವಲ ಮೂರು (ಸುದೀಪ್ತೋ
ದೇವಯಾನಿ; ಕುನಾಲ್ ಘೋಷ್) ಮಂದಿ
ಬಂಧಿಸಿದ್ದು ಉಳಿದ ತಪ್ಪಿತಸ್ಥರ ವಿ
ಕೂಡ ಮಾಡಿಲ್ಲ. ಅವರ ಬಂಧನ ಮತ
ಮುಟ್ಟುಗೋಲು ಇನ್ನೂ ದೂರದ
ಹಾಗಾಗಿ, ಪಶ್ಚಿಮ ಬಂಗಾಳ ಸಿಪಿಐ(ಎಂ
ಸಮಿತಿ ಕಾರ್ಯದರ್ಶಿಗಳೂ ಹಾಗು
ಬಂಗಾಳ ಎಡರಂಗದ ಅಧ್ಯಕ್ಷರೂ ಆದ ಬಿ
ಬಸು ಈ ಪ್ರಕರಣದ ವಿವರಗಳನ್ನು ತಿಳಿಯ
ಜನತೆಯ ಹಕ್ಕು ಎಂದು ಪ್ರತಿಪಾದಿ
ಅಲ್ಲದೆ, ಮುಖ್ಯಮಂತ್ರಿ, ಸಾರಿಗೆ ಮಂತ್ರಿ
ಮಿತ್ರಾ, ಮುಕುಲ್ ರಾಯ್ ಸೇರಿದಂತೆ
ಸಂಸದರು ಮತ್ತು ಅನೇಕ ಸ್ಥಳೀಯ ಮುಖ
ಹಗರಣದಲ್ಲಿ ಭಾಗಿಯಾಗಿರುವುದರಿಂದ,
ನಡತೆ ಮತ್ತು ಚಾರಿತ್ರ್ಯದ ಕೊರತೆಯಿ
ತೃಣಮೂಲ ನೇತೃತ್ವದ ಸರ್ಕಾರ ನ
ತನಿಖೆಗಳಲ್ಲಿ ನಂಬಿಕೆ ಇಡ
ಯಾರಿಗೂ ಸಾಧ್ಯವಾಗುವುದಿಲ್ಲವಾದು
ನ್ಯಾಯಾಲಯದ ಮೇಲುಸ್ತುವಾರಿಯಲ್ಲಿ
ತನಿಖೆ ನಡೆಸಬೇಕೆಂದು ಬಿಮಾನ್
ಒತ್ತಾಯಿಸಿದ್ದಾರೆ. ಪಶ್ಚಿಮ ಬಂಗಾಳ
ಸಭೆಯಲ್ಲಿ ವಿರೋಧ ಪಕ್ಷದ ನಾಯ
ಸೂರ್ಯಕಾಂತ ಮಿಶ್ರಾ ಅವರೂ ಸಹ ಕೊ
ನೇತೃತ್ವದ ಸಿಬಿಐ ತನಿಖೆ ನಡೆಸ
ಒತ್ತಾಯಿಸಿದ್ದಾರೆ. ಪಶ್ಚಿಮ ಬಂಗಾಳದ ಎ
ಈ ವಿಷಯದ ಕುರಿತು ಚಳುವಳಿ ತೀವ್ರಗೊ
ನಿರ್ಧರಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

...ನ್ನೊಂದಿಗೆ ಕೆಲಸ ಮಾಡುತ್ತಿದ್ದ ಮಹಿಳಾ ...ಕರ್ತೆಯೊಬ್ಬಳ ಮೇಲೆ ಲೈಂಗಿಕ ಧಾಳಿ ...ಸಿದ್ದಕ್ಕಾಗಿ ತೆಹಲ್ಕಾ ಪತ್ರಿಕೆಯ ಪ್ರಧಾನ ...ಪಾದಕ ತರುಣ ತೇಜಪಾಲ್ ವಿರುದ್ಧ ...ವಲ ವರ್ತಮಾನ ವರದಿ (ಎಫ್‌ಐಆರ್) ...ಖಲಿಸುವ ಮೂಲಕ ಗೋವಾದ ಸರ್ಕಾರ ...ತ್ತು ಪೊಲೀಸರು ಅತ್ಯಂತ ಸರಿಯಾದ ಕ್ರಮ ...ಕೊಂಡರು. ಲೈಂಗಿಕ ಧಾಳಿ ಒಂದು ಶಿಕ್ಷಾರ್ಹ ...ಪರಾಧವಾಗಿದ್ದು ಅದು ಗೊತ್ತಾದ ಮೇಲೆ ...ಪರಾಧಿಯ ಮೇಲೆ ಕ್ರಮ ಕೈಗೊಳ್ಳುವುದು ...ರ್ಕಾರದ ಆದ್ಯ ಕರ್ತವ್ಯವಾಗಿದೆ. ತೆಹಲ್ಕಾ ...ತ್ರಿಕೆಯೂ ಸದಾ ಮಹಿಳೆಯರ ಮತ್ತು ...ನಿತರ ಹಕ್ಕುಗಳ ಪರವಾಗಿ ದನಿಯೆತ್ತುತ್ತಾ ...ದಿದೆ. ಸಹಜವಾಗಿಯೇ ಪತ್ರಿಕೆಯ ಈ ...ಕ ಅಧಃಪತನದ ಬಗ್ಗೆ ಅದರ ಓದುಗರಿಗೆ ...ಶೆ ಮತ್ತು ಆಕ್ರೋಶವುಂಟಾಗಿದೆ. ಪತ್ರಿಕೆಯು ...ರರಿಂದ ಏನನ್ನು ನಿರೀಕ್ಷಿಸುತ್ತಿತ್ತೋ ಅದನ್ನು ... ಪಾಲಿಸಬೇಕೆಂದು ಎಲ್ಲೆಡೆ ಬೇಡಿಕೆಯ ...ಯೆದ್ದಿದೆ.

...ಲೈಂಗಿಕ ದೌರ್ಜನ್ಯ ಪ್ರಕರಣಗಳು ಬೆಳಕಿಗೆ ...ವುದು ಈ ದೌರ್ಜನ್ಯಕ್ಕೆ ಬಲಿಯಾದ ...ಹಿಳೆಯರು ಆ ಬಗ್ಗೆ ಮಾತನಾಡುವರೋ ... ಎಂಬುದನ್ನು ಅವಲಂಬಿಸಿದ್ದು ...ಕ ಪ್ರಕರಣಗಳು ವರದಿಯಾಗದೇ ...ಯಾಗುತ್ತವೆ. ಇದಕ್ಕೆ ಹಲವಾರು ...ರಣಗಳಿವೆ. ಸಾಮಾಜಿಕ ಕಳಂಕ, (ನೊಂದ ...ಹಿಳೆಗೆ)ತೀವ್ರ ಆಘಾತ ನೀಡುವ ಕಾನೂನು ...ಗಳು, ನಿರ್ಲಕ್ಷ್ಯ ತೋರುವ ಅಧಿಕಾರಿಗಳು ...ತ್ತು ನ್ಯಾಯಕ್ಕಾಗಿ ಹೋರಾಡುವಲ್ಲಿ ಸಂತ್ರಸ್ತ ...ಹಿಳೆ ಅನುಭವಿಸುವ ಸಂಕಷ್ಟದಿಂದ ಆಕೆಯನ್ನು ...ರು ಮಾಡಲು ದೂರು ನೀಡದಂತೆ ಆಕೆ– ... ಮೇಲೆ ಕುಟುಂಬ ಮತ್ತು ಸ್ನೇಹಿತರು ...ರುವ ಒತ್ತಾಯ ಈ ಎಲ್ಲವೂ ಅದಕ್ಕೆ ಕಾರಣ. ...ಲ್ಲವೂ ಅಪರಾಧಿಗೆ ಅನುಕೂಲಕರವಾಗುತ್ತದೆ. ...ಡಿಯುವ ಸ್ಥಳಗಳಲ್ಲಿ ನಡೆಯುವ ದೌರ್ಜನ್ಯದ ...ಗ್ಗೆ ದನಿಯೆತ್ತುವುದು ಇನ್ನಷ್ಟು ಕಠಿಣ. ಏಕೆ– ...ರೆ ಬಹುತೇಕ ಪ್ರಕರಣಗಳಲ್ಲಿ ಇಂತಹ ...ರ್ಜನ್ಯ ಎಸಗುವವರು ಮಾಲೀಕ ಇಲ್ಲವೇ ...ಮೇಲಾಧಿಕಾರಿಯಾಗಿದ್ದು, ಸಂತ್ರಸ್ತ ಮಹಿಳೆ ... ಜೀವನೋಪಾಯವಾದ ಕೆಲಸವನ್ನೇ ...ದುಕೊಳ್ಳಬೇಕಾಗುವ ಅಪಾಯವಿರುತ್ತದೆ. ...ಹಳಷ್ಟು ಪ್ರಕರಣಗಳಲ್ಲಿ ಮೇಲಾಧಿಕಾರಿಯ ...ರುದ್ಧ ದನಿಯೆತ್ತುವ ಮಹಿಳೆ ತನ್ನ ಕೆಲಸ ...ಳೆದುಕೊಳ್ಳುತ್ತಾ ಬರುತ್ತಿರುವುದು ನಡೆಯುತ್ತಿದೆ.

ತೆಹಲ್ಕಾ ಪ್ರಕರಣದಲ್ಲಿ ತನ್ನ ಮೇಲೆ ನಡೆದ ...ರ್ಜನ್ಯದ ಬಗ್ಗೆ ಸಂಸ್ಥೆಯ ಎರಡನೇ ...ಕಾರಿ–'ಮೇನೆಜಿಂಗ್ ಎಡಿಟರ್' 'ಶೋಮಾ ...ಧರಿ'ಗೆ ವರದಿ ಮಾಡುವ ಮೂಲಕ ಸಂತ್ರಸ್ತ ...ವ ಪತ್ರಕರ್ತೆ ಅಸಾಮಾನ್ಯ ಶೌರ್ಯ ...ಮೆರಿದ್ದಾಳೆ. ಆದರೆ ಆಕೆ ನಂಬಿದ್ದವರೇ ...ಯನ್ನು ಕೈಬಿಟ್ಟಿದ್ದಾರೆ. ದೂರು ಸ್ವೀಕರಿಸಿದ ...ಶೋಮಾ ಚೌಧರಿ ತಪ್ಪಿತಸ್ಥ ತರುಣ ತೇಜಪಾಲ್ ...ರ್ಪಿಸಿದ ಕ್ಷಮಾಯಾಚನೆ ಮತ್ತು ತಾನೇ ...ರ್ಧರಿಸಿದ ಮತ್ತು ತನ್ನ ಮೇಲೆ ತಾನೇ ...ರಿಕೊಂಡ ಶಿಕ್ಷೆಯಾದ 'ಆರು ತಿಂಗಳ ಸ್ವ– ...ಘೋಷಿತ ರಜೆ'ಯನ್ನು ಒಪ್ಪಿಕೊಂಡಿದ್ದಾರೆ. ...ತ್ತು ಇಡೀ ಘಟನೆಯನ್ನು ಮುಚ್ಚಿಹಾಕುವ ...ಯತ್ನ ನಡೆಸಿದ್ದಾರೆ. ಇಷ್ಟೇ ಸಾಲದೆಂಬಂತೆ ... ತರುಣ ತೇಜಪಾಲರ ನಿರ್ಧಾರದ ಬಗ್ಗೆ ...ದಕ್ಕಿಂತ ಇನ್ನೇನು ಬೇಕು? ಇದು ನಾವು ...ಅಂತ ಜಾಸ್ತಿಯೇ ಆಗಿದೆ. ಆತ ಕ್ಷಮೆ ...ಕೇಳಿರುವುದು ಮಾತ್ರವಲ್ಲ, ಪ್ರಾಯಶ್ಚಿತ್ತವಾಗಿ ...ರು ತಿಂಗಳ ಕಾಲ ತನ್ನ ಸಂಸ್ಥೆಯ ಮುಖ್ಯಸ್ಥನ ...ದವಿ ತ್ಯಾಗ ಮಾಡಿದ್ದಾರೆ." ಎಂಬ ಆಘಾತಕಾರಿ ಹೇಳಿಕೆಯ ಮೂಲಕ ತನ್ನ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ. ಅತ್ಯಾಚಾರ ಪ್ರಕರಣಗಳ ಕಾರಣವಾಗಿ ಭಾರತದ ಜೈಲುಗಳಲ್ಲಿರುವ ಇತರ ಅಪರಾಧಿಗಳಿಗೂ ಇದನ್ನೇ ಅನ್ವಯಿಸಿದರೆ ಬಹುಶಃ ಅವರೂ ತಮ್ಮಿಂದ ಅತ್ಯಾಚಾರಕ್ಕೊಳಗಾದ ಸಂತ್ರಸ್ತ ಮಹಿಳೆಯರ ಮನೆಯ ಮುಂದೆ ಸಾಲಾಗಿ ನಿಂತು ಕ್ಷಮೆಯಾಚಿಸಿ 'ಆರು ತಿಂಗಳುಗಳ ಪ್ರಾಯಶ್ಚಿತ್ತ' ಮಾಡಿಕೊಳ್ಳಬಹುದೇನೊ? ಎಷ್ಟೆಂದರೂ ಕಾನೂನಿನಂತೆ ಶಿಕ್ಷೆ ಅನುಭವಿಸುವುದಕ್ಕಿಂತ ತನ್ನ ಕುಟುಂಬ ಮತ್ತು ನೆಚ್ಚಿನ ಸ್ನೇಹಿತರೆದುರು ಬಾಯಿಮಾತಿನ ಕ್ಷಮೆ ಕೇಳುವುದು ಸುಲಭವಲ್ಲವೆ?.

ಪ್ರಯತ್ನ ನಡೆಸುತ್ತಿದೆಯೆಂಬಂತೆ ಜಗತ್ತಿಗೆ ತೋರಿಸಲಾಯ್ತು.

2013ರ ಕಾನೂನಿನ ವ್ಯಾಪ್ತಿ :

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ನಿವಾರಣೆ) ಕಾನೂನು 2013 ಸುಪ್ರಿಂ ಕೋರ್ಟ್ 'ವಿಶಾಖಾ' ಪ್ರಕರಣದಲ್ಲಿ ನೀಡಿದ ತೀರ್ಪಿನ ಆಧಾರದಲ್ಲಿ ರಚಿತವಾಗಿದೆ. ಭಾರತ ದಂಡ ಸಂಹಿತೆಯ ಮಹಿಳೆಯರನ್ನು ಲೈಂಗಿಕವಾಗಿ ಪೀಡಿಸುವ (Molestation) ತಡೆ ಕಾಯ್ದೆಯಡಿಯಲ್ಲಿ ಬರುವ

> 'ಲೈಂಗಿಕ ಕಿರುಕುಳ ವಿರೋಧಿ ಕಾಯ್ದೆ'ಯು 'ಅತ್ಯಾಚಾರ'ದಂತಹ ಶಿಕ್ಷಾರ್ಹ ಅಪರಾಧ ಪ್ರಕರಣದ ಗಂಭೀರತೆಯನ್ನು ಕಡಿಮೆ ಮಾಡಲು ಬಳಕೆಯಾದಲ್ಲಿ ಇದು ಇಡೀ ದುಡಿಯುವ ಮಹಿಳೆಯರ ಚಳುವಳಿ ನಡೆಸಿದ ಹೋರಾಟಗಳ ಅಣಕ ಮಾಡಿದಂತಾಗುತ್ತದೆ.
>
> –ಬೃಂದಾಕಾರಟ್

'ತೆಹಲ್ಕಾ' ಪತ್ರಿಕೆಯ ಸಂಪಾದಕ ತನ್ನ ಸಹೋದ್ಯೋಗಿ ಪತ್ರಕರ್ತೆಯ ಮೇಲೆ ಲೈಂಗಿಕ ಧಾಳಿ ನಡೆಸಿದ ಪ್ರಕರಣವು ಮತ್ತೊಮ್ಮೆ ಲೈಂಗಿಕ ಧಾಳಿಗಳ ದೂರುಗಳ ತನಿಖೆಯ ಸಂಬಂಧ ಅಪರಾಧಿಯ ವಿಚಾರಣೆ ನಡೆಸುವುದು ಸೇರಿದಂತೆ ಬಲವಾದ ಸಾಂಸ್ಥಿಕ ವ್ಯವಸ್ಥೆ ಅಗತ್ಯ ಎಂಬುದನ್ನು ಎತ್ತಿ ತೋರಿಸುತ್ತಿದೆ.

ತೇಜ್‌ಪಾಲ್ ಲೈಂಗಿಕ ಪ್ರಕರಣ: 'ದುಡಿಯುವ ಮಹಿಳೆ' ಮಾಲೀಕನ ಕೈಗೊಂಬೆಯಲ್ಲ


ಅನುವಾದ – ಎಸ್.ಕೆ. ಗೀತಾ

–ಬೃಂದಾ ಕಾರಟ್

ಸಂತ್ರಸ್ತ ಮಹಿಳೆಯ ದೂರಿನ ಆಧಾರದಲ್ಲಿ ನೋಡಿದರೆ ಆಗಿರುವ ಅಪರಾಧ ಭಾರತ ದಂಡ ಸಂಹಿತೆ 375 ಬಿ.ಯ ಕಾಲಂ ಒಂದರ ತಿದ್ದುಪಡಿ ಅನ್ವಯ 'ಅತ್ಯಾಚಾರ'ವಾಗಿದ್ದು ಅದು ದೃಢಪಟ್ಟಲ್ಲಿ ಅಪರಾಧಿಗೆ ಏಳು ವರ್ಷಗಳ ಜೈಲು ವಾಸ ವಿಧಿಸಲಾಗುತ್ತದೆ. ಅದಲ್ಲದೆ ತಿದ್ದುಪಡಿಯಾಗಿರುವ ಕಾನೂನಿನ್ವಯ ಸೆಕ್ಷನ್ 376(ಬಿ)ನಂತೆ ಅಪರಾಧ ಎಸಗಿದ ವ್ಯಕ್ತಿ 'ಸಂಬಂಧಿತ ಪಾಲಕ, ಅಧ್ಯಾಪಾಲಕ, ವಿಶ್ವಸ್ಥ ಅಥವಾ ಅಧಿಕಾರದ ಸ್ಥಾನ'ದಲ್ಲಿದ್ದರೆ ಈ ಅಪರಾಧವನ್ನು ತೀವ್ರ ಮಟ್ಟದ 'ಅತ್ಯಾಚಾರ' ಪ್ರಕರಣವೆಂದು ಪರಿಗಣಿಸಿ ಶಿಕ್ಷೆಯನ್ನು ಕನಿಷ್ಠ ಹತ್ತು ವರ್ಷಗಳಿಗೇರಿಸಲಾಗುತ್ತದೆ. ತೆಹಲ್ಕಾದ ಪ್ರಕರಣ ನಿಸ್ಸಂಶಯವಾಗಿ ಈ ಸೆಕ್ಷನ್‌ನ ವ್ಯಾಪ್ತಿಗೆ ಒಳಪಡುತ್ತದೆ.

ಈ ಪ್ರಕರಣದ ತೀವ್ರತೆಯನ್ನು ಮರೆಮಾಚಲು ತೆಹಲ್ಕಾ ಇನ್ನೊಂದು ವಿಧಾನವನ್ನು ಅನುಸರಿಸಿದೆ. ದುರದೃಷ್ಟವಶಾತ್ ಹಲವು ಮಹಿಳಾ ಕಾರ್ಯಕರ್ತೆ–ಯರು ಮತ್ತು ಮಹಿಳಾ ನ್ಯಾಯವಾದಿಗಳು ತಮ್ಮ ಸುದ್ದಿ ಮಾಧ್ಯಮಗಳಲ್ಲಿ ತಮ್ಮ ವಿತಂಡವಾದದ ಮೂಲಕ ಈ ಮರೆಮಾಚುವ ಕೆಲಸದಲ್ಲಿ ಭಾಗಿಗಳಾದರು. ಸಂತ್ರಸ್ತಳಾದ ಮಹಿಳೆಯೇ ಈ ಪ್ರಕರಣವನ್ನು ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳದ ವಿರುದ್ಧ ರಕ್ಷಣೆ ನೀಡುವ ಕಾನೂನಿನಡಿ ರಚಿಸಿರುವ ಆಂತರಿಕ ಸಮಿತಿಯೇ ಪರಿಶೀಲಿಸಲಿ ಎಂದು ಬಯಸಿದ್ದಾಳೆ ಎಂದು ವಾದಿಸಲಾಯ್ತು. ವಾಸ್ತವದಲ್ಲಿ ಕೇಂದ್ರ ಸರ್ಕಾರ ಸರಿಯಾಗಿ ನಿಯಮಗಳನ್ನು ರಚಿಸಲು ಸೋತಿರುವುದರಿಂದ ಈ ಕಾಯ್ದೆಯೇ ನಿದ್ರಾವಸ್ಥೆಯಲ್ಲಿದೆ. ತೆಹಲ್ಕಾದಲ್ಲಿ ಅಂತಹ ಸಮಿತಿ ಮೊದಲೇ ಅಸ್ತಿತ್ವದಲ್ಲಿರದ ಕಾರಣ ತರಾತುರಿಯಿಂದ ಸಮಿತಿಯೊಂದನ್ನು ರಚಿಸಲಾಯ್ತು. ಆ ತರುಣ ಪತ್ರಕರ್ತೆಯ ದೂರಿನ ಸಂಬಂಧ ತೆಹಲ್ಕಾ ಸಂಸ್ಥೆ ಎಲ್ಲಾ ಅಗತ್ಯ ಕಡಿಮೆ ಪ್ರಮಾಣದ ಲೈಂಗಿಕ ಅಪರಾಧಗಳಂತಹ ಪ್ರಕರಣಗಳು ಕೆಲಸದ ಸ್ಥಳದಲ್ಲಿ ನಡೆದಾಗ ನ್ಯಾಯಾಲಯಕ್ಕೆ ತೆರಳದೆಯೇ ಮಹಿಳೆಯರಿಗೆ ವಿಳಂಬವಾಗದಂತೆ ತ್ವರಿತವಾಗಿ ನ್ಯಾಯ ಒದಗಿಸುವುದು ಈ ಕಾನೂನಿನ ಮುಖ್ಯ ಉದ್ದೇಶ.

ಈ ಕಾನೂನಿನನ್ವಯ 'ಲೈಂಗಿಕ ಕಿರುಕುಳ'ವೆಂದರೆ,'ದೈಹಿಕ ಸ್ಪರ್ಶ' ಅಥವಾ 'ಲೈಂಗಿಕ



ಸಂಪರ್ಕ ಬಯಸಿ ತೋರುವ ಹಾವಭಾವ', 'ಲೈಂಗಿಕ ಛಾಯೆಯಿರುವ ಮಾತುಗಳು', 'ಲೈಂಗಿಕ ಬಯಕೆ ತೀರಿಸುವಂತೆ ಕೋರಿಕೆ' ಇತ್ಯಾದಿಗಳು ಸೇರಿವೆ. ಈ ಎಲ್ಲವೂ ಅಪರಾಧಗಳೇ. ಆದರೆ ಈ ಯಾವುವು 'ಅತ್ಯಾಚಾರ'ದಷ್ಟು ತೀವ್ರ ಪ್ರಮಾಣದ ಅಪರಾಧವಲ್ಲ.

ಬಹಳ ಮುಖ್ಯವಾಗಿ, 'ನಾಗರಿಕ ಪರಿಹಾರ' ಕಂಡುಕೊಳ್ಳಲು ರೂಪಿಸಿರುವ ಈ ಕಾಯ್ದೆಯು, ಕೋರ್ಟ್‌ನ ತನಿಖೆಗೊಳಪಡಬೇಕಾದ ಅಪರಾಧಗಳು ಯಾವುವು ಎಂದು ಪ್ರತ್ಯೇಕಿಸುವ ಪ್ರತ್ಯೇಕ ಪರಿಚ್ಛೇಧವನ್ನು ಹೊಂದಿದೆ.

2013ರ ಈ ಕಾನೂನಿನ 27(1) ರ ವಿಧಿಯ ಪ್ರಕಾರ, "ಈ ಕಾಯ್ದೆಯ ಅಡಿಯಲ್ಲಿ ಬರುವ ಅಪರಾಧಗಳು, ಆಂತರಿಕ ಸಮಿತಿಗೆ ಮಹಿಳೆ ನೀಡಿದ ದೂರಿನ ಕುರಿತ ತನಿಖೆಯ ಪ್ರಶ್ನೆಯು ಸಂತ್ರಸ್ತ ಮಹಿಳೆ ಅಥವಾ ಆಂತರಿಕ ಸಮಿತಿಯೇ ದೂರಿದರೂ ಯಾವುದೇ ಕೋರ್ಟುಗಳ ತನಿಖಾ ವ್ಯಾಪ್ತಿಗೆ ಒಳಪಡುವುದಿಲ್ಲ" ವಿಧಿ 27(3) ನಿರ್ದಿಷ್ಟವಾಗಿ ಹೀಗೆ ಹೇಳುತ್ತದೆ "ಈ ಕಾಯ್ದೆಯಡಿ ಬರುವ ಪ್ರತಿಯೊಂದು ಅಪರಾಧವೂ ಕೋರ್ಟ್‌ಗಳ ವಿಚಾರಣಾ ವ್ಯಾಪ್ತಿಯಿಂದ ಹೊರಗಿರುತ್ತವೆ."

ಈ ಕಾಯ್ದೆಯಲ್ಲಿ ಗೊಂದಲಕಾರಿ ವಿಧಿಗಳಿದ್ದು, ಸರ್ಕಾರವು ಶಿಕ್ಷಾರ್ಹ ಅಪರಾಧಗಳ ಕುರಿತು ತಾನಾಗಿ ಕ್ರಮಕೈಗೊಂಡು ವಿಚಾರಣೆಗೆ ಗುರಿಪಡಿಸಬೇಕಾದ ತನ್ನ ಕಾನೂನುಬದ್ಧ ಹೊಣೆಗಾರಿಕೆಯನ್ನೇ ಇಲ್ಲದಂತೆ ಮಾಡಲು ಅದನ್ನು ಅರ್ಥೈಸಬಹುದಾಗಿದೆ. ಈಗ ತೆಹಲ್ಕಾ ಪ್ರಕರಣದಲ್ಲಿ ಇಂತಹ ವಿಶ್ಲೇಷಣೆ ನಡೆದಿರುವುದು ಇದನ್ನೇ ಬೊಟ್ಟು ಮಾಡಿ ತೋರಿಸುತ್ತದೆ. 'ಅತ್ಯಾಚಾರ ವಿರೋಧಿ ಕಾಯ್ದೆ'ಯಡಿ ವಿಚಾರಣೆಗೊಳಪಡಿಸಬೇಕಾದದಂತಹ 'ಅತ್ಯಾಚಾರ'ದಂತಹ ಶಿಕ್ಷಾರ್ಹ ಪ್ರಕರಣದಲ್ಲಿ ಈ 'ಲೈಂಗಿಕ ಕಿರುಕುಳ ವಿರೋಧಿ ಕಾಯ್ದೆ'ಯು ಪ್ರಕರಣದ ಗಂಭೀರತೆಯನ್ನು ಕಡಿಮೆ ಮಾಡಲು ಬಳಕೆಯಾದಲ್ಲಿ ಇದು ಇಡೀ ದುಡಿಯುವ ಮಹಿಳೆಯರ ಚಳುವಳಿ ನಡೆಸಿದ ಹೋರಾಟಗಳ ಅಣಕ ಮಾಡಿದಂತಾಗುತ್ತದೆ. ತೆಹಲ್ಕಾದಂತಹ ಪ್ರಕರಣದಲ್ಲಿ ಸಂತ್ರಸ್ತಳಿಗೆ ನ್ಯಾಯ ದೊರಕಿಸುವ ಬದಲಿಗೆ ಆಂತರಿಕ ತನಿಖಾ ಸಮಿತಿಯು ಅಪರಾಧಿಗೆ ರಕ್ಷಣೆ ನೀಡಲು ಕೆಲಸ ಮಾಡಿತು. ಆದರೆ ಈ ಪ್ರಕರಣದಲ್ಲಿ ಎಫ್‌ಐಆರ್ ದಾಖಲು ಮಾಡಿ ಕಾನೂನು ಪ್ರಕ್ರಿಯೆ ಆರಂಭಗೊಂಡಿರುವುದು ಅಂತಹ ಪ್ರಯತ್ನಕ್ಕೆ ಹಿನ್ನಡೆಯಾಗಿದೆ.

ತೆಹಲ್ಕಾ ಸಂಸ್ಥೆಯೇ ಪ್ರಕರಣವನ್ನು ನಿರ್ವಹಿಸುವುದರ ಪರವಾಗಿ ಮುಂದಿಟ್ಟ ಇನ್ನೊಂದು ವಾದವೆಂದರೆ 'ದೂರುದಾರಳ ಪರವಾಗಿ ಕಾರ್ಯನಿರ್ವಹಿಸುವ ಮಧ್ಯವರ್ತಿ ಸಂಸ್ಥೆ(ಏಜೆನ್ಸಿ) ಆಕೆಯೊಂದಿಗಿದೆ. ಆಕೆಗೆ ತನ್ನ ಕುರಿತು ತಾನು ತೀರ್ಮಾನ ಕೈಗೊಳ್ಳುವ ಸಾಮರ್ಥ್ಯವಿದೆ. ಆದ್ದರಿಂದ ಆಕೆ ತಾನು ಪೊಲೀಸರಿಗೆ ದೂರು ನೀಡದಿದ್ದರೂ ಹಾಗೂ ಆಕೆ ನ್ಯಾಯಪಡೆಯಲು ಇತರ ಮಾರ್ಗಗಳಲ್ಲಿ ಪ್ರಯತ್ನಿಸಿದರೂ ಅಥವಾ ಮೌನವಾಗಿ ಉಳಿದರೂ ಕೂಡ ಆಕೆಯ ತೀರ್ಮಾನ. ಅದನ್ನು ಗೌರವಿಸಬೇಕು.' ಎಂಬುದು.

ತನ್ನ ದೂರನ್ನು ಯಾರು ನಿರ್ವಹಿಸಬೇಕೆಂದು ಅತ್ಯಾಚಾರಕ್ಕೊಳಗಾದ ಮಹಿಳೆ ನಿರ್ಧರಿಸಬೇಕೆಂದರೆ ಅದಕ್ಕೆ ಲಭ್ಯವಿರುವ ವಿವಿಧ

ಮಟ 15 ಕ್ಕೆ

ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಗೆ ಸೆಸ್ ಸಂಗ್ರಹಿಸುವುದು 'ಕಲ್ಯಾಣ ಮಂಟಪ' ಕಟ್ಟುವುದಕ್ಕಾ ?

'ವಿಧಾನಸೌಧ ಚಲೋ'ದಲ್ಲಿ ಸರ್ಕಾರಕ್ಕೆ ಎಸ್.ಪ್ರಸನ್ನಕುಮಾರ್ ತರಾಟೆ

ವರದಿ : ಬಿ. ಉಮೇಶ್

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೇಲೆ ಕಾರ್ಮಿಕರು ಇಟ್ಟಿದ್ದ ಭರವಸೆಗಳು ಹುಸಿಯಾಗುತ್ತಿವೆ. ಕಾರ್ಮಿಕ ಕಾನೂನುಗಳು ಸರಿಯಾಗಿ ಜಾರಿಯಾಗುತ್ತಿಲ್ಲ. ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸುಮಾರು 2,000 ಕೋಟಿಗೂ ಹೆಚ್ಚಿನ ಸೆಸ್ ನಿಧಿ ಹಣ ಸಂಗ್ರಹವಾಗಿದೆ. ಇದು ಕಾರ್ಮಿಕರಿಗೆ ಸಿಗಬೇಕಾದದ್ದು. ಆದರೆ ಅದು 'ಕಲ್ಯಾಣ ಮಂಟಪ'ದಂತಹ ಅನಗತ್ಯ ಉದ್ದೇಶಕ್ಕೆ ಒಂದು ಸಾವಿರ ಕೋಟಿ ಖರ್ಚು ಮಾಡಲು ಮುಂದಾಗಿರುವುದು ಸಮಂಜಸವಲ್ಲ. ಸರ್ಕಾರ ತನ್ನ ಇಚ್ಛಾಶಕ್ತಿಯನ್ನು ಬಳಸಿ ಬಾಕಿ ಇರುವ ಕಟ್ಟಡ ಕಾರ್ಮಿಕರ ಸೌಲಭ್ಯದ ಹಣವನ್ನು ತಕ್ಷಣವೇ ಕಾರ್ಮಿಕರಿಗೆ ಸಿಗುವಂತೆ ಮಾಡಬೇಕೆಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಆಗ್ರಹಿಸಿದರು. ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಫೆಡರೇಷನ್ (ರಿ)(ಸಿಡಬ್ಲುಎಫ್ಐ–ಸಿಐಟಿಯು) ವತಿಯಿಂದ ನಡೆದ ಕಟ್ಟಡ ಕಾರ್ಮಿಕರ ವಿಧಾನಸೌಧ ಚಲೋ





ಚಳುವಳಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಬಂದ ಸಾವಿರಾರು ಕಾರ್ಮಿಕರ ರ್‍ಯಾಲಿಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ನವೆಂಬರ್ 12, 2013 ರಂದು ಬೆಂಗಳೂರು ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್‌ನ ವರೆಗೆ ಕಾರ್ಮಿಕರ ಈ ಬೃಹತ್ ರ್‍ಯಾಲಿ ನಡೆಸಿ ಬಹಿರಂಗಸಭೆ ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ಸಿಡಬ್ಲುಎಫ್ಐ ಅಖಿಲ ಭಾರತ ಅಧ್ಯಕ್ಷರಾದ ಸಿಂಗಾರವೇಲು ಮಾತನಾಡಿ ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚನೆ, ಸೌಲಭ್ಯಗಳ ಜಾರಿಯಾಗಲು ಸಿಐಟಿಯು ಸೇರಿದಂತೆ ಕೇಂದ್ರ ಕಾರ್ಮಿಕ ಸಂಘಟನೆಗಳ ಶ್ರಮದಿಂದ ಸಾಧ್ಯವಾಗಿದೆ. ಅದು ಒಂದು ಹಂತದ ಯಶಸ್ಸು ಎಂದರು. ದೇಶಾದ್ಯಂತ ಕಟ್ಟಡ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ನಡೆಸುತ್ತಿರುವ ಹೋರಾಟಗಳ ಬಗ್ಗೆ ತಿಳಿಸಿದ ಅವರು ಕಟ್ಟಡ ಕಾರ್ಮಿಕ ಸಂಘಟನೆಯನ್ನು ಬಲಿಷ್ಟಗೊಳಿಸುವಂತೆ ಕರೆ ನೀಡಿದರು.

ಸಭೆಗೆ ಕಾರ್ಮಿಕ ಸಚಿವರಾದ ಪಿ.ಟಿ. ಪರಮೇಶ್ವರ ನಾಯ್ಕ ಅವರು ಆಗಮಿಸಿ ಕಾರ್ಮಿಕರ ಪರವಾಗಿ ಪ್ರಮುಖ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಸ್ವೀಕರಿಸಿದರು. ಸಭೆಯನ್ನುದ್ದೇಶಿಸಿ ಸಂಘದ ನಾಯಕರು ಹಾಗೂ ಮಾಜಿ ಕಲ್ಯಾಣ ಮಂಡಳಿ ಸದಸ್ಯರಾದ ಸ್ವಾಮಿ ಮಾತನಾಡಿದರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಂಘಟನೆಯ ರಾಜ್ಯಾಧ್ಯಕ್ಷ ಎನ್.ವೀರಸ್ವಾಮಿ ವಹಿಸಿದ್ದರು. ಉಪಾಧ್ಯಕ್ಷರುಗಳಾದ ಬಾಲಕೃಷ್ಣಶೆಟ್ಟಿ, ಹರೀಶ್ ನಾಯಕ್, ಶ್ರೀಧರ್, ತಿಲಕ್ ಜಟ್ಟಿಗೌಡ, ಸಹಕಾರ್ಯದರ್ಶಿಗಳಾದ ಕೆ. ಮಹಾಂತೇಶ, ಯಲ್ಲಪ್ಪ, ವಸಂತಾಚಾರಿ, ರಮೇಶ್, ರಾಮಕೃಷ್ಣ ಮುಂತಾದವರು ವೇದಿಕೆಯಲ್ಲಿದ್ದರು. ರಾಜ್ಯ ಕಾರ್ಯದರ್ಶಿ ಬಿ.ಉಮೇಶ್ ಪ್ರಾಸ್ತವಿಕ ಮಾತನಾಡಿದರು. ವಸಂತಾಚಾರಿ ವಂದಿಸಿದರು.

ಸಚಿವರೊಂದಿಗೆ ವಿಧಾನಸೌಧದಲ್ಲಿ ಮಾತುಕತೆ

ಚಳುವಳಿಯ ಸಂದರ್ಭದಲ್ಲಿ ಕಾರ್ಮಿಕ ಸಚಿವ ಪರಮೇಶ್ವರ್ ನಾಯಕ್ ಹಾಗೂ ಕಾರ್ಮಿಕ ಇಲಾಖೆಯ ಮುಖ್ಯಕಾರ್ಯದರ್ಶಿ ಎಂ.ಬಿ.ದ್ಯಾಬೇರಿ, ಕಾರ್ಮಿಕ ಆಯುಕ್ತರಾದ ನಿರಂಜನ್ ಮನವಿ ಸ್ವೀಕರಿಸಿ ನೀಡಿದ ಭರವಸೆಯಂತೆ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರೊಡನೆ ಕಟ್ಟಡ ಕಾರ್ಮಿಕರ ಸಮಸ್ಯೆಗಳ ಸಂಬಂಧ ನವೆಂಬರ್ 21 ರಂದು ವಿಧಾನಸೌದದಲ್ಲಿ ಸಭೆ ನಡೆಸಿದರು.


ಸಂಘಟನೆಯ ಪರವಾಗಿ ಎನ್.ವೀರಸ್ವಾಮಿ, ಬಿ.ಉಮೇಶ್, ಮಹಂತೇಶ್ ಪ್ರತಿನಿಧಿಸಿ ಕಾರ್ಮಿಕರಿಗೆ ಬಾಕಿ ಇರುವ ವಿವಾಹ ಸೌಲಭ್ಯ ಸೇರಿದಂತೆ ಇತರೇ ಸೌಲಭ್ಯಗಳ ಹಣವನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರ ಮಟ್ಟದಲ್ಲಿ ಅಗತ್ಯ ಸಿಬ್ಬಂದಿ ಮತ್ತು ಸುಸ್ಥಿರ ಕಛೇರಿ ಸ್ಥಾಪಿಸಬೇಕು. ಮಂಡಳಿಯಲ್ಲಿ ಹಾಲಿ ಇರುವ 12 ಸೌಲಭ್ಯಗಳನ್ನು ತ್ವರಿತವಾಗಿ ಕಾರ್ಮಿಕರಿಗೆ ಸಿಗುವಂತೆ ಮಾಡಲು ಕಲ್ಯಾಣ ಮಂಡಳಿ ಮೊದಲ ಆದ್ಯತೆ ನೀಡಬೇಕು. ಯಾವುದೇ ಕಾರಣಕ್ಕೂ ಕಲ್ಯಾಣ ಮಂಡಳಿಯ ಸೆಸ್ ನಿಧಿಯ ಹಣವನ್ನು ಅನಗತ್ಯವಾದ ಬೇರೆ ಖರ್ಚುಗಳಿಗೆ ವರ್ಗಾಯಿಸಬಾರದೆಂದು, ಒಂದು ವೇಳೆ ಸರ್ಕಾರ ತನ್ನ ಬಜೆಟ್‌ನಲ್ಲಿ ಕಲ್ಯಾಣ ಮಂಟಪ, ಕೌಶಲ್ಯ ತರಬೇತಿ ಕೇಂದ್ರಗಳು ಸೇರಿದಂತೆ ಇತ–ರೇ ನಿರ್ಮಾಣಗಳಿಗೆ ಬಜೆಟ್‌ನಲ್ಲಿ ಹಣ ನೀಡಿ ಕಾರ್ಮಿಕರಿಗೆ ಜಾರಿಗೊಳಿಸಿದರೆ ನಮ್ಮ ಸಂಘದ ಅಭ್ಯಂತರವೇನು ಇಲ್ಲವೆಂದು ಸ್ಪಷ್ಟಪಡಿಸಿದರು. ಸಭೆಯಲ್ಲಿ ಬಿಎಂಎಸ್ ಪರವಾಗಿ ರಾಮಕೃಷ್ಣ ಪೂಂಜಾ, ಎಐಟಿಯುಸಿ ಪರವಾಗಿ ಹ... ಕೆ. ರಾಮಚಂದ್ರಪ್ಪ, ಹೆಚ್ಎಂಎಸ್ ಪರವ... ಶ್ರೀಕಂಠಮೂರ್ತಿ, ಟಿಯುಸಿಸಿ ಪರವ... ಶಿವಶಂಕರ್ ಹಾಗೂ ಎಐಯುಟಿಯುಸಿ ಪ್ರ... ಮಾತನಾಡಿದರು.

ಸರ್ಕಾರದ ಪರವಾಗಿ ಸಚಿವರು ಅ ಧ... ವಹಿಸಿ ಮಾತನಾಡಿ ನವೀಕರಿಸದೆ ವಂಚ... ಒಳಗಾಗಿರುವ ಕಾರ್ಮಿಕರಿಗೆ ಆಂದೋಲ... ಮಾದರಿಯಲ್ಲಿ ಮತ್ತೊಂದು ಅವಕ... ನೀಡುವುದು ಸೇರಿದಂತೆ ಕಾರ್ಮಿಕ ಸಂಘಟನೆ... ಕೊಟ್ಟ ಇತರ ಸಲಹೆಗಳನ್ನು ಸ್ವೀಕರಿಸಿ ಕಲ... ಮಂಡಳಿಯ ಸಭೆಯಲ್ಲಿ ಜಾರಿಗೊಳಿಸ... ಮುಂದಾಗುತ್ತವೆ ಎಂದು ಭರವಸೆ ನೀ... ನಂತರ ಸಭೆಯು ಮುಕ್ತಾಯವಾಯಿತು. ■

ಡಿಸೆಂಬರ್ 10 ಮುಖ್ಯಮಂ... ಮನೆ ಚಲೋ

ಕಾರ್ಮಿಕ ಸಚಿವರು ಬೆಳಿಗ್ಗೆ ಸಭೆ ನ... ನಂತರ ಅದೇ ದಿನ ಮಧ್ಯಾಹ್ನ ಕಲ್ಯಾಣ ಮ... ಸಭೆಯನ್ನು ನಡೆಸಿದ್ದಾರೆ. ಅದರಲ್ಲಿ ಕಾ... ಸಂಘಟನೆಗಳು ಎತ್ತಿದ ಪ್ರಶ್ನೆಗಳ ಬಗ್ಗೆ ಚ... ಇತ್ಯರ್ಥಕ್ಕೆ ನಿರ್ಧಾರ ಮಾಡಲಾಗಿದೆ. ... ಕಲ್ಯಾಣ ಮಂಟಪ ಮೊದಲಾದ ಕಾರ್ಯಗಳಿ... 700 ಕೋಟಿ ಹಣವನ್ನು ವರ್ಗಾಯಿಸುವ ನಿಧ... ಕೈಗೊಂಡಿರುವುದಾಗಿ ತಿಳಿದು ಬಂದಿತು. ... ಹಿನ್ನಲೆಯಲ್ಲಿ ನಂತರ ಕಾರ್ಮಿಕ ಸಂಘಟ... ಮುಖಂಡರು ಸಭೆ ಸೇರಿ ಕಲ್ಯಾಣ ಮಂಡ... ನಿಧಿಯನ್ನು ಬೇರೆ ನಿರ್ಮಾಣ ಕಾರ್ಯ... ಉಪಯೋಗಿಸಲು ನಿರ್ಧರಿಸಿರುವ ಕ್ರಮ... ಖಂಡಿಸಲಾಯಿತು. ಹಾಗೂ ಡಿಸೆಂಬರ್ ... 2013 ರಂದು 'ಮುಖ್ಯಮಂತ್ರಿಗಳ ಮನೆ ಚಲ... ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿ... ಕಾನೂನು ಹೋರಾಟ ಹಾಗೂ ಬಲಿಷ್ಠ ... ಚಳುವಳಿಗಳ ಮೂಲಕ ಸರ್ಕಾರದ ನೀತಿಯ... ಬದಲಾಯಿಸುವವರೆಗೂ ಹೋರಾಟ... ಮುಂದುವರೆಸಬೇಕೆಂದು ನಿರ್ಧರಿಸಲಾಯಿತು...

ಆಟೋರಿಕ್ಷಾ ಮೀಟರ್ ದರ ಏರಿಕೆಗೆ ಒತ್ತಾಯಿಸಿ ಪ್ರತಿಭಟನೆ– ಜಿಲ್ಲಾಧಿಕಾರಿಗಳಿಗೆ ಮನವಿ.



ಪೆಟ್ರೋಲ್ – ಡೀಸೆಲ್ – ಗ್ಯಾಸ್ ದರಗಳ ನಿರಂತರ ಏರಿಕೆಯಿಂದ ತೀವ್ರವಾಗಿ ಸಂಕಷ್ಟಕ್ಕೆ ಸಿಲುಕಿರು... ಆಟೋ ಚಾಲಕರ ಸಮಸ್ಯೆ ನಿವಾರಣೆಗಾಗಿ ಮೀಟರ್‌ದರ ಏರಿಕೆಗೆ ಒತ್ತಾಯಿಸಿ ಆಟೋ ಚಾಲ... ಸಂಘ 'ಎಆರ್‌ಡಿಯು' ನಡೆಸಿದ ಪ್ರತಿಭಟನೆ. ಬೆಂಗಳೂರಿನ ಪುರಭವನದ ಎದುರು ನವೆಂ... 27, 2013 ರಂದು ನಡೆದ ಈ ಪ್ರತಿಭಟನೆಯ ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾ... ಪ್ರಯಾಣಿಕರು ಹಾಗೂ ಆಟೋ ಚಾಲಕರು – ಮಾಲೀಕರು ಈ ಎಲ್ಲರ ಹಿತವನ್ನು ಮತ್ತು ಸಮಸ್ಯೆಗಳನ... ಗಮನದಲ್ಲಿರಿಸಿಕೊಂಡು ವೈಜ್ಞಾನಿಕವಾದ ಲೆಕ್ಕಾಚಾರಗಳ ಆಧಾರದಲ್ಲಿ ಸಂಘ ಸಮಸ್ಯೆಯ ಪರಿಹಾ... ಸಂಘ ಶ್ರಮಿಸುತ್ತಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಆಹಾರ ಭದ್ರತಾ ಕಾನೂನಿಗೆ ಡಬ್ಲ್ಯುಟಿಓ ಆಕ್ಷೇಪ: ನವ-ಉದಾರವಾದಿ ಧೋರಣೆಗಳ ದುಷ್ಫಲ


ಮುಗಿದು ಗೊತ್ತೇ? ಅಮೆರಿಕಾ ತನ್ನ ಕೃಷಿ ಯಕ್ಕೆ ಸಬ್ಸಿಡಿಗಳ ರೂಪದಲ್ಲಿ ಮಾಡುವ ನ ಪ್ರಮಾಣ ಕೃಷಿ ವಲಯದಿಂದ ವ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ) ಸುಮಾರು 50ಶೇ.ದಷ್ಟು. ಯುರೋಪಿನ ಗಳದ್ದೂ ಸರಿಸುಮಾರು ಇದೇ ಪ್ರಮಾಣ. ಭಾರತದಲ್ಲಿ ಇದು 10ಶೇ.ದಾಟಿಲ್ಲ. ರ ಭದ್ರತಾ ಕಾನೂನಿನ ಜಾರಿಯೊಂದಿಗೆ ಇನ್ನು ಮುಂದೆ 10ಶೇ. ದಾಟುವ ಸಾಧ್ಯತೆ ಆದರೂ 50ಶೇ.ವನ್ನಂತೂ ತಲುಪದು. ರೂ ಅಮೆರಿಕಾ ಮತ್ತು ಯುರೋಪ್ ಈ ಣಕ್ಕೆ ನಮ್ಮ ಆಹಾರ ಭದ್ರತಾ ಕಾನೂನಿಗೆ ್ಯಟಿಓ ಮೂಲಕ ಆಕ್ಷೇಪ ವ್ಯಕ್ತಪಡಿಸಿವೆ. ಈ ಈಗಾಗಲೇ ಈ ಅಂಕಣದಲ್ಲಿ (ನವಂಬರ್ ಸಂಚಿಕೆ44) ಚರ್ಚಿಸಲಾಗಿದೆ. ಡಬ್ಲ್ಯುಟಿಓದ ಯಲ್ಲಿನ 'ಕೃಷಿ ಒಪ್ಪಂದ'ದ ಅಡಿಯಲ್ಲಿ ರುಕಟ್ಟೆಯನ್ನು 'ವಿರೂಪಗೊಳಿಸುವಂತದ್ದು' ತ್ತು 'ವಿರೂಪಗೊಳಿಸದಂತದ್ದು' ಎಂದು ಡು ವಿಧಗಳನ್ನು ಮಾಡಿರುವ ಬಗ್ಗೆಯೂ, ಪಗೊಳಿಸದ ಸಬ್ಸಿಡಿಗಳಿಗೆ 'ಹಸಿರು ಪೆಟ್ಟಿಗೆ' ಬ ಕ್ರಮದ ಮೂಲಕ ವಿನಾಯ್ತಿ ನೀಡಲಾಗಿದೆ ುದನ್ನೂ ಈಗಾಗಲೇ ನೋಡಿದ್ದೇವೆ.

ಈ ರೀತಿ ವ್ಯತ್ಯಾಸ ಮಾಡುವುದಕ್ಕೆ ವುದೇ ಸೈದ್ಧಾಂತಿಕ ಆಧಾರ ಇಲ್ಲ, ಇದೆ- ಂದು ಇಟ್ಟುಕೊಂಡರೂ ಕೃಷಿಯಂತಹ ಯದಲ್ಲಿ ಹಲವು ಕಾರಣಗಳಿಂದಾಗಿ ಬೆಲೆಗಳಲ್ಲಿ ವಿಪರೀತ ಏರುಪೇರುಗಳು ಆಗುವುದರಿಂದ ಇಂತಹ ಆಕ್ಷೇಪಕ್ಕೆ ಅರ್ಥವಿಲ್ಲ ಎನ್ನುತ್ತಾರೆ ಪ್ರಸಿದ್ಧ ಆರ್ಥಿಕ ತಜ್ಞ ಪ್ರೊ.ಪ್ರಭಾತ್ ಪಟ್ನಾಯಕ್.

ವಾಸ್ತವವಾಗಿ ಇದು ಮುಂದುವರೆದ ಬಂಡವಾಳಶಾಹಿ ದೇಶಗಳು ತಮ್ಮ ಹಿತಸಾಧನೆಗೆಂದೇ ಡಬ್ಲ್ಯುಟಿಓ ಮೇಲೆ ಹೇರಿದ 'ಸಿದ್ಧಾಂತ'. ಅಮೆರಿಕಾ ಮತ್ತು ಯುರೋಪಿನ ದೇಶಗಳು ತಮ್ಮ ಹಿಡಿಯಷ್ಟು ಶ್ರೀಮಂತ ಕೃಷಿಕರಿಗೆ ಸಬ್ಸಿಡಿಗಳನ್ನು ನೇರ ನಗದು ವರ್ಗಾವಣೆ ಮೂಲಕ ಮಾಡುತ್ತವೆ. ಇದು ಮಾರುಕಟ್ಟೆಯನ್ನು 'ವಿರೂಪ'ಗೊಳಿಸುವುದಿಲ್ಲ ಎಂಬುದು ಡಬ್ಲ್ಯುಟಿಓ ತರ್ಕ. ಭಾರತದಲ್ಲಿ ಕೃಷಿ ಲಾಗುವಾಡುಗಳ ಖರ್ಚುಗಳ ಮೇಲೆ ಸಬ್ಸಿಡಿಗಳ ಮೂಲಕ ಹತೋಟಿ ಹಾಕವುದರಿಂದ ಇದು ಮಾರುಕಟ್ಟೆಯನ್ನು 'ವಿರೂಪ'ಗೊಳಿಸುತ್ತದಂತೆ. ಆದರೆ ಅಮೆರಿಕಾದ 4ಲಕ್ಷ ಶ್ರೀಮಂತ ಕೃಷಿ ಕುಟುಂಬಗಳಿಗೆ ನಗದು ವರ್ಗಾವಣೆ ಮಾಡಿದಂತೆ ಭಾರತದ 12 ಕೋಟಿ, ಬಹುಪಾಲು ಬಡ ಕೃಷಿ ಕುಟುಂಬಗಳಿಗೆ ಆ ರೀತಿಯ ನಗದು ವರ್ಗಾವಣೆಯ ಮೂಲಕ ಸಬ್ಸಿಡಿ ಕಾರ್ಯಸಾಧ್ಯವಲ್ಲ. ಆದರೆ ಅಮೆರಿಕಾದಂತಹ ಮುಂದುವರೆದ ನಮ್ಮ ನವ-ಉದಾರವಾದಿಗಳು ನಿಕಟ 'ಮಿತ್ರ'ರೆಂದು ಪರಿಗಣಿಸುವ ದೇಶಗಳ ಆಳರಸರು ಇದನ್ನು ಗುರುತಿಸಲು ಸಿದ್ಧರಿಲ್ಲ.

ಇಲ್ಲಿ ಏಳುವ ಪ್ರಶ್ನೆ ಇಂತಹ ಶರತ್ತನ್ನು ನಮ್ಮ ಸರಕಾರ ಏಕೆ ಒಪ್ಪಿಕೊಂಡಿತು? ಈಗ ಪ್ರಧಾನ ಮಂತ್ರಿಗಳಾಗಿರುವವರು ಹಣಕಾಸು ಮಂತ್ರಿಗಳಾಗಿದ್ದಾಗ, ಅಂದರೆ ನವ-ಉದಾರವಾದಿ ಹಾದಿಯನ್ನು ತುಳಿಯಲಾರಂಭಿಸಿದ್ದ ಸಂದರ್ಭದಲ್ಲಿ ಈ ಶರತ್ತಿಗೆ ನಮ್ಮ ಆಳರಸರು ಸಹಿ ಹಾಕಿದ್ದು ಚುನಾಯಿತ ಸಂಸತ್ತಿನ ಬೆನ್ನ ಹಿಂದೆ. ಈ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯೇ ನಡೆಯಲಿಲ್ಲ. ಅದಕ್ಕೆ ಈಗ ದೇಶ ಬೆಲೆ ತೆರಬೇಕಾಗಿ ಬಂದಿದೆ.

ಈಗ ಇಂಡೋನೇಸ್ಯಾದ ಬಾಲಿಯಲ್ಲಿ ಡಬ್ಲ್ಯುಟಿಓ ಮಂತ್ರಿಮಟ್ಟದ ಸಭೆಯಲ್ಲಿ ಭಾಗವಹಿಸುತ್ತಿರುವ ಯುಪಿಎ-2 ವಾಣಿಜ್ಯ ಮಂತ್ರಿಗಳೇನೋ ಭಾರತ ಈ ಬಗ್ಗೆ ಯಾವ ರಾಜಿಗೂ ಸಿದ್ಧವಿಲ್ಲ ಎಂದಿದ್ದಾರೆ. ಆದರೆ ಅಮೆರಿಕ ಹಾಗೂ ಮುಂದುವರೆದ ಯುರೋಪಿಯನ್ ದೇಶಗಳ ಒತ್ತಡಗಳು ಮುಂದುವರೆಯುತ್ತಲೇ ಇವೆ. 2014 ರ ಚುನಾವಣೆಗಳ ಮೇಲೆ ಕಣ್ಣಿಟ್ಟು ಈ ಕಾನೂನು ತಂದ ಯುಪಿಎ-2 ಸರಕಾರದ ಗುರಿ ಸದ್ಯಕ್ಕೆ ಇದಕ್ಕಿರುವ ಅಡ್ಡಿ-ಆತಂಕಗಳನ್ನು



ಎನ್.ಕೆ. ವೇದರಾಜ

2014ರ ಚುನಾವಣೆಗಳು ಮುಗಿಯುವವರೆಗೆ ತಾತ್ಕಾಲಿಕವಾಗಿ ನಿವಾರಿಸಿಕೊಳ್ಳಲು 'ಶಾಂತಿ ಪರಿಚ್ಛೇದ'ಕ್ಕೆ ಸಹಿ ಹಾಕುವ ಸಾಧ್ಯತೆಯನ್ನು ಇನ್ನೂ ತಳ್ಳಿ ಹಾಕುವಂತಿಲ್ಲ.

ಆದರೆ ಸಂಸತ್ತು ಇದಕ್ಕೆ ಅವಕಾಶ ಕೊಡಬಾರದು, ಡಬ್ಲ್ಯುಟಿಓ 10ಶೇ. ಮಿತಿ ಇರಲೇಬೇಕು ಎಂದು ಒತ್ತಾಯಿಸಿದರೆ ಭಾರತ ಡಬ್ಲ್ಯುಟಿಓ ದಿಂದಲೇ ಹೊರಬರುವಂತೆ ಮಾಡಲು ಮಧ್ಯಪ್ರವೇಶಿಸಬೇಕು ಎಂದು ಪ್ರೊ.ಪಟ್ನಾಯಕ್ ಹೇಳುತ್ತಾರೆ. ಇದು ನಮ್ಮ ದೇಶದ ಕೋಟ್ಯಂತರ ಹಸಿದ ಮತ್ತು ಪೋಷಣಾಂಶಹೀನ ಜನಸಾಮಾನ್ಯರ ಬದುಕಿನ ಆರ್ಥಿಕ ಕಲ್ಯಾಣಕ್ಕಷ್ಟೇ ಅಲ್ಲ, ನಮ್ಮ ಸಂಸತ್ತಿನ ಪಾರಮ್ಯದ ಮತ್ತು ನಮ್ಮ ಪ್ರಜಾಪ್ರಭುತ್ವದ ರಕ್ಷಣೆಗೂ ಅಗತ್ಯ ಎನ್ನುತ್ತಾರೆ ಅವರು.

ಅದರೆ ಯುಪಿಎ-2 ಸರಕಾರ ಇಂತಹ ದಿಟ್ಟ ಕ್ರಮ ಕೈಗೊಳ್ಳಬಲ್ಲುದೇ?

ಹಣದುಬ್ಬರ 11 ಶೇ. ದಾಟಿದರೇನಂತೆ, ಯುಪಿಎಗೆ ಶೇರು ಮಾರಾಟದ್ದೇ ಗೀಳು


ಳಕೆದಾರರ ಬೆಲೆ ಸೂಚ್ಯಂಕ ಅಕ್ಟೋಬರ್‌ನಲ್ಲಿ ಕ್ಕೆ ಏರಿದೆ (2001ರ ಬೆಲೆಗಳ ಆಧಾರದಲ್ಲಿ). ಂಬರ್‌ನಲ್ಲಿ ಇದು 238 ಇತ್ತು, ಆಗಸ್ಟ್‌ನಲ್ಲಿ ಇತ್ತು. ಕಳೆದ ಅಕ್ಟೋಬರಿನಲ್ಲಿ ಇದು 217 . ಈ ಮೂಲಕ ಹಣದುಬ್ಬರ ದರ 11.06ಶೇ.ಕ್ಕೆ ದೆ. ಹಿಂದಿನ ತಿಂಗಳು ಇದು 10.7ಶೇ. ಇತ್ತು. ದ ವರ್ಷ ಈ ತಿಂಗಳಲ್ಲಿ 9.6ಶೇ.ಇತ್ತು.

ಹಣದುಬ್ಬರ ಏರಿಕೆಯಲ್ಲಿ ಸಿಂಹಪಾಲು ಾರ ಸಾಮಗ್ರಿಗಳ ಬೆಲೆಗಳಲ್ಲಿ ಏರಿಕೆ- ದ್ದೇ ಎಂಬದು ಗಮನಿಸಬೇಕಾದ ಸಂಗತಿ. ದ ವರ್ಷ ಆಹಾರವಸ್ತುಗಳ ಬೆಲೆಗಳಲ್ಲಿ 1 ಶೇ.ಏರಿಕೆ ದಾಖಲಾಗಿದ್ದರೆ, ಈ ವರ್ಷ ೀಗ ಅಕ್ಟೋಬರಿನಲ್ಲಿ 15.02ಶೇ. ತಲುಪಿದೆ. ರಕ್ಕೆ ಮತ್ತೊಂದು ಪ್ರಮುಖ 'ಕೊಡುಗೆ' ದರಗಳ ಏರಿಕೆಯಿಂದ ಬಂದಿದೆ.

ಬೆಲೆ ಸೂಚ್ಯಂಕದಲ್ಲಿ ಸರಾಸರಿ ಮೂರು ಯಿಂಟುಗಳ ಏರಿಕೆಗೆ ಹೋಲಿಸಿದರೆ ಅತಿ ಹೆಚ್ಚು ಕೆ(ಏಳು ಪಾಯಿಂಟುಗಳು ಮತ್ತು ಅದಕ್ಕಿಂತ ಚ್ಚು) ಕಂಡಿರುವ ಆರು ಸ್ಥಳಗಳಲ್ಲಿ ನಾಲ್ಕು ಬಿಜೆಪಿ ಪ್ರಧಾನಿ ಪಟ್ಟಾಕಾಂಕ್ಷಿಯ ಗುಜರಾತಿನಲ್ಲಿವೆ (ಭಾವನಗರ-9ಪಾಯಿಂಟ್, ಅಹಮದಾಬಾದ್-8, ವಡೋದರಾ ಮತ್ತು ಸೂರತ್ -7) ಎಂಬುದು ಮಾತ್ರ ಯುಪಿಎ-2 ಸರಕಾರಕ್ಕೆ ತುಸು ಸಮಾಧಾನ ತರಬಹುದೇನೋ.

ಆದರೆ ಯುಪಿಎ-2 ಸರಕಾರ ಈ ಬಗ್ಗೆ ತಲೆಕೆಡಿಸಿಕೊಂಡಂತೆಯೇ ಇಲ್ಲ. ಅದರ ಪ್ರಧಾನ ಮಂತ್ರಿಗಳಿಗೆ ಸಾರ್ವಜನಿಕ ವಲಯದ ಶೇರುಗಳ ಮಾರಾಟದಿಂದ ಈ ಹಣಕಾಸು ವರ್ಷದಲ್ಲಿ ಆರು ಸಾರ್ವಜನಿಕ ವಲಯದ ಘಟಕಗಳ ಶೇರು ವಿಕ್ರಯದಿಂದ ಕೇವಲ 1325 ಕೋಟಿ ರೂ.ಗಳು ಮಾತ್ರ ಸರಕಾರದ ಬೊಕ್ಕಸಕ್ಕೆ ಬಂದಿದೆ ಎಂಬುದರ ಬಗ್ಗೆಯೇ ಆತಂಕ ಎಂದು ಮಾಧ್ಯಮಗಳ ವರದಿಗಳಿಂದ ಕಾಣ ಬರುತ್ತಿದೆ. 2013-14ರ ಬಜೆಟಿನಲ್ಲಿ ಈ ಬಾಬ್ತಿನಲ್ಲಿ 40,000 ಕೋಟಿ ರೂ.ಗಳ ಆದಾಯ ಗಳಿಸುವ ಯೋಜನೆಯಿತ್ತು. ಆದರೆ ಈ ಹಣಕಾಸು ವರ್ಷ ಕೊನೆಗೊಳ್ಳುತ್ತ ಬಂದಿದ್ದರೂ ಇಷ್ಟೇ ಆಗಿರುವುದರ ಬಗ್ಗೆ ಆತಂಕ ಸಹಜ ತಾನೇ! ವಿವಿಧ ಮಂತ್ರಾಲಯಗಳಿಗೆ ಈ ಬಗ್ಗೆ ಹೆಚ್ಚಿನ ಗಮನ ನೀಡುವಂತೆ ಹೇಳಲಾಗಿದೆಯಂತೆ. ಬಿಹೆಚ್‌ಇಎಲ್ ಮತ್ತು ಕೋಲ್ ಇಂಡಿಯಾದಲ್ಲಿ ಶೇರುವಿಕ್ರಯದ ಬಗ್ಗೆ ಸಂಬಂಧಪಟ್ಟ ಮಂತ್ರಾಲಯಗಳಲ್ಲೇ ಭಿನ್ನಾಭಿಪ್ರಾಯಗಳು ಇರುವುದರಿಂದಾಗಿ ಹಣಕಾಸು ಮಂತ್ರಿಗಳು ಕಲ್ಲಿದ್ದಲು ಮಂತ್ರಿ ಮತ್ತು ಭಾರೀ ಕೈಗಾರಿಕೆಗಳ ಮಂತ್ರಿಗಳೊಂದಿಗೆ ಪ್ರಧಾನಿಗಳನ್ನು ಭೇಟಿಯಾಗಿದ್ದಾರೆ ಎಂದು ವರದಿಯಾಗಿದೆ.

ಈ ನಡುವೆ ಎಡಪಕ್ಷಗಳು ಮಾತ್ರ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಬೆಲೆಯೇರಿಕೆಯ ಪ್ರಶ್ನೆಯನ್ನು ಪ್ರಧಾನವಾಗಿ ಎತ್ತಿಕೊಳ್ಳಲು ನಿರ್ಧರಿಸಿವೆ. ಜತೆಗೆ ನಿರುದ್ಯೋಗ ಮತ್ತು ಭ್ರಷ್ಟಾಚಾರದ ಪ್ರಶ್ನೆಗಳನ್ನೂ ಮುಖ್ಯವಾಗಿ ಎತ್ತಿಕೊಳ್ಳಲಿವೆ. ಇಂಡೋನೇಸ್ಯಾದ ಬಾಲಿಯಲ್ಲಿ ನಡೆಯುವ ಡಬ್ಲ್ಯುಟಿಓ ಸಭೆಯಲ್ಲಿ ನಮ್ಮ ಆಹಾರ ಭದ್ರತಾ ಕಾನೂನನ್ನು ವಿರೋಧಿಸುತ್ತಿರುವ ಅಮೆರಿಕಾ ಮತ್ತಿತರ ಮುಂದುವರೆದ ದೇಶಗಳೊಡನೆ ಯಾವ ರೀತಿಯಲ್ಲೂ ರಾಜಿ ಮಾಡಿಕೊಳ್ಳಬಾರದು ಎಂದೂ ಎಡಪಕ್ಷಗಳು ಸಂಸತ್ತಿನ ವೇದಿಕೆಯಲ್ಲಿ ಒತ್ತಾಯ ಮಾಡಲಿವೆ.



ಳಿಗಾಲದ ಅಧಿವೇಶನದಲ್ಲಿ ಯುಪಿಎ ಅಧ್ಯಕ್ಷೆ-ಮಹಿಳಾ ಮೀಸಲಾತಿ ಮಸೂದೆ, ಕೋಮು ಹಿಂಸಾಚಾರ ಮಸೂದೆ ಇತ್ಯಾದಿಗಳು ಬಹಳ ದಿನಗಳಿಂದಲೂ ಬಾಕಿ ಉಳಿದಿದ್ದರೂ ಪ್ರಧಾನಿಗಳಿಗೆ ಬೇಕಾಗಿರುವುದು ಬೇರೆಯೇ- ದಿ ಹಿಂದೂನಲ್ಲಿ ಸುರೇಂದ್ರನ್ ವ್ಯಂಗ್ಯ.

ಸಿಐಎ ಸಂಪರ್ಕವಿರುವ ಕಂಪನಿಯೊಂದಿಗೆ ಆಧಾರ್ ನಂಟು !

ಅಮೆರಿಕಾದ ರಾಷ್ಟ್ರೀಯ ಭದ್ರತಾ ಏಜೆಂಸಿ ಅಂತರ್ಜಾಲ ಸಂಪರ್ಕಗಳನ್ನು ಭಾರತವೂ ಸೇರಿದಂತೆ ಹಲವು ದೇಶಗಳ ಆಡಳಿತಗಾರರ ಮೇಲೆ, ಸರಕಾರದ ಕಚೇರಿಗಳಲ್ಲಿ ಬೇಹುಗಾರಿಕೆ ನಡೆಸಲು ಬಳಸುತ್ತಿದೆ ಎಂದು ಸ್ನೋಡನ್ ಬಯಲು ಮಾಡಿದ ದಾಖಲೆಗಳಿಂದ ಗೊತ್ತಾದಾಗ ಬ್ರೆಝಿಲ್ ಮಾತ್ರವಲ್ಲ, ಅಮೆರಿಕಾದ ಯುರೋಪಿಯನ್ ಮಿತ್ರರೂ ಪ್ರತಿಭಟನೆ ವ್ಯಕ್ತಪಡಿಸಿದ್ದರು. ಆದರೆ ಭಾರತದ ಆಳರಸರು ಅದೇನೂ ದೊಡ್ಡ ವಿಷಯವಲ್ಲ ಎಂಬಂತೆ ಬದಿಗೆ ತಳ್ಳಲು ಪ್ರಯತ್ನಿಸಿದರು. ಆದರೆ ಈಗ ಭಾರತದ ವಿದೇಶಾಂಗ ಇಲಾಖೆ ಈ ವಿಷಯವನ್ನು ಅಮೆರಿಕನ್ ರಾಯಭಾರಿ ಕಚೇರಿಯೊಂದಿಗೆ ಮತ್ತೊಮ್ಮೆ ಎತ್ತಿದೆ ಎಂಬ ಸುದ್ದಿ ಡಿಸೆಂಬರ್ 4ರಂದು ಪ್ರಕಟವಾಗಿತ್ತು.

ಆದರೆ ಮರುದಿನವೇ ಮತ್ತೊಂದು ಸುದ್ದಿ ಪ್ರಕಟವಾಗಿದೆ. ಆಧಾರ್ ಕಾರ್ಡ್ ಕೊಡಲೆಂದು ರಚಿಸಿದ 'ಭಾರತದ ವಿಶಿಷ್ಟ ಗುರುತು ಪ್ರಾಧಿಕಾರ' (ಯುಐಡಿಎಐ)ಕ್ಕೆ ಅಮೆರಿಕಾದ ಬೇಹುಗಾರಿಕೆ ಸಂಸ್ಥೆ ಸಿಐಎಯೊಂದಿಗೆ ಸಂಪರ್ಕವಿರುವ ಮೊಂಗೊಡಿಬಿ ಎಂಬ ಒಂದು ಅಮೆರಿಕನ್ ಕಂಪನಿ ಆಧಾರ್ ನೋಂದಣಿಗೆ ಮಾಹಿತಿನೆಲೆಯನ್ನು ನಿರ್ವಹಿಸುವ ತಂತ್ರಾಂಶವನ್ನು ಒದಗಿಸುತ್ತಿದೆಯಂತೆ.

ಈ ಹಿಂದೆಯೂ ಯುಐಡಿಎಐ ಅಮೆರಿಕಾದಲ್ಲಿನ ಎಲ್-1 ಐಡೆಂಟಿಟಿ ಸಲ್ಯೂಷನ್ಸ್ ಮತ್ತು ಇನ್ನೊಂದು ಫ್ರೆಂಚ್ ಕಂಪನಿಯೊಂದಿಗೆ ಆಧಾರ್ ಯೋಜನೆಗಾಗಿ ಒಪ್ಪಂದ ಮಾಡಿಕೊಂಡಿತ್ತು. ಈ ಕಂಪನಿಗಳ ಮೂಲಕ ಎಲ್ಲ ಭಾರತೀಯ ನಾಗರಿಕರ ವೈಯಕ್ತಿಕ ಮತ್ತು ಜೀವಮಾಪಕ ಮಾಹಿತಿಗಳು ಅಮೆರಿಕನ್ ಏಜೆಂಸಿಗಳಿಗೆ ಲಭ್ಯವಾಗಿವೆ ಎಂದು ವರದಿಯಾಗಿತ್ತು. ಅಮೆರಿಕನ್ ಇಂಟರ್ನೆಟ್ ಮತ್ತು ದೂರಸಂಪರ್ಕ ಕಂಪನಿಗಳ ಮೂಲಕ ಅಮೆರಿಕನ್ ಆಳರಸರು ಈ ಎಲ್ಲ ಮಾಹಿತಿಗಳನ್ನು ಪಡೆ-ಯುತ್ತಿದ್ದಾರೆ ಎಂಬುದು ಸ್ನೋಡನ್ ಕಡತಗಳಿಂದ ಈಗಾಗಲೇ ಬೆಳಕಿಗೆ ಬಂದಿದೆ. ಈ ಮೂಲಕ ಭಾರತೀಯ ನಾಗರಿಕರಿಂದ ಸಂಗ್ರಹಿಸಿದ ಮಹತ್ವದ ಮಾಹಿತಿಗಳು ಅಮೆರಿಕಾಕ್ಕೆ ಲಭ್ಯವಾಗುವಂತೆ ಭಾರತ ಸರಕಾರ ಮತ್ತು ಆಧಾರ್ ಪ್ರಾಧಿಕಾರ ಮಾಡಿದಂತಾಗಿದೆ ಎಂದು ಸಿಪಿಐ(ಎಂ) ಪಾಲಿಟ್‌ಬ್ಯುರೊ ಖಂಡಿಸಿದೆ.


ಆಧಾರ್ ಯೋಜನೆಯಲ್ಲಿ ಮಾಹಿತಿ ಸಂಗ್ರಹಕ್ಕೆ ಕಾನೂನಿನ ಆಧಾರ ಏನೂ ಇಲ್ಲ, ಸದ್ಯ-ಕ್ಕೆ ಅದನ್ನು ಸಾಮಾಜಿಕ ಸೇವೆಗಳು ಹಾಗೂ ಸಬ್ಸಿಡಿಗಳನ್ನು ಕೊಡಲು ಕಡ್ಡಾಯಗೊಳಿಸಬಾರದು ಎಂದು ಸರ್ವೋಚ್ಚ ನ್ಯಾಯಾಲಯವೇ ಹೇಳಿದೆ. ಹೀಗಿರುವಾಗ ವಿದೇಶಿ ಕಂಪನಿಗಳೊಂದಿಗೆ ಇಂತಹ ಕರಾರುಗಳನ್ನು ರದ್ದು ಮಾಡಬೇಕು ಹಾಗೂ ಸಂಸತ್ತು ಈಬಗ್ಗೆ ಚರ್ಚಿಸಿ ನಿರ್ಧರಿಸುವ ವರೆಗೆ, ಅಗತ್ಯವಿದ್ದರೆ ಒಂದು ಶಾಸನವನ್ನು ಅಂಗೀಕರಿಸುವ ವರೆಗೆ ಆಧಾರ್ ಯೋಜನೆಯನ್ನು ನಿಲ್ಲಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಜಗದಗಲ

ಶರತ್‌ಚಂದ್ರ

ನೇಪಾಳ ಚುನಾವಣೆ: ಮಾವೊವಾದಿಗಳು ಮೂರನೇ ಸ್ಥಾನಕ್ಕೆ

ನೇಪಾಳದಲ್ಲಿ ಸಂವೈಧಾನಿಕ ಸಭೆಗೆ ನವಂಬರ್ 19, 2013 ರಂದು ಚುನಾವಣೆಗಳು ನಡೆದಿದ್ದು ಇದೀಗ ಆಖೈರು ಫಲಿತಾಂಶಗಳು ಪ್ರಕಟವಾಗಿವೆ. ನೇರ ಕ್ಷೇತ್ರವಾರು ಮತ್ತು ಪ್ರಮಾಣಾತ್ಮಕ ಚುನಾವಣೆಗಳಲ್ಲಿ ಎರಡರಲ್ಲೂ ನೇಪಾಳ ಕಾಂಗ್ರೆಸ್ ಮೊದಲನೇ ಸ್ಥಾನದಲ್ಲಿದ್ದು, ಎರಡನೇ ಸ್ಥಾನವನ್ನು ನೇಪಾಳಿ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಎನ್.–ಯೂ.ಎಂ.ಎಲ್) ಗಳಿಸಿದ್ದಾರೆ. ಮಾವೋವಾದಿಗಳು


ನರಹ... ಚಾರ್ಯ, ಕಾಂಗ್ರೆಸ್ ಮುಖಂಡ

(ಯು.ಸಿ.ಪಿ.ಎನ್.–ಮಾವೋಯಿಸ್ಟ್) ಮೂರನೇ ಸ್ಥಾನಕ್ಕೆ ಹೋಗಿದ್ದಾರೆ. ನೇರ ಕ್ಷೇತ್ರವಾರು ಚುನಾಯಿತ 240, ಪ್ರಮಾಣಾತ್ಮಕ ಆಧಾರದಲ್ಲಿ ಚುನಾಯಿತ 335 ಮತ್ತು ಸರ್ಕಾರ ನೇಮಿಸುವ 26 ಸದಸ್ಯರನ್ನು ಸೇರಿದಂತೆ, 601 ಸದಸ್ಯರಿರುವ ಸಂವೈಧಾನಿಕ ಸಭೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬಂದಿಲ್ಲ.

ನೇರ ಕ್ಷೇತ್ರವಾರು (ಒಟ್ಟು 240 ಸೀಟುಗಳು) ಮತ್ತು ಪ್ರಮಾಣಾತ್ಮಕ (ಒಟ್ಟು 335 ಸೀಟುಗಳು) ಚುನಾವಣೆಗಳಲ್ಲಿ ಅನುಕ್ರಮವಾಗಿ ಕಾಂಗ್ರೆಸ್ 105 ಮತ್ತು 91 ಸೀಟು ಗಳಿಸಿ, ಒಟ್ಟಾರೆಯಾಗಿ 196 ಸೀಟು ಗಳಿಸಿದೆ. ಕಮ್ಯುನಿಸ್ಟರು 91 ಮತ್ತು 84 ಸೀಟು ಗಳಿಸಿ, ಒಟ್ಟಾರೆಯಾಗಿ 175 ಸೀಟು ಗಳಿಸಿದ್ದಾರೆ. ಮಾವೋವಾದಿಗಳು 26 ಮತ್ತು 54 ಸೀಟು ಗಳಿಸಿ, ಒಟ್ಟಾರೆಯಾಗಿ 80 ಸೀಟು ಗಳಿಸಿದ್ದಾರೆ. ಉಳಿದ ಸ್ಥಾನಗಳು ಮುಖ್ಯವಾಗಿ ಅಲ್ಪಸಂಖ್ಯಾತ ಮಾದೇಸಿ ರಂಗದ ಮತ್ತು ಸ್ಥಳೀಯ ಪಕ್ಷಗಳಿಗೆ ಹೋಗಿದೆ. ಕಳೆದ ಚುನಾವಣೆಗೆ ಹೋಲಿಸಿದರೆ, ಫಲಿತಾಂಶಗಳು ತಿರುವು ಮುರುವು ಆಗಿವೆ. 2008 ಚುನಾವಣೆಯಲ್ಲಿ ಮಾವೋವಾದಿಗಳು (229 ಸೀಟುಗಳು) 1ನೇ ಸ್ಥಾನ, ಕಾಂಗ್ರೆಸ್ (115 ಸೀಟು) 2ನೇ ಸ್ಥಾನ, ಕಮ್ಯುನಿಸ್ಟರು (108 ಸೀಟು) 3 ನೇ ಸ್ಥಾನ ಗಳಿಸಿದ್ದರು.

ಕಾಂಗ್ರೆಸ್, ಕಮ್ಯುನಿಸ್ಟ್ ಮುನ್ನಡೆ

ಪ್ರಮಾಣಾತ್ಮಕ ಚುನಾವಣೆಗಳಲ್ಲಿ ಕಾಂಗ್ರೆಸ್ ಶೇ. 26 ಮತ ಗಳಿಸಿದರೆ, ಕಮ್ಯುನಿಸ್ಟರು ಶೇ. 24 ಮತ್ತು ಮಾವೋವಾದಿಗಳು ಶೇ.15 ಮತ ಗಳಿಸಿದ್ದಾರೆ. 2008ರ ಮತಗಳಿಕೆಗೆ (ಶೇ.30) ಹೋಲಿಸಿದರೆ ಮಾವೋವಾದಿಗಳು ತಮ್ಮ ಮತಗಳಿಕೆಯ ಅರ್ಧದಷ್ಟು ಕಳೆದುಕೊಂಡಿದ್ದಾರೆ. ಕಾಂಗ್ರೆಸ್ ಮತ್ತು ಕಮ್ಯುನಿಸ್ಟರು 2008ರ ಮತಗಳಿಕೆಗೆ (ಅನುಕ್ರಮವಾಗಿ ಶೇ.21 ಮತ್ತು ಶೇ.20) ಹೋಲಿಸಿದರೆ ತಮ್ಮ ಮತಗಳಿಕೆಯನ್ನು ಶೇ. 4–5 ರಷ್ಟು ಹೆಚ್ಚಿಸಿಕೊಂಡಿದ್ದಾರೆ. ರಾಜಸತ್ತೆ ಬೆಂಬಲಿಸುವ ರಾಷ್ಟ್ರೀಯ ಪ್ರಜಾತಂತ್ರ ಪಾರ್ಟಿಯ ಎರಡು ಬಣಗಳು ಶೇ.9.5 ಮತ ಗಳಿಸಿ 34 ಸೀಟು ಗಳಿಸಿವೆ. ಪ್ರಮಾಣಾತ್ಮಕ ಚುನಾವಣೆಗಳಲ್ಲಿ 2008ಕ್ಕೆ ಹೋಲಿಸಿದರೆ ಮೂರು ಪಟ್ಟು ಮತ ಗಳಿಸಿದೆ. ನೇರ ಚುನಾವಣೆಗಳಲ್ಲೂ 3 ಸೀಟುಗಳನ್ನು ಗಳಿಸಿವೆ. 2008ರಲ್ಲಿ ಪ್ರಮುಖ ಪಕ್ಷಗಳಾಗಿದ್ದ ಮಾದೇಸಿ ಜನ ಅಧಿಕಾರ ಫೋರಂ (54) ಮತ್ತು ತರಾಯ್–ಮಾದೇಸಿ ಲೋಕತಾಂತ್ರಿಕ ಪಾರ್ಟಿ (21) ಒಡೆದು ಹೋಗಿದ್ದು ಹಲವು ಸೀಟುಗಳನ್ನು ಕಳೆದುಕೊಂಡಿದೆ. ಆದರೆ ಒಟ್ಟಾರೆ–ಯಾಗಿ ಮಾದೇಸಿ ರಂಗ, ಸ್ಥಳೀಯ ಮತ್ತು ಸಣ್ಣ ಪಕ್ಷಗಳ ಬಲ ಸುಮಾರು ಅಷ್ಟೇ ಇದೆ.


ಚುನಾವಣಾ ಫಲಿತಾಂಶದ ಟ್ರೆಂಡುಗಳು ಪ್ರಕಟವಾಗುತ್ತಿದ್ದಂತೆ ಮಾವೋವಾದಿ ಮುಖಂಡ ಚುನಾವಣಾ ಪ್ರಕ್ರಿಯೆಯಲ್ಲಿ ಭಾರೀ ಅಕ್ರಮಗಳಾಗಿವೆ ಎಂದು ಆಪಾದಿಸಿ ಫಲಿತಾಂಶಗಳನ್ನು ಸ್ವೀಕರಿಸುವುದಿಲ್ಲ. ಸಂವೈಧಾನಿಕ ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಪ್ರಕಟಿಸಿದ್ದಾರೆ. ಚುನಾವಣಾ ಪತ್ರದ ಬಾಕ್ಸುಗಳು 24ಗಂಟೆಗಳ ಕಾಲ ಮಿಲಿಟರಿ ಸುಪರ್ದಿನಲ್ಲಿದ್ದು ಆಗ ಭಾರೀ ಅಕ್ರಮ ನಡೆದಿದೆ ಎಂದು ಅವರು ಆಪಾದಿಸಿದ್ದಾರೆ. ಚುನಾವಣಾ ಅಕ್ರಮಗಳ ಆಪಾದನೆಗಳು ಮಾದೇಸಿ ರಂಗ, ರಾಷ್ಟ್ರೀಯ ಪ್ರಜಾತಾಂತ್ರಿಕ ಪಾರ್ಟಿ ಮತ್ತಿತರ ಸಣ್ಣ


ಮಾಧವ ಸಿಪಿಎನ್(ಯೂ.ಎಂ.ಎಲ್) ಮುಖಂಡ

ಪಕ್ಷಗಳಿಂದಲೂ ಬಂದಿವೆ. ಆದರೆ ಅವ್ಯಾವೂ ಬಹಿಷ್ಕರಿಸುವ ಬಗ್ಗೆ ಹೇಳಿಲ್ಲ.


ಮಾವೋವಾದಿಗಳ ಸೋಲು ಏಕೆ ?

ಚುನಾವಣಾ ಅಕ್ರಮಗಳ ಆಪಾದನೆಗಳ ಸತ್ಯಾಸತ್ಯತೆಗಳು ಏನೇ ಇರಲಿ, ಮಾವೋವಾದಿಗಳ ಸೋಲು ತೀರಾ ಅನಿರೀಕ್ಷಿತವೇನಲ್ಲ. ಕಳೆದ ಐದು ವರ್ಷಗಳಲ್ಲಿ ಸಂವಿಧಾನವನ್ನು ಅಂತಿಮಗೊಳಿಸಿ, ತ್ವರಿತ ಸಾಮಾಜಿಕ–ರಾಜಕೀಯ ಬದಲಾವಣೆ ಮತ್ತು ಅಭಿವೃದ್ಧಿ ತರುವಲ್ಲಿ ವಿಫಲವಾಗಿದ್ದಕ್ಕೆ ನೇಪಾಳಿ ಮತದಾರ ಕೋಪಗೊಂಡಿರುವುದು ನಿರಾಸೆ ಹೊಂದಿರುವುದು ಸ್ಪಷ್ಟ. ಎಲ್ಲಾ ರಾಜಕೀಯ ಪಕ್ಷಗಳೂ ಬೇರೆ ಬೇರೆ ಹಂತದಲ್ಲಿ ಸರ್ಕಾರದಲ್ಲಿ ಭಾಗಿಯಾದ್ದರಿಂದ, ಈ ಕೋಪದಿಂದ ಯಾರೂ ಹೊರತಲ್ಲ. ಆದರೂ ಅತ್ಯಂತ ದೊಡ್ಡ ಪಕ್ಷವಾಗಿದ್ದ ಮಾವೋವಾದಿಗಳು ಈ ಕೋಪಕ್ಕೆ ಮುಖ್ಯವಾಗಿ ತುತ್ತಾಗಿರುವುದು ಸ್ವಾಭಾವಿಕವೇ. ಪ್ರಚಂಡ ಸೇರಿದಂತೆ ಹಲವು ಪ್ರಮುಖ ಮಾವೋವಾದಿ ನಾಯಕರು ಸೋತಿರುವುದು



ಇದನ್ನು ತೋರಿಸುತ್ತದೆ.

ಅದು ಮಾತ್ರವಲ್ಲ ಸಂವಿಧಾನ ರಚನೆಯಲ್ಲಿ ಕೊನೆಗೆ ಅತ್ಯಂತ ವಿವಾದಿತ ವಿಷಯವಾಗಿದ್ದ ಒಕ್ಕೂಟದ ಸ್ವರೂಪ ಮತ್ತು ಪ್ರಾಂತ್ಯಗಳ ರಚನೆಗೆ ಆಧಾರದ ಬಗ್ಗೆ ಮಾವೋವಾದಿ ನೀತಿಯಿಂದಾಗಿಯೂ ಅವರು ಬೆಂಬಲ ಕಳೆದುಕೊಂಡಿರುವಂತೆ ಕಾಣುತ್ತದೆ. ಮಾವೋವಾದಿ ಪಕ್ಷದಲ್ಲಾದ ಒಡಕು ಆ ಪಕ್ಷ–ಕ್ಕೆ ಸಾಕಷ್ಟು ಹಾನಿ ಮಾಡಿರಬಹುದು. ಒಡೆದು ರಚಿಸಲಾದ ಬೈದ್ಯ ಪಕ್ಷಕ್ಕೆ ಮೂಲ ಪಕ್ಷದ ಮೂರನೇ ಒಂದು ಭಾಗದಷ್ಟು ಸದಸ್ಯರು ಸೇರಿದ್ದರು. ಮಾತ್ರವಲ್ಲ ಅವರು ಪ್ರಮುಖ ಮಾವೋವಾದಿ ನಾಯಕ ಪ್ರಚಂಡ ಸೇರಿದಂತೆ ಪ್ರಮುಖ ನಾಯಕರ ಮೇಲೆ ಸರ್ವಾಧಿಕಾರಿ ಮನೋಭಾವ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಪ್ರಾಮಾಣಿಕ ಕಾರ್ಯಕರ್ತರನ್ನು ಅಭ್ಯರ್ಥಿ ಆಯ್ಕೆಯಲ್ಲಿ ನಿರ್ಲಕ್ಷಿಸಿದ್ದು, ಕಮ್ಯುನಿಸ್ಟ್ ಮೌಲ್ಯಗಳ ಉಲ್ಲಂಘನೆಯ ಗುರುತರ ಆಪಾದನೆಗಳನ್ನು


ಪ್ರಚಂಡ – ಮಾವೋವಾದಿ ಪಕ್ಷದ ಮುಖಂಡ

ಮಾಡಿದರು. ಪಕ್ಷದ ವಿರುದ್ಧ ಹಲವು ಕಡೆ ಪ್ರಚಾರ ಮಾಡಿದರು. ಇತರ ಪಕ್ಷಗಳಿಗೆ ತಮ್ಮ ಬೆಂಬಲಿಗರ ಮತ ಹಾಕಿಸಿದರು.

ಈಗ ರಚನೆಯಾಗಲಿರುವ ಸಂವೈಧಾನಿಕ ಸಭೆಯಲ್ಲಿ ಯಾವುದೇ ಪಕ್ಷಕ್ಕೂ ಬಹುಮತ ಇರುವುದಿಲ್ಲ. ಕಾಂಗ್ರೆಸ್ ಮತ್ತು ಕಮ್ಯು... ಸೇರಿಸಿ ಬಹುಮತ ಇದೆ. ಕಮ್ಯುನಿಸ್ಟರು ... ಮಾವೋವಾದಿಗಳು ಸೇರಿಸಿದರೂ ಬಹ... ಇಲ್ಲ. ಮಾವೋವಾದಿಗಳು, ಮಾದೇಸಿ ... ಮತ್ತು ಇತರ ಸ್ಥಳೀಯ ಪಕ್ಷಗಳು ಸೇರಿ... ಬಹುಮತ ಇಲ್ಲ. ಆದ್ದರಿಂದ ಸರ್ಕಾರ ರ... ಎರಡೇ ಸಾಧ್ಯತೆ ಇರುವುದು – ಕಾಂ... ಕಮ್ಯುನಿಸ್ಟ್ ರಂಗ ಅಥವಾ ಕಮ್ಯು... ಮಾವೋವಾದಿ–ಮಾದೇಸಿ ಸ್ಥ... ಪಕ್ಷಗಳ ವಿಶಾಲ ಕಾಂಗೆಸ್ಸೇತರ ರಂಗ. ...ರೆ ಮಾವೋವಾದಿಗಳು ಸಂವೈಧಾನಿಕ ... ಬಹಿಷ್ಕರಿಸಿ ಬೀದಿ ಕಾಳಗದ ಹಾದಿ ಹಿ... ನೇಪಾಳದ ರಾಜಕೀಯ ಬಿಕ್ಕಟ್ಟು ಚುನಾವ... ನಂತರವೂ ಪರಿಹಾರವಾಗುವ ಸೂಚ... ಕಾಣುತ್ತಿಲ್ಲ.

ಪೋರ್ಚುಗೀಸ್ ಕಮ್ಯುನಿಸ್ಟರ ಮುನ್ನಡೆ

ಇತ್ತೀಚೆಗೆ ಪೋರ್ಚುಗಲ್ಲಿನಲ್ಲಿ ... ಮುನಿಸಿಪಲ್ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ... ಮತ್ತು ಅದರ ನಾಯಕತ್ವದ ಸಿಡಿಯು ... ಗಮನಾರ್ಹ ಮುನ್ನಡೆ ಸಾಧಿಸಿದೆ. ಅದು ... ನಿಯಂತ್ರಣದಲ್ಲಿದ್ದ ಮುನಿಸಿಪಾಲಿಟಿಗ... 28ರಿಂದ 34ಕ್ಕೆ ಹೆಚ್ಚಿಸಿಕೊಂಡಿದೆ. ಇದು 19... ನಂತರದ ಅವಧಿಯಲ್ಲಿ ಪಕ್ಷ ಗೆದ್ದ ಅತಿ ... ಸಂಖ್ಯೆ. 10 ಹೊಸ ಮುನಿಸಿಪಾಲಿಟಿಗಳಲ್ಲಿ ... ಮುನಿಸಿಪಾಲಿಟಿಗಳನ್ನು ಕಳೆದುಕೊಂಡ... ಈ ಮುನ್ನಡೆ ಆಗಿದೆ. ತನ್ನ ಮತಗಳಿಕೆಯ... ಶೆ.10.6 ರಿಂದ ಶೇ.12 ಕ್ಕೆ ಏರಿಸಿಕೊಂ... ರಾಜಧಾನಿಯಾದ ಲಿಸ್ಬನ್ ಮೆಟ್ರೊ ಪ್ರದೇಶದ... 169 ವಾರ್ಡುಗಳಲ್ಲಿ ಗೆದ್ದು (23 ... ವಾರ್ಡುಗಳು) ಮುನ್ನಡೆ ಸಾಧಿಸಿ ... ರಾಜಕೀಯ ಬಲವಾಗಿ ಹೊಮ್ಮಿದೆ. ಪಕ್ಷ... ಸಿಡಿಯು ಬಲಹೀನವಾಗಿದ್ದ ಉತ್ತರ ... ಮಧ್ಯ ಪೋರ್ಚುಗಲ್ಲಿನಲ್ಲೂ ಉತ್ತಮ ಮ... ಸಾಧಿಸಿದೆ.

...ಲ್ ಲೈಂಗಿಕ ಪ್ರಕರಣ......

11 ರಿಂದ

...ನುಗಳ ಬಗ್ಗೆ ಆ ಮಹಿಳೆಗೆ ಸಂಪೂರ್ಣ ...ರಬೇಕು. ಆ ಬಗ್ಗೆ ಆಲೋಚಿಸಲು ಆಕೆಗೆ ...ವಕಾಶವಿರಬೇಕು. ಪೊಲೀಸರ ಬಳಿ ದೂರು ...ಸುವ ಇಲ್ಲವೆ ದಾಖಲಿಸದಿರುವುದರ ... ಬಾಧಕಗಳು ತಿಳಿವಿಗೆ ಬರಬೇಕು. ...ರ ಕಾನೂನು ಸಣ್ಣ ಪ್ರಮಾಣದ ಲೈಂಗಿಕ ...ಧಗಳಿಗೆ ಮಾತ್ರ ಅನ್ವಯಿಸುವಂತಹುದೆಂದು ...ತಿಳಿಸಲಾಗಿತ್ತೆ? ಈ ಕಾನೂನಿನಡಿ ನೀಡುವ ... ಆಕೆಯ ಮೇಲಾಗಿರುವ ದೌರ್ಜನ್ಯಕ್ಕೆ ...ಗಿರುವುದಿಲ್ಲ ಎಂಬುದನ್ನು ಆಕೆಗೆ ...ಲಾಗಿತ್ತೆ? ಆಕೆಯ ಉದ್ಯೋಗಕ್ಕೆ ಕಾನೂನಿನ ... ರಕ್ಷಣೆ ಇದೆ ಎಂದು ಆಕೆಗೆ ತಿಳಿದಿತ್ತೆ? ...ಕ್ಕಾಗಿ ಹೋರಾಡಲು ಆಕೆಗೆ ಅತ್ಯುತ್ತಮ ...ನಿನ ನೆರವು ಮತ್ತು ಬೆಂಬಲ ನೀಡಲಾಗಿತ್ತೆ? ...ನೂ ಮಾಡದಿರುವಾಗ ಆಂತರಿಕ ...ಯ ಮೂಲಕ ತನಿಖೆ ನಡೆಸುವುದೆಂದರೆ ... ಅತ್ಯಾಚಾರಕ್ಕೊಳಗಾದ ಮಹಿಳೆಗೆ ನ್ಯಾಯ ನೀಡದೆ, ಅತ್ಯಾಚಾರ ಮಾಡಿದ ವ್ಯಕ್ತಿಗೆ ಅತ್ಯಾಚಾರ ವಿರೋಧಿ ಕಾಯ್ದೆಯಡಿ ನೀಡುವ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ನೆರವು ನೀಡುವ ಉದ್ದೇಶ ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ.

ತೆಹಲ್ಕಾದಂತಹ ಪ್ರಕರಣಗಳಲ್ಲಿ ಸಂತ್ರಸ್ತ ಮಹಿಳೆಗೆ ಕಾನೂನಾತ್ಮಕ ನೆರವು ನೀಡಿ ಪೋಲಿಸರಿಗೆ ದೂರು ನೀಡುವಂತೆ ಆಡಳಿತ ಮಂಡಳಿ ಸಲಹೆ ನೀಡುವುದರಿಂದ ಮಾತ್ರವೇ ಆಕೆ ಎಲ್ಲ ಮಾಹಿತಿಯರಿತು ಸರಿಯಾದ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. 'ವಿಶಾಖ' ತೀರ್ಪಿನಡಿಯಲ್ಲಿ ಇಂತಹ ಘಟನೆಗಳ ಬಗ್ಗೆ ಪೋಲಿಸರಿಗೆ ದೂರು ಸಲ್ಲಿಸುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಅಧಿಕಾರದ ಸ್ಥಾನದಲ್ಲಿರುವ ಪುರುಷರು ತಮ್ಮ ಕೈಕೆಳಗೆ ಕೆಲಸ ಮಾಡುವ ಮಹಿಳೆಯರನ್ನು ಲೈಂಗಿಕವಾಗಿ ಶೋಷಿಸಲು ತಮ್ಮ ಅಧಿಕಾರ ಬಳಸಿಕೊಳ್ಳಲು ಪ್ರಯತ್ನಿಸಿದರೆ ಅವರು ಶಿಕ್ಷೆಯಿಂದ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳಬೇಕು.

ಗುಜರಾತ್‌ನಲ್ಲಿ ಏನಾಗಿದೆ.?

ಬಿಜೆಪಿಯ ಭ್ರಷ್ಟಾಚಾರವನ್ನು ತೆಹಲ್ಕಾ ಬಯಲಿಗೆಳೆದಿತ್ತು. ಹಾಗಾಗಿ ಈಗ ನಡೆದಿರುವ ಘಟನೆಗೆ ರಾಜಕೀಯ ಆಯಾಮವೂ ಇದೆ. ತೆಹಲ್ಕಾದ ಮೇಲಿನ ಪ್ರತೀಕಾರಕ್ಕೆ ಬಿಜೆಪಿಗೆ ಒಂದು ಅವಕಾಶ ಸಿಕ್ಕಂತಾಗಿದೆ. ಈ ವಿಚಾರದಲ್ಲಿ ಬಿಜೆಪಿಯ ವರ್ತನೆ ಅವರ ಇಬ್ಬಗೆಯ ನೀತಿಯನ್ನು ತೋರಿಸುತ್ತದೆ. ಗೋವಾದಲ್ಲೇನೊ ಬಿಜೆಪಿ ಸರ್ಕಾರ ತ್ವರಿತವಾಗಿ ಕಾರ್ಯ ನಡೆಸಿದೆ. ಆದರೆ ಗುಜರಾತ್‌ನಲ್ಲಿ ಇಂತಹದೇ ಘಟನೆ ನಡೆದಾಗ ಈ ಉತ್ಸಾಹ ಏಕಿರಲಿಲ್ಲ? ಮುಖ್ಯಮಂತ್ರಿಯವರಿಗೆ ತಿಳಿದ ಯುವತಿಯೊಬ್ಬಳ ಮೇಲೆ ಕಾನೂನಿಗೆ ವಿರುದ್ಧವಾಗಿ ಭಯೋತ್ಪಾದಕ ವಿರೋಧಿ ಕಾನೂನಿನಡಿ ತೀವ್ರ ನಿಗಾ ಇಡಲಾಗಿತ್ತು. ಇದೂ ಭಾರತೀಯ ಟೆಲಿಗ್ರಾಫ್ ಕಾಯ್ದೆಯ ಕಾಲಂ 5.2 ರಡಿ ಮತ್ತು ಭಾರತೀಯ ದಂಡ ಸಂಹಿತೆಯಡಿ ಮಹಿಳೆಯ ಬೆನ್ನತ್ತಿ ಹೋಗುವುದು ಶಿಕ್ಷಾರ್ಹ ಅಪರಾಧವಾಗಿದೆ. ಅಪರಾಧಗಳು ಭಿನ್ನವಿರಬಹುದು ಆದರೆ ಎರಡೂ ಶಿಕ್ಷಾರ್ಹ ಅಪರಾಧಗಳೇ. ನ್ಯಾಯದ ಪ್ರಕ್ರಿಯೆ ಗೋವಾ ಮತ್ತು ಗುಜರಾತ್ ಈ ಎರಡಕ್ಕೂ ಅನ್ವಯಿಸುವುದಲ್ಲವೆ?

ಎರಡು ದಶಕಗಳ ನಂತರವೂ......

ಪುಟ 7 ರಿಂದ

ವಿಷಯಗಳು– ಅಯೋಧ್ಯೆಯಲ್ಲಿ ವಿವಾದಿತ ಸ್ಥಳದಲ್ಲಿ ರಾಮದೇವಸ್ಥಾನ ಕಟ್ಟುವುದು, 370ನೇ ಕಲಮಿನ ರದ್ದತಿ ಮತ್ತು ಸಮರೂಪದ ನಾಗರಿಕ ಸಂಹಿತೆಯ ಹೇರಿಕೆ (ಒಂದು ಹಿಂದೂ ದೇಶದಲ್ಲಿ ಸಮರೂಪತೆಯಿರಬೇಕು, ಯಾವುದೇ ವೈವಿಧ್ಯತೆಗೆ ಅವಕಾಶವಿಲ್ಲ)– ಅವರ ಮೂಲ ಹಿಂದುತ್ವ ಅಜೆಂಡಾ. ಆದ್ದರಿಂದ ಎಲ್ಲ ಅಲಂಕಾರಗಳನ್ನು ಬದಿಗಿಟ್ಟು ನೋಡಿದರೆ, ಆರೆಸ್ಸೆಸ್/ಬಿಜೆಪಿಯ ಪ್ರಚಾರದ ಮುಖ್ಯ ಅಂಶ ಇಷ್ಟೇ– 2014ರ ಸಾರ್ವತ್ರಿಕ ಚುನಾವಣೆಗಳಿಗೆ ಸಿದ್ಧತೆಯಾಗಿ ಬಹುಸಂಖ್ಯಾತ ಹಿಂದೂ ವೋಟ್ ಬ್ಯಾಂಕನ್ನು ಕ್ರೋಢೀಕರಿಸಲು ಈ ಮೂಲ ಹಿಂದುತ್ವ ಅಜೆಂಡಾದ ಆಧಾರದಲ್ಲಿ ಒಂದು ಕೋಮುವಾದಿ ಧ್ರುವೀಕರಣವನ್ನು ತರಲು ಪ್ರಯತ್ನಿಸುವುದು.

ಈ ಪ್ರಚಾರವೇ ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಗೆ ಇರುವ ಸವಾಲನ್ನು ಜೀವಂತವಾಗಿಟ್ಟಿದೆ, ಅಷ್ಟೇ ಅಲ್ಲ, ಮತ್ತೆ ಮತ್ತೆ ಅದನ್ನು ನೆನಪಿಗೆ ತರುತ್ತಿದೆ. ಬಾಬ್ರಿ ಮಸೀದಿ ಧ್ವಂಸ ಅಥವ ಗುಜರಾತ್ ಕೋಮು ಹತ್ಯಾಕಾಂಡದಂತಹ ಈ ಹಿಂದಿನ ಅಪರಾಧಗಳಿಗೆ ಯಾರಿಗೂ ಶಿಕ್ಷೆಯಾಗಿಲ್ಲ ಎಂಬ ಸಂಗತಿಯೇ ಕೋಮುವಾದಿ ಶಕ್ತಿಗಳಿಗೆ ಇನ್ನಷ್ಟು ಗಂಭೀರವಾಗಿ ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ ತರುವ ಧೈರ್ಯ ತುಂಬಿದೆ. ನಮ್ಮ ಬಹುಪಾಲು ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಹೋರಾಟವನ್ನು ಮುಂದೊಯ್ಯಬೇಕಾದರೆ ಈ ಸವಾಲನ್ನು ನೇರವಾಗಿ ಎದುರಿಸಿ ಸೋಲಿಸಬೇಕಾಗಿದೆ.

...ಆಡಳಿತದಲ್ಲಿ........


16 ರಿಂದ

...ೋತ್ತಬಿರುದು ಅಂಕಿತರು ಅದಂತ ಶೃಂಗೇರಿ ...ಸಚ್ಚಿದಾನಂದ ಭಾರತೀ ಸ್ವಾಮಿಗಳವರಿಗೆ ... ಸುಲ್ತಾನ ಪದಶಾಹರವರ ಸಲಾಮು. ... ಬರಸಿ ಕಳುಹಿಸಿದ ಪತ್ರಿಕೆಯಿಂದ ಸಕಲ ...ಪ್ರಾಯವು ತಿಳಿಯಿತು. ತಾವು ಜಗದ್ಗುರುಗಳು. ...ಲೋಕಕ್ಕು ಕ್ಷೇಮ ಆಗಬೇಕು, ಜನರಲ್ಲಿ ...ದಲ್ಲಿ ಇರಬೇಕೆಂಬುದಾಗಿ ತಪಸ್ಸು ಮಾಡುತ್ತಾ ...ರಿ. ಸರಕಾರದ ಕ್ಷೇಮಾ ಉತ್ತರೋತ್ತರ ...ರ್ಧಮಾನ ಆಗುವಂತೆ ತ್ರಿಕಾಲ ... ಮಾಡುವಲ್ಲಿಯೂ ಈಶ್ವರ ...ನೆ ಮಾಡುತ್ತ ಬರುವುದು ...ಥಾ ದೊಡ್ಡವರು ಯಾವ ...ದಲ್ಲಿ ಇದ್ದರೂ ಆ ದೇಶಕ್ಕೆ, ...ಬೆಳೆ, ಸಕಲವೂ ಆಗಿ ಸು– ...ೂ ಆಗಿ ಇರತಕ್ಕದ್ದರಿಂದ ...ದಲ್ಲಿ ಬಹಳ ದಿವಸ ತಾವು ...ತಕ್ಕ ಇರಬೇಕು? ಹೋದ ... ಕ್ಷಿಪ್ರದಲ್ಲಿ ಅನುಕೂಲ ...ಂಡು ಸ್ಥಳಕ್ಕೆ ಸಾಗಿ ...ವಂತೆ ಮಾಡಿಸುವುದು."

* * * * *

...ೂ ಕಾಲದಲ್ಲಿ ಹಿಂದೂಗಳು ಮತ್ತು ಕ್ರೈಸ್ತರು

...ಟಿಪೂ ತನ್ನ ತಂದೆಯ ...ಯನ್ನೇ ಅನುಸರಿಸಿ ಮುಸ್ಲಿಮೇತರರನ್ನು ...ಬ್ದಾರಿಯುತವಾದ ಸ್ಥಾನಗಳಿಗೆ ನೇಮಿಸಿದನು. ...ನ್ ಪೂರ್ಣಯ್ಯನು ಮೀರ್ ಅಸೋಫ್ ...ು ಮುಖ್ಯ ಹುದ್ದೆಯಲ್ಲಿದ್ದನು. ಕೃಷ್ಣರಾಯನು ...ನೆಯನ್ನು ನೋಡಿಕೊಳ್ಳುತ್ತಿದ್ದನು. ...ಯ್ಯ ಅಯ್ಯಂಗಾರನು ಅಂಚೆ ಮತ್ತು ...ೀಸ್ ಮಂತ್ರಿಯಾಗಿದ್ದನು. ಅವನ ತಮ್ಮ ... ಅಯ್ಯಂಗಾರನು ಮತ್ತು ನರಸಿಂಹರಾಯನು ...ಂಗಪಟ್ಟಣದಲ್ಲಿ ಉನ್ನತ ಹುದ್ದೆಯಲ್ಲಿದ್ದರು. ...ವಾಸರಾಯನೂ ಮತ್ತು ಅಪ್ಪಾಜಿ ... ಟಿಪೂವಿನ ನಂಬಿಗಸ್ಥರಾಗಿದ್ದು ...ಾಮುಖ್ಯವಾದ ರಾಯಭಾರಗಳನ್ನೂ ...ಸುತ್ತಿದ್ದರು. ಮೂಲಚಂದ್ ಮತ್ತು ...ನರಾಯ್ ಅವರುಗಳು ಮೊಗಲ್ ಆಸ್ಥಾನದಲ್ಲಿ ಟಿಪೂವಿನ ಮುಖ್ಯ ನಿಯೋಗಿಗಳಾಗಿದ್ದರು. ಹಾಗೆಯೇ, ಸುಲ್ತಾನನು ನಾಯಕರಾಯ ಮತ್ತು ನಾಯಕ ಸಂಗಣ್ಣನವರುಗಳಲ್ಲಿ ಅಪಾರವಾದ ನಂಬಿಕೆಯನ್ನಿಟ್ಟಿದ್ದನು. ಸುಬ್ಬರಾಯನು ಟಿಪೂವಿನ ಪ್ರಧಾನ ಪೇಷ್ಕರ್ ಆಗಿದ್ದನು. ನರಸಿಂಹಯ್ಯನು ಅವನ ಒಬ್ಬ ಮುನ್ಸಿಯಾಗಿದ್ದ. ನಾಗಪ್ಪಯ್ಯನು ಕೊಡಗಿಗೆ ಫೌಜುದಾರನಾಗಿ ನೇಮಕಗೊಂಡಿದ್ದನು. ಇನ್ನೊಬ್ಬ ಬ್ರಾಹ್ಮಣ ಅಧಿಕಾರಿ ಕೊಯಮತ್ತೂರಿನ, ನಂತರ ಪಾಲಘಾಟಿನ ಅಸಫನಾಗಿದ್ದನು. ಮಲಬಾರಿನ ಕಾಡುಗಳಲ್ಲಿ ಮರವನ್ನು ಕೊಯ್ಯುವ ಸಂಪೂರ್ಣ ಸೌಲಭ್ಯವನ್ನೊಬ್ಬ ಬ್ರಾಹ್ಮಣನಿಗೆ ವಹಿಸಿಕೊಟ್ಟಿದ್ದನು.



ಟಿಪೂವಿನ ಅನೇಕ ಅಮೀಲರು ಮತ್ತು ಕಂದಾಯ ಅಧಿಕಾರಿಗಳು ಹಿಂದೂಗಳಾಗಿದ್ದರು ಮತ್ತು ಹೆಚ್ಚಾಗಿ ಅವರು ಬ್ರಾಹ್ಮಣರು. ಸೈನ್ಯದಲ್ಲಿಯೂ ಕೂಡ ಹಿಂದೂಗಳು ದೊಡ್ಡ ಹುದ್ದೆಗಳಲ್ಲಿದ್ದರು. ಶ್ರೀಪತಿರಾಯನು ರೋಷನ್‌ಖಾನ್‌ನೊಡನೆ ದಂಗೆಕೋರ ನಾಯಕರುಗಳನ್ನಡಗಿಸಲೆಂದು ನೇಮಿತನಾಗಿದ್ದನು. ಮರಾಠರವನಾದ ಶಿವಾಜಿರಾಯನು 3,000 ಕುದುರೆಗಳ ನಾಯಕನಾಗಿದ್ದು, 1791ರಲ್ಲಿ (ಬ್ರಿಟೀಷ್) ಕಾರ್ನವಾಲೀಸನು ಬೆಂಗಳೂರನ್ನು ಮುತ್ತಿದಾಗ ಧೈರ್ಯದಿಂದ ಹೋರಾಡಿದ್ದನು. ಹಾಗೆಯೇ, ಬ್ರಾಹ್ಮಣನಾದ ರಾಮರಾಯನ್ನೂ ಅಶ್ವದಳದ ದಳಪತಿಯಾಗಿದ್ದನು.

ಟಿಪೂ ತನ್ನ ರಾಜ್ಯದ ದೇವದಾಯ ಮತ್ತು ಬ್ರಹ್ಮದಾಯಗಳನ್ನು ಸಾಮೂಹಿಕವಾಗಿ ಕಸಿದುಕೊಂಡನೆಂಬ ಆಪಾದನೆಗೂ ಗುರಿಯಾಗಿದ್ದಾನೆ. ವಾಸ್ತವವಾಗಿಯೂ ಅವನು ಅಂಥ ಅನಧಿಕೃತ ಕೊಡುಗೆಗಳನ್ನು ಸರಕಾರದ ಆಸ್ತಿಯಾಗಿ ತೆಗೆದುಕೊಂಡು, ಹಿಂದಿನ ರಾಜರುಗಳಿಂದ ಸರಿಯಾದ ಸನ್ನದುಗಳನ್ನು ಪಡೆದಿದ್ದವರನ್ನು ಹಾಗೆಯೇ ಬಿಟ್ಟುಬಿಟ್ಟಿದ್ದನು. ಅನೇಕ ಸಂದರ್ಭದಲ್ಲಿ ತಾನೇ ಭೂಮಿಯನ್ನು ಮತ್ತು ಸಂಪತ್ತನ್ನು ಬ್ರಾಹ್ಮಣರಿಗೂ ಹಾಗೂ ದೇವಾಲಯಗಳಿಗೂ ಕೊಡುಗೆಯಾಗಿತ್ತ ಸಂದರ್ಭಗಳಿವೆ. ಇಂಥ ಒಂದು ಸಂದರ್ಭದಲ್ಲಿ ಪುಷ್ಪಗಿರಿಯ ಮಠದ ಸ್ವಾಮಿಯಾಗಿದ್ದ ಕೋನಪ್ಪನು ತೊಂಗಪಲ್ಲಿ ಮತ್ತು ಗೊಲ್ಲಪಲ್ಲಿಗಳ ಕಂದಾಯವನ್ನು ಅನುಭವಿಸಲು ನೀಡಿದ ಅನುಮತಿ, ತನ್ನ ಅಮಿಲ್ದಾರನಿಗೆ ಕಳುಹಿಸಿದ ಮರಾಠಿ ಸನ್ನದಿನಲ್ಲಿ ತಿಳಿಸಲಾಗಿದೆ. .. .. ಕಮಲಾಪುರ ತಾಲೂಕಿನ ಅನೇಕ ಬ್ರಾಹ್ಮಣನೊಬ್ಬನಿಗೆ ಮಂಜರಾಬಾದ ತಾಲೂಕಿನಲ್ಲಿ ಇನಾಮನ್ನು ಅನುಗ್ರಹಿಸಿದನು. ತುಂಗಭದ್ರ ನದಿಯ ದಂಡೆ–ಯ ಮೇಲಿನ ದೇವಾಲಯಗಳಿಗೆ ಮತ್ತು ಅಲ್ಲಿನ ಬ್ರಾಹ್ಮಣರಿಗೆ ಟಿಪೂ ಭೂಮಿಯನ್ನು ದಾನವಾಗಿ ನೀಡಿರುವುದನ್ನು ಕನ್ನಡ ಲಿಪಿಯಲ್ಲಿರುವ ಸಂಸ್ಕೃತ ಶ್ಲೋಕವೊಂದು ತಿಳಿಸುತ್ತದೆ. 1782ರಲ್ಲಿ ಬರಮಹಲಿನ ಅಮೀಲ್ದಾರ ಹರಿದಾಸಿಮಯ್ಯನಿಗೆ ನಿರೂಪವೊಂದನ್ನು ಕಳುಹಿಸಿ, ದೇವದಾಯ ಮತ್ತು ಬ್ರಹ್ಮದಾಯಗಳನ್ನುಳಿದು ಮಿಕ್ಕೆಲ್ಲವನ್ನೂ ಹಿಂದೆಗೆದುಕೊಳ್ಳಬೇಕೆಂದು ಹೇಳಿದ್ದಾನೆ. 1974ರಲ್ಲಿ ಧರ್ಮಪುರಿಯ ಬ್ರಾಹ್ಮಣ ನರಸಿಂಹ ಜೋಷಿಗೆ ವಂಶಪಾರಂಪರ್ಯವಾಗಿ ವರ್ಷಕ್ಕೆ ಹತ್ತು ಪಗೋಡಗಳ ವೇತನವನ್ನು ಕೊಟ್ಟಿದ್ದಾನೆ. 1784ರಲ್ಲಿ ಬಾಬಾ ಬುಡಾನ್‌ಗಿರಿಯ ದತ್ತಾತ್ರಯ ಪೀಠಕ್ಕೆ ಹಿಂದಿನ ಆನೆಗುಂದಿ ರಾಜನು ಬಿಟ್ಟುಕೊಟ್ಟ 25 ಗ್ರಾಮಗಳನ್ನು ಟಿಪೂ ಪುನಃ ನೀಡಿದನು. ನಗರದ ವೆಂಕಟರಮಣ ದೇವಾಲಯಕ್ಕೆ ಮಲಬಾರಿನ ಕ್ರೈಸ್ತ ಚರ್ಚ್‌ನಿಂದ ಡಚ್ ಮಾದರಿಯ ಗಂಟೆಯನ್ನು ದಾನವಾಗಿ ನೀಡಿದನು. .. .. ಮೇಲುಕೋಟೆಯಲ್ಲಿ ಬ್ರಾಹ್ಮಣರ ಅನುಮತಿ ಪಡೆದು ಹಿಂದೂ ದೇವಾಲಯದ ಪಕ್ಕದಲ್ಲಿ ಮಸೀದಿಯನ್ನು 1787ರಲ್ಲಿ ಕಟ್ಟಿಸಿದನು. ಇದೇ ರೀತಿಯಾಗಿ ಮಲಬಾರ್ ಮತ್ತು ಕೊಚ್ಚಿನ್ ಪ್ರದೇಶಗಳಲ್ಲೂ ಟಿಪೂ ಸರಕಾರ ಅಲ್ಲಿನ ಬ್ರಾಹ್ಮಣರಿಗೂ, ದೇವಾಲಯಗಳಿಗೂ ದತ್ತಿ ನೀಡುವ ನೀತಿಯನ್ನು ಪಾಲಿಸಿದ್ದನು. ಇಲ್ಲಿ ಭೂಮಿಯನ್ನು ಉಂಬಳಿಯಾಗಿ ಕೊಟ್ಟಿರುವ ಪಟ್ಟಿಯನ್ನು ಸಿ.ಕೆ. ಕರೀಂರವರು ವಿಮರ್ಶಾತ್ಮಕವಾಗಿ ಚಿತ್ರಿಸಿರುತ್ತಾರೆ. ಕೆಲವು ನಿದರ್ಶನಗಳನ್ನು ಇಲ್ಲಿ ಅವಲೋಕಿಸಬಹುದು.

1) ..

2) ಪೊನ್ನವಿ ತಾಲೂಕಿನ ಪೈಲತ್ತೂರು ಅಮಸೋಮಿನ ತಿರುವಂಚಿಕುಳದ ಶಿವದೇವಾಲಯಕ್ಕೆ 208.82 ಎಕರೆಯ ಜಮೀನು ಮತ್ತು 3.29 ಎಕರೆ ತೋಟದ ಭೂಮಿ.

3) ಪೊನ್ನಾನಿ ತಾಲೂಕಿನ ಗುರುವಾಯೂರು ಅಮಸೋಮಿನ ಗುರುವಾಯೂರು ದೇವಾಲಯಕ್ಕೆ 46.02 ಎಕರೆ ಗದ್ದೆ ಮತ್ತು 458.32 ಎಕರೆಯ ತೋಟದ ಭೂಮಿ.

4) .. (.. 5.. 6..)

7) ತಿರುಚೂರಿನ ನಡುವಿಲ್ ಮಡತ್ತಿಲ್ ತಿರುಮುಂಬುಗೆ 40.26 ಎಕರೆ ಜಮೀನು, 2.13 ಎಕರೆ ತೋಟದ ಭೂಮಿ ಮತ್ತು 4.17 ಎಕರೆ ತೋಟದ ಹೊಲ.

* * * * *

ಮೈಸೂರಿನ ಪರಕಾಲ ಮಠದಲ್ಲಿರುವ ಒಂದು ಸನ್ನದಿನ ಪ್ರಕಾರ, ಮೇಲುಕೋಟೆ ದೇವಸ್ಥಾನದಲ್ಲಿ ಪ್ರಾರ್ಥನಾಮಂತ್ರದ ಪಠಣದ ವಿಷಯವಾಗಿ ಎರಡೂ ಹಿಂದೂ ಪಂಗಡಗಳಲ್ಲಿ ಕಚ್ಚಾಟವಾದಾಗ, ಟಿಪೂ ಮಧ್ಯಸ್ಥಿಕೆಗಾರನಾಗಿದ್ದು ಅವರಲ್ಲಿರುವ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿದ್ದನು.

(ಮುಂದುವರಿಯುತ್ತದೆ)

JANASHAKTHI KANNADA VARA PATRIKE DEC 15, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every
Licensed to Post without prepayment License No. W

ಟಿಪೂ: ಐತಿಹಾಸಿಕ ಸತ್ಯಗಳು ಮತ್ತು ಕೋಮುವಾದಿ ಪ್ರಚಾರಗಳು

ಟಿಪೂವನ್ನು ಒಬ್ಬ ಕ್ರೂರ ಮತಾಂಧನೆಂದು, ಕನ್ನಡ ದ್ರೋಹಿ ಎಂದು ಹಾಗೂ ಹಿಂದೂ ವಿರೋಧಿ ಎಂದು ಚಿತ್ರಿಸುವ ವ್ಯಾಪಕ ಪ್ರಯತ್ನಗಳು ಮತ್ತು ಪ್ರಚಾರಗಳು ವ್ಯಾಪಕವಾಗಿ ಚಾಲ್ತಿಯಲ್ಲಿವೆ. ಟಿಪ್ಪು ತನ್ನ ಆಡಳಿತಾವಧಿಯಲ್ಲಿ ಹಿಂದೂ ದೇವಾಲಯಗಳಿಗೆ ನೀಡಿರುವ ಕೊಡುಗೆಗಳು, ರಕ್ಷಣೆ ಹಾಗೂ ತನ್ನ ಆಡಳಿತದ ನಿರ್ಣಾಯಕ ಸ್ಥಾನಗಳಲ್ಲಿ ಆತ ಮುಸ್ಲಿಮರಲ್ಲದ ಇತರ ಧರ್ಮದವರನ್ನು ಗಣನೀಯವಾಗಿ ನೇಮಿಸಿಕೊಂಡಿದ್ದರ ನಿರ್ದಿಷ್ಟ ವಿವರಗಳು ಇಲ್ಲಿವೆ. ಕೃಷಿ-ಕೈಗಾರಿಕೆಗಳ ಮತ್ತು ವಾಣಿಜ್ಯ ವಿಷಯಗಳಲ್ಲಿ ಹೈದರಾಲಿ ಮತ್ತು ಟಿಪ್ಪು ಅವರುಗಳು ಜಾರಿಗೆ ತಂದ ಅಭುತಪೂರ್ವ ಕ್ರಮ ಮತ್ತು ಆಮೂಲಕ ನಾಡಿನ ಅಭಿವೃದ್ಧಿಗೆ ನಾಡಿನ ಆಧುನೀಕರಣಕ್ಕೆ ಅವರು ಕೊಟ್ಟ ಕೊಡುಗೆ -ಈ ಕುರಿತು ವಿವರಿಸುವ ಬರಹಗಳ ಭಾಗಗಳು ಇವು.

ಮಾನವತಾ ವೇದಿಕೆ, ಮಂಗಳೂರು ಇವರು ಪ್ರಕಟಿಸಿರುವ 'ಬಾರ್ಕೂರು ಉದಯ' ಅವರ 'ಹೈದರಾಲಿ-ಟಿಪೂ: ಇತಿಹಾಸ ಕಥನ' ಪುಸ್ತಕದಿಂದ ಇವನ್ನು ಆರಿಸಲಾಗಿದೆ.

ಇತಿಹಾಸದ ಕುರಿತ ಇತಿಹಾಸಕಾರರ- ಬರಹಗಾರರ ವಿಶ್ಲೇಷಣೆಗಳಿಗಿಂತ ಸಾಧ್ಯವಾದಷ್ಟೂ ಚಾರಿತ್ರಿಕ ದಾಖಲೆಗಳ ಮೂಲಕ ಓದುಗರೇ ಸೂಕ್ತ ತೀರ್ಮಾನಕ್ಕೆ ಬರಲು ಅನುಕೂಲವಾಗುವಂತೆ ಒತ್ತು ನೀಡಿ ಮಾಹಿತಿಗಳನ್ನು ಆಯ್ದುಕೊಳ್ಳಲಾಗಿದೆ. ತೀರ್ಮಾನ ಓದುಗರಿಗೆ ಬಿಟ್ಟದ್ದು. (ವಿ.ಸೂ.(..) ತಲೆಬರಹಗಳು ಸೇರಿದಂತೆ ಆವರಣದೊಳಗಿರುವ ಅಂಶಗಳು ಪತ್ರಿಕೆಗಾಗಿ ಸೇರ್ಪಡೆ ಮಾಡಿಕೊಂಡಿರುವುದು.)



ಟಿಪೂ ಆಡಳಿತದಲ್ಲಿ ಧಾರ್ಮಿಕ ಸಹಿಷ್ಣುತೆ

ಟಿಪೂ ಮತ್ತು ಹಿಂದೂ ದೇವಾಲಯಗಳು

ಟಿಪೂವಿನ ಸಾಮ್ರಾಜ್ಯದ ನಾಲ್ಕು ಬೇರೆ ಬೇರೆ ದಿಕ್ಕುಗಳಲ್ಲಿರುವ ಬೇರೆ ಬೇರೆ ದೇವಾಲಯಗಳಿಗೆ ಯಾವುದೇ ತಾರತಮ್ಯ ತೋರದೆ ಅವನು ನೀಡಿರುವ ದಾನ ಧರ್ಮ ಗಮನಾರ್ಹ. ಇವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗುತ್ತದೆ. 1) ರಾಜಧಾನಿ ಶ್ರೀರಂಗಪಟ್ಟಣದ ರಂಗನಾಥ ದೇವಾಲಯ; 2) ಮೇಲುಕೋಟೆಯ ನರಸಿಂಹ ದೇವಸ್ಥಾನ ಮತ್ತು ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ನಾರಾಯಣ ಸ್ವಾಮಿ ದೇವಸ್ಥಾನ; 3) ನಂಜನಗೂಡು ತಾಲೂಕು ಕಳಲೆಯ ಲಕ್ಷ್ಮೀಕಾಂತ ದೇವಾಲಯ ಮತ್ತು ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನ.

ರಂಗನಾಥ ದೇವಾಲಯಕ್ಕೆ 7 ಬೆಳ್ಳಿ ಲೋಟಗಳು ಮತ್ತು ಒಂದು ಬೆಳ್ಳಿಯ ಟರ್ಪಿನನ್ನು ನೀಡಿದ್ದನು. ನರಸಿಂಹ ದೇವಾಲಯಕ್ಕೆ ಒಂದು ನಗಾರಿ, ಲಕ್ಷ್ಮೀಕಾಂತ ದೇವಾಲಯಕ್ಕೆ 4 ಬೆಳ್ಳಿ ಲೋಟ ಮತ್ತು ಒಂದು ಬೆಳ್ಳಿ ಫಡಿಗ, ನಂಜನಗೂಡು ಶ್ರೀಕಂಠೇಶ್ವರ ದೇವಾಲಕ್ಕೆ ಚಿನ್ನ ಮಿಶ್ರಿತ ಬೆಳ್ಳಿಯ ಲೋಟಗಳು. ಅದೇ ರೀತಿಯಾಗಿ ಮೇಲುಕೋಟೆ ನಾರಾಯಣ ಸ್ವಾಮಿ ದೇವಸ್ಥಾನವು ಹೊಂದಿರುವ ಕೆಲವು ಆಭರಣಗಳು ಮತ್ತು ಚಿನ್ನ ಮತ್ತು ಬೆಳ್ಳಿಯ ಪಾತ್ರೆಗಳ ಮೇಲಿನ ಶಾಸನಗಳು, ಅವು ಟಿಪೂವಿನ ಅರ್ಪಣೆಗಳೆಂದು ಹೇಳುತ್ತವೆ. ಹಾಗೆಯೇ ಟಿಪೂ ಈ ದೇವಸ್ಥಾನಕ್ಕೆ 1785 ರಲ್ಲಿ ಹನ್ನೆರಡು ಆನೆಗಳನ್ನು ಮತ್ತು 1786 ರಲ್ಲಿ ಒಂದು ನಗಾರಿಯನ್ನೂ ಕೊಟ್ಟನು. ತಳದಲ್ಲಿ ಐದು ವಿಧವಾದ ಅಮೂಲ್ಯವಾದ ಹರಳುಗಳನ್ನು ಕುಂದಣಿಸಿರುವ ರತ್ನದ ಬಟ್ಟಲು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದಲ್ಲಿದೆ. ಅದೂ ಟಿಪೂ ಸುಲ್ತಾನನ ಅರ್ಪಣೆ. ಈ ಎಲ್ಲಾ ದೇಣಿಗೆಗಳನ್ನು/ ದಾನಗಳನ್ನು, ಟಿಪೂವೇ ಮಾಡಿದ್ದಾನೆ ಎನ್ನುವುದಕ್ಕೆ ಈ ಎಲ್ಲಾ ವಸ್ತುಗಳಲ್ಲಿ 'ಟಿಪೂ ಸುಲ್ತಾನ್ ಬಾದ್‌ಶಾಹ್' ಎಂದು ಬರೆಸಲಾಗಿತ್ತು. ಹಾಗಾಗಿ ಇವುಗಳನ್ನು ಅವನ ಉಡುಗೊರೆ ಎಂದು ಹೇಳುವುದಕ್ಕೆ ಪುರಾವೆ. ಈ ಎಲ್ಲಾ ಉಡುಗೊರೆಗಳನ್ನು ಟಿಪೂ ನೀಡಿರುವುದು ಅವನ ಸಾಮ್ರಾಜ್ಯದಲ್ಲಿ ಶಾಂತಿ ಇದ್ದಾಗಲೇ ಹೊರತು ಬಿಕ್ಕಟಿನ ಅಥವಾ ಕಷ್ಟದ ಸಮಯದಲ್ಲಿ ಅಲ್ಲ; ಮತ್ತು ಟಿಪೂವಿಗಿದ್ದ ವೈಯುಕ್ತಿಕ ಆಸಕ್ತಿಯ ನೆಲೆಯಲ್ಲಿ ಸಾಧ್ಯವಾಗಿರುವುದು. ಇದರಿಂದ ಕೆಲವೊಂದು ಅಂಶಗಳನ್ನು ತಿಳಿಯಬಹುದು. 1) ಹಿಂದೂ ದೇವಾಲಯಗಳಿಗೆ ಉಡುಗೊ-ರೆ, ದೇಣಿಗೆಗಳನ್ನು ನೀಡುವ ಪದ್ಧತಿ ಟಿಪೂ ಹೊಸದಾಗಿ ಏನು ಆರಂಭಿಸಿರುವುದಲ್ಲ. ಬದಲಾಗಿ, ಅದು ಅವನ ತಂದೆ ಹೈದರಾಲಿಯ ಕಾಲದಲ್ಲೂ ಚಾಲ್ತಿಯಲ್ಲಿದ್ದು ಅದನ್ನು ಟಿಪೂ ಮುಂದುವರಿಸಿದನು ಅಷ್ಟೆ.

ಮರಾಠರ ಧಾಳಿ-ಲೂಟಿಗೆ ತುತ್ತಾದ ಶೃಂಗೇರಿಯ ಶಾರದಾ ಪೀಠಕ್ಕೆ ರಕ್ಷಣೆ

ಟಿಪೂವಿನ ವ್ಯಕ್ತಿತ್ವ ನಿರೂಪಿಸಲು ಜ್ವಲಂತ ಸಾಕ್ಷಿಯಾಗಿರುವುದು-ಅವನ ಮತ್ತು ಮರಾಠರ ಸಂಬಂಧ. ಅದು ಶೃಂಗೇರಿ ಮಠ ಮತ್ತು ಅಲ್ಲಿನ ಸುತ್ತಮುತ್ತ ಪ್ರದೇಶಗಳಲ್ಲಿ ಮರಾಠರು ನಡೆಸಿದ ಸೈನಿಕ ಕಾರ್ಯಾಚರಣೆ ಹಾಗೂ ಲೂಟಿಯ ಕುರಿತು ಟಿಪೂವಿನ ಉತ್ತರ.



ಅವರ (ಮರಾಠರ) ಜನರಲ್ ಪರಶುರಾಂಭು ಟಿಪೂ ಸಾಮ್ರಾಜ್ಯದ ಪಶ್ಚಿಮ ಭಾಗದ ಕೆಲವು ಪ್ರದೇಶಗಳಿಗೆ ಸಂಬಂಧಿ, ಸಿ ಬ್ರಿಟಿಷರೊಂದಿಗೆ ಪಿತೂರಿ ನಡೆಸಿದ. ಇದು ನಡೆದಿರುವುದು 1971 ಮತ್ತು 92ರಲ್ಲಿ. ಜೂನ್ -ತಿಂಗಳ 1971ರಲ್ಲಿ ಚಿತ್ರದುರ್ಗ ಮಾರ್ಗವಾಗಿ ಜನರಲ್ ಪರಶುರಾಂಭು ಸೈನ್ಯದೊಂದಿಗೆ ಕೆಲವೊಂದು ಪ್ರದೇಶಗಳನ್ನು ಆಕ್ರಮಿಸಲು ಪ್ರಯತ್ನಿಸಿದನು. ಆದರೆ, ಯಶಸ್ವಿಯಾಗಲಿಲ್ಲ. ಅದೇ ವರ್ಷ ಡಿಸೆಂಬರ್‌ನಲ್ಲಿ ಶಿವಮೊಗ್ಗದ ಸುತ್ತಮುತ್ತಲು 1792ರಲ್ಲಿ ಸೈನ್ಯದೊಂದಿಗೆ ಬೀಡುಬಿಟ್ಟು ನಂತರ



ಬಿದನೂರು ಕಡೆ ಧಾವಿಸುತ್ತಾನೆ. ಅವನ ಉದ್ದೇಶ ಆಗಲೇ ಶ್ರೀರಂಗಪಟ್ಟಣವನ್ನು ಸುತ್ತುವರಿದ ಕಾರ್ನವಾಲಿಸನ ಜೊತೆ ಸೇರಿಕೊಂಡು ಟಿಪೂವಿನ ಶಕ್ತಿಯನ್ನು ದುರ್ಬಲಗೊಳಿಸುವುದಾಗಿತ್ತು.

ಶೃಂಗೇರಿಗೆ ಸಂಬಂಧಿಸಿದಂತೆ ಮರಾಠ ಜನರಲ್ ಪರಶುರಾಂಭು ಅಲ್ಲಿನ ಮಠದ ಮೇಲೆ ದಾಳಿ ಮಾಡಿದನು. ಮಠಕ್ಕೆ ಸೇರಿದ ಸಂಪತ್ತನ್ನು ಲೂಟಿ ಮಾಡಿದ್ದಲ್ಲದೇ ಮಠವನ್ನು ಸೇರಿ ಶಾರದಾ ಮಂದಿರವನ್ನು ಅಪವಿತ್ರಗೊಳಿಸಿದನು. ..ಶಾರದಾ ದೇವಿ ಮೂರ್ತಿಯನ್ನು ಪಾದಪೀಠದಿಂದ ಸ್ಥಳಾಂತರಿಸಿ ಮಠದಿಂದ ಸುಮಾರು ಅರುವತ್ತು ಲಕ್ಷ ರೂಪಾಯಿಗಳನ್ನು ದೋಚಿದನು. ಮಠದ ಸ್ವಾಮೀಜೀ ಮೈಸೂರು ಟಿಪೂವಿಗೆ ಮರಾಠರಿಂದ ಆದಂಥ ಉಪಟಳ ಮತ್ತು ಲೂಟಿಯ ಸಮಾಚಾರವನ್ನು ಸವಿಸ್ತಾರವಾಗಿ ಪತ್ರದ ಮೂಲಕ ಕಳುಹಿಸಿದ್ದರು.

ಇದನ್ನು ಓದಿದ ಟಿಪೂ ನೊಂದು ಅನುಕಂಪದಿಂದ ಈ ಕೆಳಗಿನಂತೆ ಸ್ವಾಮಿಜಿಗೆ ಉತ್ತರ ಬರೆದಿದ್ದನು.

"ಕಳುಹಿಸಿದ ಪತ್ರಿಕೆಯಿಂದ ಸಕಲಾಭಿಪ್ರಾಯವು ತಿಳಿಯಲಾಯಿತು. ಮರಾಠೇರ ಕಡೆ ಕುದುರೆಯವರು ಬಂದು ಶೃಂ... ಇದ್ದ ಬ್ರಾಹ್ಮಣರು ಮುಂತಾ... ಬಹಳ ಘಾತಪಾತಗಳ ಮಾಡಿ, ... ಅಮ್ಮನವರನ್ನು ಕಿತ್ತು ಹಾಕಿ, ಮಠದ... ಸಂಪತ್ತನ್ನು ದೋಚಿಕೊಂಡು ಹ... ಪರಿಣಾಮವಾಗಿ ಸ್ವಾಮೀಜೀ ರಕ್ಷಣೆಗಾ... ಉಳಿದ ನಾಲ್ಕು ಜನ ಶಿಷ್ಯರು ಸಹ ... ಬಂದು ಇರುವುದರಿಂದ ಶಾರದ ಅ... ಯುಗಾಂತರದಲ್ಲಿ ಪ್ರತಿಷ್ಠೆ ಆದದ್ದೆ ... ಮತ್ತೊಂದಲ್ಲ. ಈ ದೇವರ ಪ್ರತಿಷ್ಠೆ ಆಗ... ಸರಕಾರದಿಂದ ಕುಮ್ಮಕ್ಕು ಆಗಿ ದೇವ... ಮಾಡಿಸಿದಲ್ಲಿ ಸೂರ್ಯಚಂದ್ರರು ಉಳ್ಳ ಪರ... ಕೀರ್ತಿ ನಿಲ್ಲುತ್ತಾ ಇದ್ದೀತು. ಈ ಬಗ... ಜಿನಸು, ಸಹ ಕೊಡುವ ಹಾಗೆ ಅಪ್ಪಣ... ಸಂತರ್ಪಣೆ ಮಾಡಿಸಿ, ಪ್ರತಿಷ್ಠೆ ಮಾಡಿಸ... ಬರೆದು ಇದ್ದುದು ಸರಿಯಷ್ಟೇ- ... ಸ್ಥಳಕ್ಕೆ ಈಗ್ಗೆ ದ್ರೋಹಿತನಾ ಮಾಡಿದ... ಕಲಿಯುಗದಲ್ಲಿ ಮಾಡಿದ್ದನ್ನು ತ್ವರೆಯ... ಅವರು ಅನುಭವಿಸಬೇಕಾದೀತು. ಗುರ... ಮಾಡಿದ್ದಕ್ಕೆ ವಂಶನಾಶ ಆಗು... ಸಂದೇಹವಿಲ್ಲ. ಈ ತುಂಟ ಜನರು, ... ಮುಂತಾದವರಿಗೆ ಸಂಕಟಪಡಿಸುವವರ... ಪ್ರತ್ಯಕ್ಷ ನೋಡಿಯೇ ಇದ್ದೀರಿ. ಇದಕ್ಕೆ ... ಯಾವ ಪ್ರಕಾರ ಕ್ಷೀಣಗತಿ ಆಗಬೇಕೆ... ಮೇರೆಗೆ ಆಶೀರ್ವಾದ ಮಾಡುವದು.

ಪ್ರಕೃತ ಶಾರದಾ ಅಮ್ಮನವರ ಪ್ರತಿ... ನಗದೂನು 200 ಇನ್ನೂರು ರಹತಿ, ದ... 200 ಇನ್ನೂರು ರಹತಿ, ಉಭಯ... ನಾನೂರು ರಹತಿ ಸರಕಾರದಿಂದ ... ಹಾಗೂ ಇದು ಹೊರತು ಇನ್ನೂ ಏನು... ಬೇಕಾದರೂ ಕ್ರಯಕ್ಕೆ ಕೊಡಿಸುವ ಹಾ... ನಗರದ ಅಸಫನಿಗೆ ಮನಪೂರ್ ಮ... ಮಾಡಿ. ಕಳುಹಿಸಿ ಇದ್ದೀತು. ಮನಪ... ಅಸಫನ ಬಳಿಗೆ ಕಳುಹಿಸಿ, ಮಾಡಿಸಿ ... ಸೇವೆಯು ನಡೆಯುವಂತೆ ಮಾಡಿಸುತ... ಶ್ರೇಯಸ್ಸು ಅಭಿವೃದ್ಧಿ ಆಗುವ ಹಾಗೂ ಶ... ಆಗುವ ಪ್ರಕಾರಕ್ಕೆ (ಸಹ) ತಪಸ್ಸು ಮಾಡಿಕೆ... ಸ್ಥಳದಲ್ಲಿ ಇರುವಂತೆ ಮಾಡಿಸುವುದು."

1793ರ ಇನ್ನೊಂದು ಪತ್ರದಲ್ಲಿ ನ... ನಾಡಿನಲ್ಲಿ ಸ್ವಾಮೀಜಿಗಳ ಇರು... ಪ್ರಾಮುಖ್ಯತೆಯನ್ನು ಪ್ರೀತಿ ಪೂರ್ವ... ಹೀಗೆ ಬರೆಯುತ್ತಾನೆ.

"ಶ್ರೀಮತ್ ಪರಮ ಹ...

ಪುಟ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A ...
BANGALORE-560086. Editor : NITHYANANDASWAMI